
15-30 ಜೂನ್, 2011
KARKAN/2007/20389
12-00
ಪ್ರಸ್ತುತ
ಪಾಕ್ಷಿಕ
ಬಯಲಾದ
ಬಣ್ಣ

ಸತ್ಯಸುದ್ದಿಯ

# ಪ್ರಸ್ತುತ ಪಾಕ್ಷಿಕ

PRASTHUTHA KANNADA FORTNIGHTLY

ಜೂನ್ 15-30, 2011 ಸಂಪುಟ : 5 ಸಂಚಿಕೆ : 11 ಬೆಲೆ : 12.00 ಪುಟ : 60 ಮಂಗಳೂರು




## ಅಂತರಾಳದಲ್ಲಿ...

ಅಂಕಣಗಳು

| ಅಂಕಣಗಳು | |
|---|---|
| ಮೀಟುಗೋಲು | 05 |
| ಪ್ರತಿಕ್ರಿಯೆ | 04 |
| ಸಹಾಬಿಗಳೊಂದಿಗೆ | 24 |
| ರಾಷ್ಟ್ರೀಯ | 56 |
| ಮಿನಿಕಥೆ: | 20 |
| ಸುದ್ದಿಸಮುಚ್ಚಯ | 48 |
| ಇಂಚರ | 34 |
| ಇನಿದನಿ | 37 |

| ಲೇಖನಗಳು | |
|---|---|
| ಬೀಸುತ್ತಿದೆ ಬದಲಾವಣೆಯ ಅಲೆ... | 16 |
| ಮಕ್ಕಾ ಮಸ್ಜಿದ್ ಸ್ಫೋಟ | 22 |
| ಯೋಜನಾ ಆಯೋಗದ... | 30 |
| ಮಾನಸಿಕ ಆರೋಗ್ಯಕ್ಕೆ ಸೂತ್ರಗಳು | 33 |
| ದೇವದಾಸಿ ಪದ್ಧತಿ ಇನ್ನೂ ಜೀವಂತ | 40 |

| ವಿಶೇಷ ಲೇಖನ | |
|---|---|
| ಬಯಲಾದ ಬಣ್ಣ | 08 |


ಪ್ರಧಾನ ಸಂಪಾದಕರು
ಕೆ.ಎಂ. ಶರೀಫ್

ಸಂಪಾದಕರು
ಫಯಾಝ್ ಎನ್.

ಸಹ ಸಂಪಾದಕರು
ಶಬೀರ್ ಕೆ.

ಸಂಪಾದಕ ಮಂಡಳಿ:
ಇಲ್ಯಾಸ್ ಮುಹಮ್ಮದ್. ಅಬ್ದುಲ್ ರಝಾಕ್ ಕೆಮ್ಮಾರ.
ಅಸ್ಲಮ್ ಹಸನ್. ಅಬ್ದುಲ್ ಹಮೀದ್ ಕೆ.ವೈ.
ಶಾಹಿದಾ ಎ., ಇಮ್ತಿಯಾಝ್. ಶಾಹಿದಾ ತಸ್ನೀಮ್.

ಗ್ರಾಫಿಕ್ ಡಿಸೈನರ್
ಎಂ. ಶಬೀರ್

ವ್ಯವಸ್ಥಾಪಕರು
ಅಬ್ದುಲ್ ಖಾದರ್ ಪಿ.

PRASTHUTHA
KANNADA FORTNIGHTLY
Media House
10-23-1009(1), Dr.Ansari Road,
Near Yatheem Khana Hall
Bunder, Mangalore-575001
Ph: 0824-2410454 Fax:0824-2410454
e-mail : prasthutha2007@gmail.com



ಬಾಬಾ ರಾಮ್‌ದೇವ್‌ನ ಕಪಟ ಸತ್ಯಾಗ್ರಹಕ್ಕೆ ಕೇಂದ್ರ ಸರಕಾರ ಬೀಸಿತು ಲಾಠಿ-08



ರಾಷ್ಟ್ರ ರಾಜಕಾರಣದಲ್ಲಿ ಬದಲಾವಣೆಯ ಅಲೆಗಳು ಬೀಸುತ್ತಿವೆಯೇ?-13



ಮಕ್ಕಾ ಮಸ್ಜಿದ್ ಸ್ಫೋಟ ಪ್ರಕರಣಕ್ಕೆ 4 ವರ್ಷ. ಪೊಲೀಸರು ಹಿಂದುತ್ವ ಭಯೋತ್ಪಾದಕರನ್ನು ರಕ್ಷಿಸುತ್ತಿದ್ದಾರೆಯೇ?-22



ಹಿರಿಯರು ಮಾಡಿದ ತಪ್ಪಿಗಾಗಿ ಇನ್ನೂ ಶಿಕ್ಷೆ ಅನುಭವಿಸುತ್ತಿರುವ ದೇವದಾಸಿ ಮಹಿಳೆಯರು-40

Edited, Printed and published by K.M. Shareef, 10-23-1009(1) Dr.Ansari Road, Bunder, Mangalore-575001, Owned by Sthuthi Publications & Information Trust, 10-23-1009(1) Dr.Ansari Road, Bunder, Mangalore-575001, Tel: 0824-2410454, Email- prasthutha2007@gmail.com Printed at Maadhyama communication Ltd, 127, Industrial Area, Bykampady, Mangalore-11.

**ಓದುಗರು, ಬರಹಗಾರರು ತಮ್ಮ ಅಭಿಪ್ರಾಯ, ಲೇಖನ, ಬರಹಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.**
**ಹೊಸ ಕಚೇರಿ ವಿಳಾಸ ಇಂತಿದೆ.**

ಪ್ರಸ್ತುತ ಪಾಕ್ಷಿಕ
ಡಿ.ನಂ.10-23-1009(1)
ಮೀಡಿಯಾ ಹೌಸ್, ಡಾ.ಅನ್ಸಾರಿ ರಸ್ತೆ
ಯತೀಮ್‌ಖಾನಾ ಹಾಲ್ ಬಳಿ, ಬಂದರ್
ಮಂಗಳೂರು-1
**ಈ ಮೇಲ್ ವಿಳಾಸ:**
prasthutha2007@gmail.com

### ಮುಖಪುಟ ವಿನ್ಯಾಸ ಆಕರ್ಷಣೀಯವಾಗಿತ್ತು

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ರಾಜಕೀಯ ಚದುರಂಗದಾಟ' ಲೇಖನವು ಉತ್ತಮವಾಗಿ ಮೂಡಿ ಬಂದಿದೆ. ಮುಖಪುಟ ವಿನ್ಯಾಸವು ಹಲವು ಒಳಾರ್ಥಗಳನ್ನು ಒಳಗೊಂಡು ಆಕರ್ಷಣೀಯವಾಗಿತ್ತು.

ಅಧಿಕಾರ, ತನ್ನ ಅಸ್ತಿತ್ವ ಉಳಿಸಿಕೊಳ್ಳಲು ರಾಜಕೀಯ ಪಕ್ಷಗಳು ಹಾಗೂ ರಾಜಕಾರಣಿಗಳು ಎಂತಹ ಹೇಯ ಕೃತ್ಯಗಳನ್ನು ಮಾಡಲು ಹಿಂಜರಿಯುವುದಿಲ್ಲ. ಒಂದೆಡೆ ಸಂವಿಧಾನವನ್ನೇ ಧಿಕ್ಕರಿಸಿ ಆಡಳಿತ ನಡೆಸುತ್ತಿರುವ ಯಡಿಯೂರಪ್ಪ ನೇತೃತ್ವದ ರಾಜ್ಯ ಸರಕಾರ, ಮತ್ತೊಂದೆಡೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪರದಾಡುತ್ತಿರುವ ರಾಜ್ಯದ ಕಾಂಗ್ರೆಸ್ ಪಕ್ಷ. ರಾಜ್ಯಪಾಲರು ರಾಜ್ಯದ ಬಿಜೆಪಿ ಸರಕಾರವು ಸಂವಿಧಾನ ವಿರೋಧಿ ಆಡಳಿತ ನಡೆಸುತ್ತಿದೆ ಎಂದು ಶಿಫಾರಸು ಮಾಡಿದರೂ ಇದರ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದ ಕೇಂದ್ರ ಸರಕಾರ.

ಹೀಗೆ ನಡೆಯುತ್ತಿರುವ ರಾಜಕೀಯ ಚದುರಂಗದಾಟದಲ್ಲಿ ರಾಜ್ಯದ ಜನತೆ ಬಲಿಪಶುಗಳಾಗುತ್ತಿರುವುದಂತೂ ವಾಸ್ತವ.

ರಾಯನ್ ಫೆರ್ನಾಂಡಿಸ್, ಪಕ್ಷಿಕೆರೆ

### 'ರ್‍ಯಾಗಿಂಗ್' ತಡೆಗೆ ಹೋರಾಟ ಅಗತ್ಯ

ದೈನಂದಿನ ದಿನಗಳಲ್ಲಿ ಶಾಲಾ-ಕಾಲೇಜುಗಳಲ್ಲಿ 'ರ್‍ಯಾಗಿಂಗ್' ಎಂಬ ಪೆಡಂಭೂತಕ್ಕೆ ಅನೇಕ ವಿದ್ಯಾರ್ಥಿಗಳು ಬಲಿಪಶುಗಳಾಗುತ್ತಿದ್ದಾರೆ. ಅದೆಷ್ಟೋ ಪ್ರತಿಭಾವಂತ ವಿದ್ಯಾರ್ಥಿಗಳು ರ್‍ಯಾಗಿಂಗ್‌ನಿಂದಾಗಿ ತಮ್ಮ ಉಜ್ವಲ ಭವಿಷ್ಯವನ್ನೇ ಕಳೆದುಕೊಳ್ಳುತ್ತಿದ್ದಾರೆ. ಇದನ್ನು ತಡೆಗಟ್ಟಲು, ಶಿಕ್ಷಣ ಸಂಸ್ಥೆಗಳು, ಸರಕಾರಗಳು ವಿಫಲವಾಗಿದೆ.




'ರ್‍ಯಾಗಿಂಗ್'ಗೆ ಹೆದರಿ ವಿದ್ಯಾಥಿ-ವಿದ್ಯಾರ್ಥಿನಿಯರು ಶಾಲಾ-ಕಾಲೇಜುಗಳಿಗೆ ಹೋಗಲು ಹಿಂಜರಿಯುತ್ತಿದ್ದಾರೆ. ಶಾಲಾ-ಕಾಲೇಜುಗಳಲ್ಲಿ ಅನೇಕ ಕಾರಣಗಳಿಂದ ಈ ರ್‍ಯಾಗಿಂಗ್ ನಡೆಯುತ್ತಿದೆ. ಮಾಧ್ಯಮಗಳಲ್ಲೂ ವಿವಿಧ ಕಾಲೇಜುಗಳಲ್ಲಿ ನಡೆಯುವ ರ್‍ಯಾಗಿಂಗ್ ಬಗ್ಗೆ ವರದಿಗಳು ಪ್ರಕಟವಾಗುತ್ತಿವೆ.

ಶಾಲಾ-ಕಾಲೇಜುಗಳಲ್ಲಿ ನಡೆಯುತ್ತಿರುವ ರ್‍ಯಾಗಿಂಗ್‌ಗಳನ್ನು ತಡೆಗಟ್ಟಲು ವಿದ್ಯಾರ್ಥಿ ಶಕ್ತಿಯು ಜಾಗೃತಗೊಳ್ಳಬೇಕಾಗಿದೆ. ವಿದ್ಯಾರ್ಥಿಗಳು ಎದುರಿಸುತ್ತಿರುವ ರ್‍ಯಾಗಿಂಗ್ ಸಮಸ್ಯೆಯ ವಿರುದ್ಧ ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳು ಪ್ರಬಲ ಹೋರಾಟ ನಡೆಸಬೇಕಾಗಿದೆ. ಈ ಮೂಲಕ ರ್‍ಯಾಗಿಂಗ್‌ನ್ನು ತಡೆಯಬೇಕಾಗಿದೆ.

ಶಮೀಮಾ, ಮಂಚಿ

### ಬೆಲೆ ತೆತ್ತ ಕಮ್ಯುನಿಸ್ಟ್ ಪಕ್ಷ

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷವು ಅಧಿಕಾರವನ್ನು ಕಳೆದುಕೊಂಡಿದೆ.

ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್ ಪಕ್ಷವು ಜನವಿರೋಧಿ ಆಡಳಿತವನ್ನು ನೀಡಿತ್ತು. ತನ್ನನ್ನು ಸೆಕ್ಯುಲರ್ ಎಂದು ಕರೆಸಿಕೊಳ್ಳಲು ವಿನಾ ಕಾರಣ ಮುಸ್ಲಿಮರ ಮೇಲೆ ದೌರ್ಜನ್ಯ ಎಸಗಿತ್ತು. ಅದೇ ರೀತಿ ಪಶ್ಚಿಮ ಬಂಗಾಳದಲ್ಲಿ ರೈತರ ಭೂಮಿಯನ್ನು ಬಂಡವಾಳಶಾಹಿಗಳಿಗೆ ಧಾರೆ ಎರೆದುಕೊಟ್ಟಿತು. ಇದನ್ನು ಪ್ರತಿಭಟಿಸಿದ ರೈತರ ಮೇಲೆಯೇ ಅಮಾನುಷವಾಗಿ ದೌರ್ಜನ್ಯ ನಡೆಸಿತ್ತು.

ತಾನು ಸೆಕ್ಯುಲರ್ ಎಂಬ ಮುಖವಾಡ ಧರಿಸಿ ರಾಜಕೀಯ ನಡೆಸುತ್ತಿರುವ ಇಂತಹ ಪಕ್ಷಗಳಿಗೆ ಚುನಾವಣೆಯಲ್ಲಾದ ಸೋಲು ನಿಜಕ್ಕೂ ಪ್ರಜಾಪ್ರಭುತ್ವ ಗೆಲುವು.

ಶಬ್ಬೀರ್ ಅಲಿ, ಬೆಂಗಳೂರು

# ಕಲ್ಯಾಣಕ್ಕೆ ಹೊರಟವರು...

ಭ್ರಷ್ಟಾಚಾರದ ಉತ್ತುಂಗಕ್ಕೇರಿರುವ ಕರ್ನಾಟಕ ರಾಜ್ಯವನ್ನು ಮುಂದಿನ ಎರಡು ವರ್ಷಗಳಲ್ಲಿ ಕಲ್ಯಾಣ ರಾಜ್ಯವನ್ನಾಗಿಸುತ್ತೇನೆ ಎಂದು ಘೋಷಿಸಿರುವ ಮುಖ್ಯಮಂತ್ರಿ ಯಡಿಯೂರಪ್ಪ ಯಾರ ಕಲ್ಯಾಣವನ್ನು ಎಂಬುದನ್ನು ಸ್ಪಷ್ಟಪಡಿಸಿರಲಿಲ್ಲ. ವಿರೋಧ ಪಕ್ಷಗಳಿಲ್ಲದೇ ತಮ್ಮದೇ ಅನರ್ಹ ಸ್ಪೀಕರ್ ಮತ್ತು ಸಹೋದ್ಯೋಗಿಗಳೊಂದಿಗೆ ವಿಧಾನಸಭೆ ಅಧಿವೇಶನ ನಡೆಸಿದ ಬಿಜೆಪಿ ಸರಕಾರವು, ತಮಗೆ ಬೇಕಾದಂತೆಲ್ಲಾ ಆರು ವಿಧೇಯಕಗಳಿಗೆ ಅಂಗೀಕಾರ ಗಿಟ್ಟಿಸಿಕೊಂಡಿವೆ. ಏಕಪಾತ್ರಾಭಿನಯದಂತೆ ಮುಕ್ತಾಯಗೊಂಡ ರಾಜ್ಯ ಅಧಿವೇಶನದಲ್ಲಿ ಮುಖ್ಯಮಂತ್ರಿ ಸೇರಿದಂತೆ ಹಲವು ಮಂದಿ ಸಚಿವರು ತಮಗೆ ಬೇಕಾದ ವಿಧೇಯಕವನ್ನು ಮಂಡಿಸಿ ತಮ್ಮ ಕೆಲಸ ಮಾಡಿಸಿಕೊಂಡರು. ಅದರಲ್ಲಿ ಮುಖ್ಯವಾದದ್ದು ಶಾಸಕರ, ಸಚಿವರ ವೇತನ ಹೆಚ್ಚಳಕ್ಕೆ ಸಂಬಂಧಿಸಿದ ವಿಧೇಯಕ.

ಕರ್ನಾಟಕ ಸಚಿವರುಗಳ ಸಂಬಳ ಮತ್ತು ಭತ್ತೆ (ತಿದ್ದುಪಡಿ) ವಿಧೇಯಕ-2011ನ್ನು ಮುಖ್ಯಮಂತ್ರಿ ಯಡಿಯೂರಪ್ಪ ಮಂಡಿಸಿ ಅಂಗೀಕಾರ ಪಡೆದುಕೊಂಡರು. ಇದರ ಪ್ರಕಾರ ಮುಖ್ಯಮಂತ್ರಿ ಗಿಟ್ಟಿಸಿಕೊಳ್ಳುತ್ತಿದ್ದ ಮಾಸಿಕ 12 ಸಾವಿರ ರೂಪಾಯಿಯನ್ನು 30 ಸಾವಿರ ರೂಪಾಯಿವರೆಗೆ ಹೆಚ್ಚಿಸಲಾಗುತ್ತದೆ. ಉಳಿದಂತೆ ಸಚಿವರುಗಳಿಗೆ 10ಸಾವಿರ ರೂಪಾಯಿಯಿಂದ 25 ಸಾವಿರ ರೂಪಾಯಿಗೆ ಏರಿಸಲಾಗಿದೆ. ಇದರೊಂದಿಗೆ ಸಭಾಧ್ಯಕ್ಷ ಹಾಗೂ ವಿರೋಧ ಪಕ್ಷದವರ ವೇತನ ಕೂಡ 10 ರಿಂದ 20 ಸಾವಿರ ರೂಪಾಯಿಗೆ ಏರಿಕೆಯಾಗಿದೆ. ಇದಲ್ಲದೆ 500 ಲೀಟರ್‌ವರೆಗೆ ಇದ್ದ ಪೆಟ್ರೋಲ್ ಮಿತಿಯನ್ನು 750 ಲೀಟರ್‌ಗೆ ಹೆಚ್ಚಿಸಲಾಗಿದೆ. ಈ ಎಲ್ಲ ಹೆಚ್ಚಳದಿಂದಾಗಿ ಸರಕಾರದ ಖಜಾನೆಗೆ 2,347 ಲಕ್ಷ ರೂಪಾಯಿ ಹೆಚ್ಚುವರಿ ಹೊರೆಯಾಗಲಿದೆ. ಮುಖ್ಯಮಂತ್ರಿಯ ಕಲ್ಯಾಣ ರಾಜ್ಯದ ಫಲಾನುಭವಿಗಳು ಯಾರು ಎಂಬುದು ಅಧಿವೇಶನದ ಬಳಿಕ ಸ್ಪಷ್ಟಗೊಂಡಂತಾಗಿದೆ.

ಬಿಜೆಪಿ ಸರಕಾರವು ಕಳೆದ ಮೂರು ವರ್ಷಗಳಲ್ಲಿ ನಡೆಸಿಕೊಂಡು ಬಂದಿರುವ ಭ್ರಷ್ಟಾಚಾರ, ಮುಖ್ಯಮಂತ್ರಿ ಸ್ವಜನಪಕ್ಷಪಾತ, ಸ್ಪೀಕರ್ ದುರ್ಬಳಕೆ ಇದ್ಯಾವುದನ್ನೂ ಪ್ರಶ್ನಿಸಲು ವಿರೋಧ ಪಕ್ಷಗಳೇ ಇಲ್ಲದ ಹೊತ್ತಿನಲ್ಲೂ ಬಿಜೆಪಿ ಸರಕಾರವು ವಿಧೇಯಕಗಳನ್ನು ಮಂಡಿಸುತ್ತಿರುವುದೇ ಅತಿದೊಡ್ಡ ಭ್ರಷ್ಟಾಚಾರವಾಗಿದೆ. ಕಳೆದ ಮೂರು ವರ್ಷಗಳ ವಿದ್ಯಮಾನವನ್ನು ಗಮನಿಸಿದರೆ ಬಿಜೆಪಿ ಸರಕಾರವು ಈವರೆಗೆ ಏಕಪಕ್ಷೀಯವಾಗಿಯೇ ವಿಧೇಯಕಗಳಿಗೆ ಅಂಗೀಕಾರ ಪಡೆದುಕೊಂಡಿದೆ. ಒಂದೋ ವಿರೋಧ ಪಕ್ಷಗಳು ಗದ್ದಲದಲ್ಲಿ ತೊಡಗಿರುವಾಗಲೇ ವಿಧೇಯಕಗಳು ಅಂಗೀಕಾರಗೊಳ್ಳುತ್ತಿರುವುದನ್ನು ಗಮನಿಸಬಹುದು. ಇವೆಲ್ಲವೂ ಫ್ಯಾಶಿಸ್ಟ್ ಅಜೆಂಡಾದ ಭಾಗವಾಗಿ ಅಂಗೀಕರಿಸಲ್ಪಡುತ್ತಿರುವ ವಿಧೇಯಕಗಳು ಎಂಬುದನ್ನು ಗಮನಿಸಲೇಬೇಕು.

ರಾಜ್ಯದ ಕಲ್ಯಾಣಕ್ಕೆ ಹೊರಟವರ ಪರಿಸ್ಥಿತಿ ಹೀಗಾದರೆ ಇನ್ನು ರಾಷ್ಟ್ರದ ಕಲ್ಯಾಣಕ್ಕೆ ಹೊರಟಿರುವ ಯೋಗ ಗುರು ರಾಮ್‌ದೇವ್ ಅವರ ನಡೆಯೂ ಸಂಶಯಾಸ್ಪದವಾದದ್ದು. ಸ್ವತಹ ಭ್ರಷ್ಟಾಚಾರದ ಆರೋಪ ಹೊಂದಿ, ಭ್ರಷ್ಟಾಚಾರಿಗಳನ್ನು ಜೊತೆಯಲ್ಲಿ ಸೇರಿಸಿಕೊಂಡು ದೇಶದ ಕಲ್ಯಾಣಕ್ಕೆ ಹೊರಟಿರುವ ರಾಮ್‌ದೇವ್‌ಗೆ ರಾಜ್ಯದ ಕಲ್ಯಾಣಪ್ರಿಯರಿಂದ ಬೆಂಬಲ ವ್ಯಕ್ತವಾಗಿರುವುದು ಸಹಜವೇ ಆಗಿದೆ. ಭ್ರಷ್ಟಾಚಾರದ ವಿರುದ್ಧದ ಸತ್ಯಾಗ್ರಹ ನಡೆಸಲು ಎರಡು ಕೋಟಿ ರೂಪಾಯಿ ಮಾಸಿಕ ಬಾಡಿಗೆ ಇರುವ ಐಶಾರಾಮಿ ವೇದಿಕೆ, ಎರಡೂವರೆ ಲಕ್ಷ ಚದರ ಅಡಿ ವಿಸ್ತಾರದ ಹವಾನಿಯಂತ್ರಿತ ವೇದಿಕೆ, 16 ಮಂದಿ ವೈದ್ಯರು ಕಾರ್ಯನಿರ್ವಹಿಸಬಹುದಾದ ಆಸ್ಪತ್ರೆ, ಸುಸಜ್ಜಿತ ಐಸಿಯು ಘಟಕ ಇವೆಲ್ಲವನ್ನು ಸಜ್ಜುಗೊಳಿಸಿರುವ ರಾಮ್‌ದೇವ್ ಹೊರಟಿರುವುದು ಯಾರ ಕಲ್ಯಾಣಕ್ಕಾಗಿ? ಇದಕ್ಕೆಲ್ಲ ಹಣಕಾಸು ಯಾರು ನೀಡಿರಬಹುದು? ಎಂದು ಅವಲೋಕಿಸಿದರೆ ಮತ್ತೆ ಸಿಗುವ ಉತ್ತರ ಅದೇ ಕಲ್ಯಾಣಪ್ರಿಯರು.

ಹೌದು, ರಾಜ್ಯದಲ್ಲಿ ಬಿಜೆಪಿ ಸರಕಾರ ಬಂದಾಗಿನಿಂದ ಸರಕಾರದ ಪ್ರತಿಯೊಬ್ಬ ಶಾಸಕ, ಸಚಿವರು ಅಪಾರ ಆಸ್ತಿಪಾಸ್ತಿಯನ್ನು ಸಂಪಾದಿಸಿಕೊಂಡಿದ್ದಾರೆ. ತಿಂಗಳಿಗೆ ಮಾಸಿಕವಾಗಿ ಸಿಗುತ್ತಿದ್ದ 10 - 15 ಸಾವಿರ ರೂಪಾಯಿ ವೇತನದಿಂದ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಪಾಸ್ತಿ ಸಂಪಾದಿಸಲು ಸಾಧ್ಯವೇ? ಇಂಥವರಿಂದ ರಾಜ್ಯದ ಕಲ್ಯಾಣವನ್ನಾಗಲೀ, ರಾಷ್ಟ್ರದ ಕಲ್ಯಾಣವನ್ನಾಗಲೀ ನಿರೀಕ್ಷಿಸಿದರೆ ಮೂರ್ಖತನವಾದೀತು.

### ಶಿಕ್ಷಣದಿಂದ ಉತ್ತಮ ಸಮಾಜದ ನಿರ್ಮಾಣ

''ವಿದ್ಯಾಹೀನಂ ಪಶು ಸಮಾನಂ'' ಎಂಬ ಗಾದೆ ಮಾತಿನಂತೆ ವಿದ್ಯೆ ಇಲ್ಲದವನಿಗೆ ಈ ಸಮಾಜದಲ್ಲಿ ಯಾವುದೇ ಬೆಲೆ ಇಲ್ಲ. ಅದರಲ್ಲೂ ಇಂದಿನ ಈ ಸಮಾಜದಲ್ಲಿ ಯಾವುದೇ ಒಬ್ಬ ವ್ಯಕ್ತಿಯು ಗೌರವದಿಂದ ಬಾಳಿ, ಬದುಕಬೇಕಾದರೆ ಶಿಕ್ಷಣ ಪಡೆದಿರುವುದು ಅತ್ಯಗತ್ಯವಾಗಿದೆ.

ಯಾವುದೇ ಒಬ್ಬ ಅವಿದ್ಯಾವಂತನು ಈ ಸಮಾಜದಲ್ಲಿ ಅವಮಾನ, ಮೋಸ, ವಂಚನೆಗಳಿಗೆ ಒಳಗಾಗುತ್ತಾನೆಂದರೆ ಅದು ಶಿಕ್ಷಣದ ಕೊರತೆಯಿಂದ ಎಂಬುದನ್ನು ಸುಲಭವಾಗಿ ಒಪ್ಪಿಕೊಳ್ಳಬಹುದು. ಅಲ್ಲದೆ ತನ್ನ ಮೇಲಾಗುತ್ತಿರುವ ಅಕ್ರಮಗಳಿಗೆ ಯಾವುದೇ ಪ್ರತಿಕ್ರಿಯೆ ನೀಡುವಲ್ಲಿ ಆತ ವಿಫಲನಾಗುತ್ತಾನೆ. ಮೂಕ ಪ್ರಾಣಿಯಂತೆ ಎಲ್ಲಾ ವೇದನೆಗಳನ್ನು ಸಹಿಸಿಕೊಂಡು ದಿನಕಳೆದಂತೆ ಅವಮಾನಗಳನ್ನು ತಾಳಲಾಗದೆ ಆತ ಕುಗ್ಗಿ ಹೋಗುತ್ತಾನೆ.

ಆದುದರಿಂದ ಇವೆಲ್ಲಾ ತೊಂದರೆ, ಅವಮಾನಗಳಿಗೆ ಇರುವಂತಹ ಪರಿಹಾರ ಮಾರ್ಗ ಶಿಕ್ಷಣ ಪಡೆಯುವುದು. ಶಿಕ್ಷಣದಿಂದ ಒಂದು ಉತ್ತಮ ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಸಾಜಿದಾ ಬಾನು, ಬಿ.ಸಿ.ರೋಡ್

### ಇಸ್ಲಾಮಿನಲ್ಲಿ ಸ್ತ್ರೀ ಶಿಕ್ಷಣ

''ಹೆಣ್ಣೊಂದು ಕಲಿತರೆ ಮನೆಯೊಂದು ಕಲಿತಂತೆ'' ಎಂಬ ಮಾತಿನಂತೆ ಒಬ್ಬಳು ಹೆಣ್ಣು ವಿದ್ಯೆ ಕಲಿತು ಅವಳು ತನ್ನ ಕುಟುಂಬಕ್ಕೆ ಅದನ್ನು ಹಂಚುತ್ತಾಳೆ. ಒಂದು ಕುಟುಂಬವು ಸುಶಿಕ್ಷಿತವಾಗಬೇಕಾದರೆ ಆ ಕುಟುಂಬದ ಹೆಣ್ಣು ಮೊದಲು ಶಿಕ್ಷಣವನ್ನು ಪಡೆದಿರಬೇಕು.

ಹೀಗೆ ಒಂದು ಕುಟುಂಬವು ಸುಶಿಕ್ಷಿತವಾದರೆ ಒಂದು ಸಮುದಾಯವೂ ಸುಶಿಕ್ಷಿತವಾದಂತೆ. ಇದರಿಂದಾಗಿ ಒಬ್ಬಳು ಹೆಣ್ಣಿಗೆ ಶಿಕ್ಷಣ ನೀಡುವುದರಿಂದ ಎಷು ಪ್ರಯೋಜನವಿದೆ ಎಂಬುದನ್ನು ನಾವು ಅರಿತುಕೊಳ್ಳಬಹುದು.

ಹಿಂದಿನ ಕಾಲದಲ್ಲಿ (ಪ್ರವಾದಿ ಮುಹಮ್ಮದ್(ಸ)ರವರ ಕಾಲದಲ್ಲಿ) ಒಂದು ಗಂಡಿಗೂ, ಹೆಣ್ಣಿಗೂ ಸರಿಸಮಾನವಾದ ವಿದ್ಯೆಯನ್ನು ನೀಡುತ್ತಿದ್ದರು. ಆದರೆ ಹೆಣ್ಣಿಗೆ ಬೇರೆ ಕ್ಷೇತ್ರ, ಗಂಡಿಗೆ ಬೇರೆ ಕ್ಷೇತ್ರ ಎಂಬ ವಿಂಗಡೆಯನ್ನು ಮಾಡಿ ವಿದ್ಯೆಯನ್ನು ಕಲಿಸುತ್ತಿದ್ದರು.

ಇಂದಿನ ಸಮಾಜದಲ್ಲಿ ಹೆಣ್ಣು ಶಿಕ್ಷಣ ಪಡೆಯುವುದು ಅತಿ ಮುಖ್ಯವಾಗಿದೆ. ಇದಕ್ಕೆ ಸಮಾಜದಲ್ಲಿ ವಿಶೇಷ ಪ್ರಾಮುಖ್ಯತೆ ದೊರೆಯಲಿ.

ರಶೀನಾ ಬಾನು, ಬಂಟ್ವಾಳ




### ಬುರ್ಖಾ ನಿಷೇಧ ಎಷ್ಟರ ಮಟ್ಟಿಗೆ ಸರಿ

ಬುರ್ಖಾ ಧಾರಣೆ ಮುಸ್ಲಿಮ್ ಮಹಿಳೆಯರಿಗೆ ಕಡ್ಡಾಯವಾಗಿದೆ. ಇದು ಇಸ್ಲಾಂ ಧರ್ಮದ ಪ್ರತಿಯೊಬ್ಬ ಮಹಿಳೆಗೂ ಅನ್ವಯವಾಗುತ್ತದೆ.

ಬುರ್ಖಾ ಧರಿಸುವುದು ಕಡ್ಡಾಯ ಅನ್ನುವುದಕ್ಕಿಂತಲೂ ಮೊದಲು ಬುರ್ಖಾ ಮಹಿಳೆಯ ರಕ್ಷಾ ಕವಚವಾಗಿದೆ. ಪುರುಷರ ವಕ್ರದೃಷ್ಟಿಯು ಮಹಿಳೆಯ ಮೇಲೆ ಬೀಳುವುದನ್ನು ಇದು ತಡೆಯುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ ಕೆಲವು ಮಾಧ್ಯಮಗಳು ಮತ್ತು ಪೂರ್ವಾಗ್ರಹ ಪೀಡಿತ ಸಂಘಟನೆಗಳು ಬುರ್ಖಾದ ಬಗ್ಗೆ ಇಲ್ಲ ಸಲ್ಲದ ವಿಚಾರಗಳನ್ನು ಪ್ರಚಾರ ಪಡಿಸುತ್ತಿವೆ. ಬುರ್ಖಾ ನಿಷೇಧಿಸುವುದರಿಂದ ಮುಸ್ಲಿಮರ ಆಚಾರ ವಿಚಾರಗಳಿಗೆ ಅಡ್ಡಿಯುಂಟು ಮಾಡುವುದಲ್ಲದೇ ಮುಸ್ಲಿಮ್ ಮಹಿಳೆಯರ ಮೇಲೆ ಪರೋಕ್ಷವಾಗಿ ದೌರ್ಜನ್ಯ ಎಸಗಿದಂತೆ.

ಬುರ್ಖಾ ನಿಷೇಧದ ವಿರುದ್ಧ ಪ್ರತಿಯೊಬ್ಬ ಮುಸ್ಲಿಮ್ ಮಹಿಳೆಯು ಜಾಗೃತಳಾಗಿ ಧ್ವನಿ ಎತ್ತಬೇಕಾಗಿದೆ.

ಸಮೀದಾ ಬಾನು, ನಂದರಬೆಟ್ಟು

### ರಾಜಕಾರಣಿಗಳ ಮುಖವಾಡ ತೆರೆದಿಟ್ಟ ಲೇಖನ

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಕೋಟ್ಯಾಧಿಪತಿಗಳಾಗಲು ಜನಸೇವೆಯ ಮುಖವಾಡ' ಲೇಖನ ಅರ್ಥಪೂರ್ಣವಾಗಿತ್ತು.

ಇತ್ತೀಚಿನ ರಾಜಕೀಯ ಪರಿಸ್ಥಿತಿಯನ್ನು ಗಮನಿಸಿದರೆ ಹೆಚ್ಚಿನೆಲ್ಲಾ ರಾಜಕಾರಣಿಗಳು ತಮ್ಮ ಸ್ವಾರ್ಥ ಹಿತಾಸಕ್ತಿಗಾಗಿ ಹಾಗೂ ದೇಶದ ಸಂಪತ್ತನ್ನು ಲೂಟಿ ಮಾಡಲೆಂದೇ ರಾಜಕೀಯವನ್ನು ಪ್ರವೇಶಿಸುತ್ತಿದ್ದಾರೆ.

ತಾನು ಅಧಿಕಾರಕ್ಕೇರುವ ಮೊದಲು ಆತ ಅಷ್ಟೊಂದು ಶ್ರೀಮಂತನಾಗಿರುವುದಿಲ್ಲ. ಅಧಿಕಾರಕ್ಕೇರಿದ ಬಳಿಕ ಕೆಲವೇ ಸಮಯದಲ್ಲಿ ಒಬ್ಬ ರಾಜಕಾರಣಿ ಶಾಸಕ ಅಥವಾ ಸಚಿವನಾದರೆ ಸಾಕು. ತನ್ನ ಅದೃಷ್ಟದ ಬಾಗಿಲು ತೆರೆಯಿತು ಎಂದೇ ಆತ ಭಾವಿಸಿಕೊಳ್ಳುತ್ತಾನೆ. ಅಧಿಕಾರಕ್ಕೇರುವ ಮೊದಲು ಒಬ್ಬ ರಾಜಕಾರಣಿ ಜನಸೇವೆಯ ಮಾತುಗಳನ್ನಾಡುತ್ತಿದ್ದರೆ ಅಧಿಕಾರಕ್ಕೇರಿದ ಬಳಿಕ ದೇಶದ ಸಂಪತ್ತನ್ನು ಲೂಟಿ ಮಾಡುವ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ.

ಈ ಲೇಖನದಲ್ಲಿ ಉಲ್ಲೇಖಿಸಿರುವಂತೆ 'ರಾಜಕೀಯವೆಂಬುದು ಈಗ ಜನಸೇವೆಯಾಗಿ ಉಳಿದಿಲ್ಲ' ಎಂಬುದನ್ನು ಖಡಾ ಖಂಡಿತವಾಗಿ ಹೇಳಬಹುದು.

## ಸಾಧಕರಿಗೆ ಅಭಿನಂದನೆಗಳು

ಈ ಬಾರಿಯ ಪಿಯು ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನಿಯಾಗಿ ಸಾಧನೆಗೈದ ಇಸ್ರಾರ್ ಬಾನು ಬಳ್ಳಾರಿ ಅವರಿಗೆ ಅಭಿನಂದನೆಗಳು.

ಬಡತನವು ಯಾವುದೇ ಕಾರಣಕ್ಕೂ ಸಾಧನೆಗೆ ಅಡ್ಡಿಯುಂಟು ಮಾಡುವುದಿಲ್ಲ ಎಂಬ ಮಾತನ್ನು ಇಸ್ರಾರ್‌ರವರು ಸಾಬೀತುಪಡಿಸಿದ್ದಾರೆ. ಬಡತನ ಎಂಬ ಕಾರಣವನ್ನು ನೀಡುತ್ತಾ ವಿದ್ಯಾಭ್ಯಾಸವನ್ನು ತೊರೆಯುವ ಮಂದಿ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಸಾಧಕಿ ಇಸ್ರಾರ್ ಉತ್ತಮ ಸಂದೇಶವನ್ನು ರವಾನಿಸಿದ್ದಾರೆ. ಅದೇ ರೀತಿ ಸಮುದಾಯಕ್ಕೂ ಒಂದು ರೀತಿಯ ಚೈತನ್ಯವನ್ನು ತುಂಬಿದ್ದಾರೆ.

ಈ ಬಾರಿಯ ಪಿಯು ವಿಜ್ಞಾನ ಪರೀಕ್ಷೆಯಲ್ಲಿ ಶೇ.94.5 ಅಂಕ ಪಡೆದು ಸಾಧನೆ ಮಾಡಿದ ಫಾತಿಮಾ ರಈಸಾರಿಗೂ, ಅದೇ ರೀತಿ ಈ ಬಾರಿಯ ಶೈಕ್ಷಣಿಕ ಸಾಲಿನಲ್ಲಿ ಸಾಧನೆಗೈದ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳು.

ಪ್ರತಿಭೆಗಳನ್ನು ಗುರುತಿಸಿಕೊಂಡು ಅವರ ಸಾಧನೆಯನ್ನು ಪರಿಚಯಿಸಿಕೊಟ್ಟ 'ಪ್ರಸ್ತತ ಪಾಕ್ಷಿಕ'ಕ್ಕೂ ಅಭಿನಂದನೆಗಳು.

'ಪ್ರಸ್ತುತ' ಓದುಗ, ಸೌದಿ ಅರೇಬಿಯಾ

## ಮೂರು ವರ್ಷಗಳ ಜನವಿರೋಧಿ ಆಡಳಿತ

ಕಳೆದ ಸಂಚಿಕೆಯ ಸಂಪಾದಕೀಯ ಬರಹವು ಯಡಿಯೂರಪ್ಪ ನೇತೃತ್ವದ ರಾಜ್ಯದ ಬಿಜೆಪಿ ಸರಕಾರದ ಕರಾಳತೆಯನ್ನು ತೆರೆದಿಟ್ಟಿದೆ.

ಯಡಿಯೂರಪ್ಪ ಸರಕಾರವು ನಡೆಸಿದ ಮೂರು ವರ್ಷಗಳ ಆಡಳಿತದಲ್ಲಿ ಅನ್ಯಾಯ, ಅಕ್ರಮ, ಅವ್ಯವಹಾರ, ಪೊಲೀಸ್ ದೌರ್ಜನ್ಯ, ಗೋಲಿಬಾರ್, ಅಲ್ಪಸಂಖ್ಯಾತರ ಧಾರ್ಮಿಕ ಕೇಂದ್ರಗಳ ಮೇಲೆ ದಾಳಿ, ಅಮಾಯಕ ಮೇಲೆ ದೌರ್ಜನ್ಯ, ಭ್ರಷ್ಟಾಚಾರದಂತಹ ಕರಾಳತೆಯೇ ಎದ್ದು ಕಾಣುತ್ತಿವೆ. ಈ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಬೇಲಿಯೇ ಎದ್ದು ಹೊಲ ಮೇಯುತ್ತಿದೆ.

ಆಪರೇಷನ್ ಕಮಲ ನಡೆಸಿ ಅನೈತಿಕ ರಾಜಕಾರಣದ ಮೂಲಕ ಅಧಿಕಾರಕ್ಕೇರಿದ ರಾಜ್ಯದ ಬಿಜೆಪಿ ಸರಕಾರವು ಆಡಳಿತದುದ್ದಕ್ಕೂ ಜನತೆಯನ್ನು ವಂಚಿಸಿತು. ಶಾಸಕ, ಮಂತ್ರಿಗಳೊಳಗೇ ಪರಸ್ಪರ ಭಿನ್ನಾಭಿಪ್ರಾಯ, ರೆಸಾರ್ಟ್ ರಾಜಕೀಯ, ಪಕ್ಷದೊಳಗೇ ಕಚ್ಚಾಟ, ಬಂಡಾಯದಂತಹ ಡೊಂಬರಾಟಗಳೇ ರಾರಾಜಿಸಿದವು.

ರಾಜ್ಯ ಸರಕಾರವು ಈ ರಾಜ್ಯದ ರೈತರನ್ನು ಬೀದಿಗೆ ತಳ್ಳಿದೆ. ನೆರೆ ಸಂತ್ರಸ್ತರನ್ನು ಬೀದಿಪಾಲು ಮಾಡಿದೆ. ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಜನಸಾಮಾನ್ಯರನ್ನು ವಂಚಿಸಿದೆ. ರಾಜ್ಯದ ಗಣಿ ಸಂಪತ್ತನ್ನು ಲೂಟಿ ಮಾಡಿದೆ. ರಾಜ್ಯ ಸರಕಾರದ ಆಡಳಿತದ ಕಳೆದ ಮೂರು ವರ್ಷಗಳು ಜನವಿರೋಧಿಯಾಗಿದೆ ಎಂಬುದಂತೂ ಸ್ಪಷ್ಟವಾಗಿದೆ.

ಮುಹ್ಸಿನ್, ಉಡುಪಿ

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

2010-11ನೇ ಸಾಲಿನ ಎಸ್ಸೆಸ್ಸೆಲ್ಸಿ (ಕನ್ನಡ ಮತ್ತು ಆಂಗ್ಲ ಮಾಧ್ಯಮ) ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ದ.ಕ. ಮತ್ತು ಉಡುಪಿ ಜಿಲ್ಲೆಯ ಮುಸ್ಲಿಂ ವಿದ್ಯಾರ್ಥಿಗಳಿಂದ ಜಮೀಯ್ಯತುಲ್ ಫಲಾಹ್ ಸಂಸ್ಥೆಯ ವತಿಯಿಂದ ನೀಡಲಾಗುವ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ತಮ್ಮ ಹೆಸರು, ಹೆತ್ತವರ ಹೆಸರು, ಪಾಸ್‌ಪೋರ್ಟ್ ಅಳತೆಯ ಫೋಟೊ, ಜನನ ದಿನಾಂಕ, ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ ಮುಂತಾದ ಸ್ವವಿವರಗಳನ್ನೊಳಗೊಂಡ ಅರ್ಜಿಯೊಂದಿಗೆ ಮತ್ತು ಎಸ್ಸೆಸ್ಸೆಲ್ಸಿ/ ಪಿಯುಸಿಯ ದೃಢೀಕೃತ ಅಂಕಪಟ್ಟಿಯ ನಕಲು ಪ್ರತಿಯನ್ನು ಕಳುಹಿಸಬೇಕು.

ಅರ್ಜಿ ಸಲ್ಲಿಸಬೇಕಾದ ವಿಳಾಸ: ಜಮೀಯ್ಯತುಲ್ ಫಲಾಹ್ ಮುಖ್ಯ ಕಚೇರಿ, ಬಾಲಿಕಾಶ್ರಮ ರಸ್ತೆ, ಅಂಚೆ -ಕಂಕನಾಡಿ, ಮಂಗಳೂರು 575002, (0824-2431604) ಅಥವಾ ಈ ಮೇಲ್ ವಿಳಾಸ office@jamiyyatulfalah.org <mailto:office@jamiyyatulfalah.org> ಇಲ್ಲಿಗೆ ಜುಲೈ 10ರೊಳಗೆ ಕಳುಹಿಸಿಕೊಡಬೇಕು.

ಜುಲೈ 24ರಂದು ನಡೆಯುವ ಸಂಸ್ಥೆಯ ವಾರ್ಷಿಕ ಮಹಾಸಭೆಯಲ್ಲಿ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಖಲೀಲ್ ಅಹ್ಮದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಯಲಾದ ಬಣ್ಣ...

● ಫಯಾರುಝ್ ಎನ್.



ಬಾಬಾ ರಾಮ್‌ದೇವ್ ಕಪಟ ಸತ್ಯಾಗ್ರಹದಲ್ಲಿ ವಿಶ್ವ ಹಿಂದೂ ಪರಿಷತ್ ಮಾಜಿ ನಾಯಕಿ, ಬಾಬಾರಿ ಮಸೀದಿ ಧ್ವಂಸದ ಆರೋಪಿ ಸಾಧ್ವಿ ಋತಂಬರ.

ರಾಮದೇವ್

ಪೊಲೀಸರು ಬಾಬಾ ಎಂದರೂ ಮಾರುವೇಷದಲ್ಲಿ ಪರಾರಿಯಾಗಲೆತ್ನಿಸಿದ ರಾಮದೇವ್‌ರ 'ಹೋರಾಟ'ವನ್ನು ಜನಾಂದೋಲನ ಎನ್ನಬಹುದೇ?

''ಭಾರತ ಜಾತ್ಯತೀತ ರಾಷ್ಟ್ರವಲ್ಲ, ಆಧ್ಯಾತ್ಮಿಕ ರಾಷ್ಟ್ರ' ಎನ್ನುವ ಮೂಲಕ ಸಂವಿಧಾನವನ್ನೇ ಒಪ್ಪದ ಯೋಗ ಗುರು ರಾಮದೇವ್‌ರನ್ನು ಏಕಾಏಕೀ ದೇಶಪ್ರೇಮಿ, ಹೋರಾಟಗಾರನೆಂಬಂತೆ ಚಿತ್ರಿಸುತ್ತಿರುವುದರ ಹಿಂದಿರುವ ರಾಜಕೀಯವೇನು?

ರಾಮ್‌ಲೀಲಾ ಮೈದಾನವು ಇನ್ನೊಂದು ಗುಜರಾತ್ ನಿರ್ಮಾಣಕ್ಕೆ ವೇದಿಕೆಯಾಗಿತ್ತೇ?

200ಕ್ಕೂ ಹೆಚ್ಚು ಆಯುರ್ವೇದ ಔಷಧಿತಯಾರಿಕಾ ಕಂಪೆನಿ, ಸಾವಿರಾರು ಎಕರೆ ಭೂಮಿ, ಕೋಟ್ಯಂತರ ರೂಪಾಯಿ ಆಸ್ತಿ ಹೊಂದಿರುವ ರಾಮದೇವ್ ಜನರ ನಡುವೆ ಆಧ್ಯಾತ್ಮಿಕ ಗುರು ಅಥವಾ ಸನ್ಯಾಸಿ ಎನಿಸಿಕೊಂಡಿದ್ದು ಹೇಗೆ?

ರಾಮ್‌ದೇವ್‌ರ ಸುತ್ತಲೂ ಆರೆಸ್ಸೆಸ್, ಬಿಜೆಪಿ ಕಾರ್ಯಕರ್ತರೇ ಬೆಂಗಾವಲಾಗಿರುವುದು ಯಾತಕ್ಕಾಗಿ?

ಭೋಪಾಲ್‌ನಲ್ಲಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿಗ್ವಿಜಯ್ ಸಿಂಗ್ ಅವರ ಮನೆಯ ಮೇಲೆ ಕ್ಷಿಪ್ರವಾಗಿ ದಾಳಿ ನಡೆಸಲು ಸಾಧ್ಯವಾದದ್ದು ಹೇಗೆ?

ಹೀಗೆ ಹಲವಾರು ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಲೇ ಕಳೆದ ಒಂದು ವಾರದಿಂದ ದೇಶದಲ್ಲಿ 'ಫ್ಯಾಷಿಸಂ- ಭ್ರಷ್ಟಾಚಾರದ' ನಡುವಿನ ಆಂತರಿಕ ಸಂಘರ್ಷವನ್ನು ವಿಶ್ಲೇಷಿಸಬೇಕಾಗಿದೆ. ಈ ಹಿಂದೆ ಯೋಗಗುರುವಿಗೆ ಸಾಕಷ್ಟು ಪ್ರಚಾರ ನೀಡಿದ್ದ ಮಾಧ್ಯಮಗಳೇ ಈಗ ರಾಮ್‌ದೇವ್‌ರ ಹೋರಾಟಕ್ಕೂ ಪ್ರಚಾರ ಒದಗಿಸುತ್ತಿವೆ. ಮಾಧ್ಯಮಗಳಲ್ಲಿ ಪ್ರಸಾರ ಆಗದೇ ಇರುವ ಕೆಲವೊಂದು ಗುಪ್ತ ಅಜೆಂಡಾಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ದೇಶದಲ್ಲಿ ಮತ್ತೊಂದು ಖತರ್‌ನಾಕ್ ಟ್ರಿಕ್ಸ್ ನಡೆದಿರುವುದು ಸ್ಪಷ್ಟವಾಗುತ್ತದೆ. ರಾಮ್‌ಲೀಲಾ ಮೈದಾನದಲ್ಲಿ ರಾತ್ರೋರಾತ್ರಿ ನಡೆದ ಅನಿರೀಕ್ಷಿತ ಬೆಳವಣಿಗೆಯನ್ನು ಅಷ್ಟು ಸುಲಭವಾಗಿ ಪರಿಗಣಿಸುವಂತಿಲ್ಲ. ಅದು ರಾಮ್‌ದೇವ್‌ರನ್ನು ಬಂಧಿಸುವುದಕ್ಕಾಗಿ ಪೊಲೀಸರು ನಡೆಸಿದ ಕಾರ್ಯಾಚರಣೆ ಮಾತ್ರವಾಗಿರಲಿಲ್ಲ, ಬದಲಾಗಿ ಇನ್ನೊಂದು ಗುಜರಾತ್ ಸೃಷ್ಟಿಸಿ, ರಾಜಕೀಯ ಲಾಭ ಪಡೆಯಲೆತ್ನಿಸಿದ ಆರೆಸ್ಸೆಸ್‌ನ ಗುಪ್ತ ಅಜೆಂಡಾವನ್ನು ಕೊನೆಕ್ಷಣದಲ್ಲಿ ವಿಫಲಗೊಳಿಸಿದ ಕೇಂದ್ರದ ಕಾರ್ಯಾಚರಣೆಯೂ ಆಗಿತ್ತು. ಈ ಕುರಿತು **twocircle.net** ಗೆ ಹಿರಿಯಸಾಮಾಜಿಕ ಕಾರ್ಯಕರ್ತೆ ಶಬ್ನಮ್ ಹಾಶ್ಮಿ ನೀಡಿರುವ ಪ್ರತಿಕ್ರಿಯೆಯನ್ನು ಗಮನಿಸೋಣ.

''ನಾನು ತಿಳಿದುಕೊಂಡ ಮಾಹಿತಿಯ ಮೇಲೆ ನನಗೆ ಶೇ.100ರಷ್ಟು ವಿಶ್ವಾಸವಿದೆ. ಜೂನ್ 5ರಂದು ಮುಂಜಾನೆ 3ಗಂಟೆಯ ವೇಳೆಗೆ ರಾಮ್‌ದೇವ್ ಸತ್ಯಾಗ್ರಹ ಹಮ್ಮಿಕೊಂಡಿದ್ದ ದೆಹಲಿಯ ರಾಮ್‌ಲೀಲಾ ಮೈದಾನಕ್ಕೆ ಆರೆಸ್ಸೆಸ್ ಬೆಂಕಿ ಇಡಲು ಯೋಜನೆ ಹಾಕಿಕೊಂಡಿತ್ತು. ಈ ಮೂಲಕ ಕೋಮುವೈಷಮ್ಯ ಹುಟ್ಟುಹಾಕಿ ಗುಜರಾತ್ ಮಾದರಿಯಲ್ಲಿ ದೇಶಾದ್ಯಂತ ಗಲಭೆ ನಡೆಸುವುದು ಆರೆಸ್ಸೆಸ್‌ನ ಉದ್ದೇಶವಾಗಿತ್ತು. ಇದೊಂದು ಆರೆಸ್ಸೆಸ್‌ನ ಬಹಿರಂಗಗೊಂಡ ರಹಸ್ಯವಾಗಿದೆ''.

''ಒಂದು ವೇಳೆ ಆರೆಸ್ಸೆಸ್ ಈ ಯೋಜನೆಯಲ್ಲಿ ಸಫಲವಾಗಿದ್ದರೆ ಭಾರತ ದೇಶವು ಹೊತ್ತಿ ಉರಿಯುವ ಸಾಧ್ಯತೆ ಇತ್ತು. ಕೇಸರಿ ಸಿದ್ಧಾಂತವು ತನ್ನ ಯೋಜನೆಯಲ್ಲಿ ಯಶಸ್ವಿಯಾಗುವುದು ಎಂದರೆ ಅದು ಇತಿಹಾಸದ ಅತ್ಯಂತ ಕೆಟ್ಟ ಗಳಿಗೆಯಾಗಿರುತ್ತಿತ್ತು. ಕೇಂದ್ರ ಸರಕಾರಕ್ಕೆ ಈ ಮಾಹಿತಿ ದೊರೆತಿದ್ದರಿಂದಲೇ ಏಕಾಏಕೀ ತಡರಾತ್ರಿ 1.30ರ ವೇಳೆಗೆ ಕಾರ್ಯಾಚರಣೆಗೆ ಇಳಿದು ರಾಮ್‌ದೇವ್‌ನನ್ನು ಮೈದಾನದಿಂದ ತೆರವುಗೊಳಿಸಿದ್ದು. ಸರಕಾರವು ಇಡೀ ಘಟನೆಯ ಸತ್ಯಾಸತ್ಯತೆಯನ್ನು ಜನರ ಮುಂದೆ ಬಹಿರಂಗಗೊಳಿಸಬೇಕು''

''ಇಂತಹ ವಿಚಾರಗಳನ್ನು ಮಾಧ್ಯಮದ ಮುಂದೆ ತಿಳಿಸಿದಾಗ ಇಂತಹ ಆರೋಪಕ್ಕೆ ಪುರಾವೆಯನ್ನು ಕೇಳುವುದು ಸಹಜ. ಕೆಲವು

*ಈ ಕುರಿತು* **twocircle.net** *ಗೆ ಹಿರಿಯಸಾಮಾಜಿಕ ಕಾರ್ಯಕರ್ತೆ ಶಬ್ನಮ್ ಹಾಶ್ಮಿ ನೀಡಿರುವ ಪ್ರತಿಕ್ರಿಯೆಯನ್ನು ಗಮನಿಸೋಣ.*

*''ನಾನು ತಿಳಿದುಕೊಂಡ ಮಾಹಿತಿಯ ಮೇಲೆ ನನಗೆ ಶೇ.100ರಷ್ಟು ವಿಶ್ವಾಸವಿದೆ. ಜೂನ್ 5ರಂದು ಮುಂಜಾನೆ 3ಗಂಟೆಯ ವೇಳೆಗೆ ರಾಮ್‌ದೇವ್ ಸತ್ಯಾಗ್ರಹ ಹಮ್ಮಿಕೊಂಡಿದ್ದ ದೆಹಲಿಯ ರಾಮ್‌ಲೀಲಾ ಮೈದಾನಕ್ಕೆ ಆರೆಸ್ಸೆಸ್ ಬೆಂಕಿ ಇಡಲು ಯೋಜನೆ ಹಾಕಿಕೊಂಡಿತ್ತು. ಈ ಮೂಲಕ ಕೋಮುವೈಷಮ್ಯ ಹುಟ್ಟುಹಾಕಿ ಗುಜರಾತ್ ಮಾದರಿಯಲ್ಲಿ ದೇಶಾದ್ಯಂತ ಗಲಭೆ ನಡೆಸುವುದು ಆರೆಸ್ಸೆಸ್‌ನ ಉದ್ದೇಶವಾಗಿತ್ತು. ಇದೊಂದು ಆರೆಸ್ಸೆಸ್‌ನ ಬಹಿರಂಗಗೊಂಡ ರಹಸ್ಯವಾಗಿದೆ''.*

ವರ್ಷದ ಹಿಂದೆ ಇದೇ ರೀತಿ ಕೇಸರಿ ಭಯೋತ್ಪಾದನೆಯ ಕುರಿತು ಮಾತನಾಡಿದಾಗಲೂ ನಮ್ಮಲ್ಲಿ ಪುರಾವೆ ಕೇಳಲಾಗಿತ್ತು. ಈಗ ಕೇಸರಿ ಭಯೋತ್ಪಾದನೆ ಎಂಬುದು ಬಹಿರಂಗಗೊಂಡ ಸತ್ಯವಾಗಿದೆ. 30 ವರ್ಷಗಳ ಕಾಲ ಸಾಮಾಜಿಕ ಕಾರ್ಯಕರ್ತೆಯಾಗಿ ದುಡಿದಿರುವ ನಾನು ಆಧಾರ ಇಲ್ಲದೆ ಆರೋಪ ಮಾಡುವಷ್ಟು ಮೂರ್ಖಳಲ್ಲ. ಈ ವಿಚಾರವಾಗಿ



ಮಾಹಿತಿ ನೀಡಬೇಕಾದದ್ದು ಕೇಂದ್ರ ಸರಕಾರದ ಜವಾಬ್ದಾರಿಯಾಗಿದೆ''.

ಶಬ್ನಮ್ ಹಾಶ್ಮಿ ಮಾಡಿರುವ ಆರೋಪಕ್ಕೆ ಪುಷ್ಠಿ ನೀಡುವಂತಹ ಹೇಳಿಕೆಗಳು ರಾಮ್‌ದೇವ್‌ರಿಂದಲೂ ವ್ಯಕ್ತವಾಗಿತ್ತು ಎಂಬುದು ಗಮನಾರ್ಹ. ರಾಮ್‌ಲೀಲಾ ಮೈದಾನದಲ್ಲಿ ಪೊಲೀಸರು ನಡೆಸಿದ ಕಾರ್ಯಾಚರಣೆಯ ಮರುದಿನ ಪತ್ರಿಕಾಗೋಷ್ಠಿ ಕರೆದು ಗಂಭೀರ ಆರೋಪವೊಂದನ್ನು ಮಾಡಿದ್ದರು. ಅದೇನೆಂದರೆ, ''ಪೊಲೀಸರು ರಾಮ್‌ಲೀಲಾ ಮೈದಾನದಲ್ಲಿ ದಾಂಧಲೆ ನಡೆಸಿ, ಸುತ್ತಮುತ್ತಲಿನ ಮನೆಗಳಿಗೆ ಬೆಂಕಿ ಹಚ್ಚುವ ಯೋಜನೆಯನ್ನೂ ಹಾಕಿಕೊಂಡಿದ್ದರು. ಅವರಿಗೆ ನನ್ನನ್ನು ಕೊಲ್ಲುವ ಉದ್ದೇಶವಿತ್ತು. ರಾಮ್‌ಲೀಲಾ ಮೈದಾನದ ಆಸುಪಾಸಿನಲ್ಲಿ ಮುಸ್ಲಿಮ್ ಮನೆಗಳಿವೆ. ಆರೋಪವನ್ನೆಲ್ಲ ಅವರ ತಲೆಗೆ ಕಟ್ಟುವ ಯೋಜನೆಯನ್ನು ಹಾಕಿಕೊಂಡಿದ್ದರು'' ಎಂಬುದು ರಾಮ್‌ದೇವ್ ಆರೋಪವಾಗಿತ್ತು.

ಅಂತೂ ಒಂದು ವಿಚಾರ ಇಲ್ಲಿ ಸ್ಪಷ್ಟವಾಗುತ್ತಿದೆ, ರಾಮ್‌ದೇವ್ 'ಹೋರಾಟ'ದ ಹಿಂದೆ ಒಂದು ಗುಪ್ತ ಅಜೆಂಡಾ ಹೊಂಚು ಹಾಕಿ ಕಾಯುತ್ತಿದೆ. ಇದು ದೇಶಕ್ಕೆ ಅಪಾಯಕಾರಿಯೂ ಹೌದು.

ಹಾಗಿದ್ದೂ ಜನರ ಮಧ್ಯೆ ಚಾಲ್ತಿಯಲ್ಲಿರುವ ಪ್ರಚಾರವೇನೆಂದರೆ, ಬಾಬಾ ರಾಮ್‌ದೇವ್ ನಡೆಯುತ್ತಿರುವುದು ಭ್ರಷ್ಟಾಚಾರದ ವಿರುದ್ಧ ಹೋರಾಟವೆಂದು. ಈ ಹೋರಾಟಕ್ಕೆ ಸಾಥ್ ನೀಡಿರುವುದು ವಿಶ್ವಹಿಂದು ಪರಿಷತ್‌ನ ಮಾಜಿ ನಾಯಕಿ ಸಾಧ್ವಿ ಋತಂಬರ, ಆರೆಸ್ಸೆಸ್‌ನ ನಾಯಕ ಮೋಹನ್ ಭಾಗವತ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿ, ಎಲ್.ಕೆ.ಅಡ್ವಾಣಿ ಮುಂತಾದವರು ! ಇದನ್ನು ಭ್ರಷ್ಟಾಚಾರದ ವಿರುದ್ಧದ ಆಂದೋಲನ ಎನ್ನಬಹುದೇ? ಅರ್ಥಾತ್, ಇದು ಫ್ಯಾಷಿಸ್ಟ್ ಮತ್ತು ಭ್ರಷ್ಟಾಚಾರದ ನಡುವಿನ ಆಂತರಿಕ ಸಂಘರ್ಷ ಮಾತ್ರ. ಇದಕ್ಕೆ ಜನಾಂದೋಲನ, ಹೋರಾಟ ಎಂದೆಲ್ಲ ಶೀರ್ಷಿಕೆ ಕೊಟ್ಟು ಜನರು ದಾರಿತಪ್ಪಿಸುವ ಯತ್ನವೂ ಇಲ್ಲಿ ನಡೆದಿದೆ. ಒಟ್ಟಿನಲ್ಲಿ ರಾಮ್‌ದೇವ್‌ರ ಇಡೀ ಹೋರಾಟವೇ ಭ್ರಷ್ಟಾಚಾರದ ಪರಮಾವಧಿ ಎನಿಸಿಕೊಂಡಿದೆ.

ಅಷ್ಟಕ್ಕೂ ರಾಮ್‌ದೇವ್‌ಗೆ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಲೇಬೇಕು ಎಂದೆನಿಸಿದ್ದರೆ ಅದಕ್ಕೆ ಸೂಕ್ತವಾದ ಜಾಗ ಕರ್ನಾಟಕ. ವಿಧಾನಸೌದಕ್ಕಿಂದ ಅತ್ಯುತ್ತಮವಾದ ಇನ್ನೊಂದು ಜಾಗ ಈ ದೇಶದಲ್ಲಿ ಎಲ್ಲಿಯೂ ಇಲ್ಲ. ವಿಪರ್ಯಾಸವೆಂದರೆ, ರಾಜ್ಯವನ್ನು ಭ್ರಷ್ಟಾಚಾರದಲ್ಲೇ ನಂಬರ್ ವನ್ ಪಟ್ಟಕ್ಕೇರಿಸಿದ ಭ್ರಷ್ಟಾಚಾರಿಗಳೇ ಫ್ರೀಡಂ ಪಾರ್ಕ್‌ನಲ್ಲಿ ಕುಳಿತು ರಾಮ್‌ದೇವ್‌ಗೆ ಬೆಂಬಲ ಸೂಚಿಸಿದ್ದರು! ಹೈಟೆಕ್ ಪ್ರತಿಭಟನೆಯ ಅಸ್ತ್ರವಾಗಿರುವ ಮೊಂಬತ್ತಿ ಉರಿಸುವ ಟ್ರಿಕ್ಸ್‌ನ್ನು ಪ್ರಯೋಗಿಸಿದರು! ಆದರೆ ಈ ಪ್ರತಿಭಟನೆಯು ರಾಮ್‌ದೇವ್‌ಗೆ ನಿರೀಕ್ಷಿತ ಫಲ ನೀಡುವ ಬದಲು ಸ್ವತಹ ರಾಮ್‌ದೇವ್‌ರ ನಿಜಬಣ್ಣ ಬಯಲಾಗಿಸಿರುವುದು ಸೋಜಿಗದ ಸಂಗತಿ.

ರಾಮ್‌ದೇವ್ ಹೊಂದಿರುವ ಆಸ್ತಿಯ ಒಂದೊಂದೇ ವಿವರಗಳು ಬಹಿರಂಗಗೊಳ್ಳುತ್ತಿವೆ. 47ರ ಹರೆಯದ ಬಾಲಬ್ರಹ್ಮಚಾರಿ ಎನಿಸಿರುವ ರಾಮ್‌ದೇವ್ ಹುಟ್ಟಿದ್ದು ಹರ್ಯಾಣದ ಮಹೇಂದ್ರಗಢ ಜಿಲ್ಲೆಯ ಅಲಿಪುರ್ ಗ್ರಾಮದಲ್ಲಿ. ರಾಮ್‌ದೇವ್‌ರ ಹುಟ್ಟುಹೆಸರು ರಾಮಕೃಷ್ಣ ಯಾದವ್. ಈಗ ರಾಮ್‌ದೇವ್ ಬರೋಬ್ಬರಿ 644 ಎಕರೆ ಜಮೀನಿನ ಒಡೆಯ. ಈಗ ಅದರ ಮಾರುಕಟ್ಟೆ ಮೌಲ್ಯ ನೂರಾರು ಕೋಟಿ ರೂಪಾಯಿ!

ರಾಮ್‌ದೇವ್ ಹೊಂದಿರುವ ಬಹುತೇಕ ಜಮೀನು ರೈತರ

ಕೃಷಿ ಭೂಮಿಯಾಗಿದೆ. ಅವೆಲ್ಲವನ್ನೂ ಪ್ರಾಧಿಕಾರದ ಮೂಲಕ ರಾಮ್‌ದೇವ್ ಪಡೆದುಕೊಂಡಿರುವ ಭೂಮಿಯಾಗಿದೆ. ಮಾರುಕಟ್ಟೆ ಭಾಷೆಯಲ್ಲಿ ಇದನ್ನು ಲ್ಯಾಂಡ್ ಮಾಫಿಯಾ ಎನ್ನುತ್ತಾರೆ. ರೈತರ ವಿರೋಧವನ್ನು ಬಲವಂತವಾಗಿ ಹತ್ತಿಕ್ಕಿ ಭೂಮಿಯನ್ನು ವಶಪಡಿಸಿಕೊಳ್ಳಲಾಗಿರುವುದು ಬೇರೆ ವಿಚಾರ. ರೈತರಿಗೆ ಮಾರುಕಟ್ಟೆ ದರಕ್ಕಿಂತಲೂ ಅತಿಕಡಿಮೆ ಬೆಲೆ ನೀಡಿ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ. ಗಮನಾರ್ಹ ಸಂಗತಿಯೇನೆಂದರೆ, ಈ ರೀತಿ ಲ್ಯಾಂಡ್ ಮಾಫಿಯಾ ನಡೆದಿರುವುದು ಬಿಜೆಪಿ ಅಧಿಕಾರವಿರುವ ರಾಜ್ಯಗಳಲ್ಲಿ!


ಹರಿದ್ವಾರದಲ್ಲಿ ಬಾಬಾ ರಾಮ್‌ದೇವ್‌ರ ಬಹುಕೋಟಿ ಬೆಲೆಬಾಳುವ ಆಸ್ತಿ.

ಬಿಜೆಪಿ ಆಡಳಿತ ಇರುವ ಉತ್ತರಾಖಂಡ ರಾಜ್ಯದಲ್ಲಿ 2009ರಲ್ಲಿ ಎರಡು ಬಾರಿ ಮತ್ತು 2010ರಲ್ಲಿ ಒಮ್ಮೆ ರಾಮ್‌ದೇವ್‌ಗೆ ಭೂಮಿ ಒತ್ತುವರಿ ಮಾಡಿಕೊಡಲಾಗಿದೆ. 2008ರಲ್ಲಿ ನಿವೃತ್ತ ಮೇಜರ್ ಜನರಲ್ ಬಿ.ಸಿ.ಖಂಡೂರಿ ಮುಖ್ಯಮಂತ್ರಿಯಾಗಿದ್ದಾಗ ಮತ್ತು ಅನಂತರ 2009ರಲ್ಲಿ ರಮೇಶ್ ಪೊಕ್ರಿಯಾಲ್ ಅಧಿಕಾರಕ್ಕೇರಿದಾಗಲೂ ರಾಮ್‌ದೇವ್‌ಗೆ ಸಲೀಸಾಗಿ ಜಮೀನು ಒತ್ತುವರಿ ಮಾಡಿಕೊಡಲಾಗಿತ್ತು. ರಾಮ್‌ದೇವ್‌ನ ಬಲಗೈ ಭಂಟ ಆಚಾರ್ಯ ಬಾಲಕೃಷ್ಣ ಹೇಳುವ ಪ್ರಕಾರ, ''ರೈತರಿಗೆ ಹಣ ನೀಡಿಯೇ ಭೂಮಿ ವಶಪಡಿಸಿಕೊಳ್ಳಲಾಗಿದೆ, ಆದರೆ ಕೆಲವು ಸ್ಥಾಪಿತ ಹಿತಾಸಕ್ತಿಗಳು ರಾಮ್‌ದೇವ್ ವಿರುದ್ಧ ನಿಲ್ಲುವಂತೆ ರೈತರನ್ನು ಪ್ರೇರೇಪಿಸಿದವು'' ಎಂದಿದ್ದಾನೆ.

ರಾಮ್‌ಲೀಲಾ ಮೈದಾನದಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸುವ ಸಂದರ್ಭದಲ್ಲಿ ರಾಮ್‌ದೇವ್‌ಗಿಂತ ಮುಂಚೆಯೂ ಸದ್ದಿಲ್ಲದೆ ಮರೆಯಾಗಿರುವ ಆಚಾರ್ಯ ಬಾಲಕೃಷ್ಣ ವಿರುದ್ಧ ಸಂಶಯದ ಹುತ್ತವೇ ಬೆಳೆಯುತ್ತಿದೆ. ರಾಮ್‌ದೇವ್‌ರ ಬಲಗೈ ಭಂಟ ಬಾಲಕೃಷ್ಣ ನೇಪಾಳ ಪ್ರಜೆಯಾಗಿದ್ದು, ಕ್ರಿಮಿನಲ್ ಹಿನ್ನೆಲೆ ಹೊಂದಿದ್ದಾನೆ ಎಂಬ ಆರೋಪ ಕೂಡ ಇದೆ. ಪೊಲೀಸರು ಈ ಕುರಿತು ತನಿಖೆ ನಡೆಸಲು ಮುಂದಾಗುವಷ್ಟರಲ್ಲಿ ಬಾಲಕೃಷ್ಣ ಆಚಾರ್ಯ ನಾಪತ್ತೆಯಾಗಿರುವುದು ಹಲವು ಸಂಶಯಗಳಿಗೆ ಎಡೆಮಾಡಿಕೊಟ್ಟಿದೆ. ಮಾತ್ರವಲ್ಲ, ಆತ ಹೊಂದಿರುವ ಪಾಸ್‌ಪೋರ್ಟ್ ನಕಲಿ ಎಂಬ ಬಗ್ಗೆಯೂ ಗುಮಾನಿ ಇದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ತನಿಖೆ ನಡೆಸಲು ಮುಂದಾಗಿದೆ.

ಅದೇ ರೀತಿ ರಾಮ್‌ದೇವ್‌ರ ಒಂದೊಂದೇ ಮುಖಗಳು ಅನಾವರಣಗೊಳ್ಳುತ್ತಿವೆ. ಆಸ್ಥಾ ಚಾನೆಲ್‌ಗೆ ಮಾತ್ರ ಸೀಮಿತವಾಗಿದ್ದ ಯೋಗ ಗುರು ರಾಮ್‌ದೇವ್‌ರ ಲೀಲೆಗಳು ಈಗ ಒಂದೊಂದೇ ಬೆಳಕಿಗೆ ಬರತೊಡಗಿವೆ. ಯೋಗ ಗುರು, ಆಯುರ್ವೇದಿಕ್ ಔಷಧಿ ಮಾರಾಟದ ಉದ್ಯಮಿ, ರಾಜಕಾರಣಿ, ಅಪಾರ ಆಸ್ತಿ ಹೊಂದಿರುವ ಬಿಲಿಯನೇರ್ ಸನ್ಯಾಸಿ ಎಂಬಿತ್ಯಾದಿ ಮುಖಗಳು ಜನರಿಗೆ ಪರಿಚಯವಾಗತೊಡಗಿವೆ. ಯೋಗವನ್ನೇ ಉದ್ಯಮವನ್ನಾಗಿಸಿಕೊಂಡಿರುವ ರಾಮ್‌ದೇವ್ ದೇಶದಲ್ಲಿ ಮಾತ್ರವಲ್ಲ, ವಿದೇಶದಲ್ಲೂ ಅಪಾರ ಆಸ್ತಿ, ಭೂಮಿ ಹೊಂದಿದ್ದಾರೆ. ವಿದೇಶ ಬ್ಯಾಂಕ್‌ನಲ್ಲಿರುವ ಕಪ್ಪು ಹಣವನ್ನು ವಾಪಾಸು ತರಬೇಕು ಎಂದು ಆಗ್ರಹಿಸಿ ಹೋರಾಟಕ್ಕಿಳಿದಿದ್ದ ರಾಮ್‌ದೇವ್‌ರ ವಿದೇಶಿ ಸಂಪತ್ತುಗಳನ್ನು ಭಾರತಕ್ಕೆ ತರಿಸಿಕೊಳ್ಳುವ ಕುರಿತು ಕೇಂದ್ರ ಸರಕಾರ ಯೋಚಿಸುತ್ತಿರುವಂತಿದೆ. ಸ್ಕಾಟ್ಲೆಂಡಿನಲ್ಲಿ 300 ಎಕರೆ ವಿಸ್ತೀರ್ಣದ ದ್ವೀಪವನ್ನು ಹೊಂದಿರುವ ಸನ್ಯಾಸಿ ರಾಮ್‌ದೇವ್ ಬಳಿ ಇನ್ನೆಷ್ಟು ಸಂಪತ್ತು ಇರಬಹುದು ಎಂದು ಸುಲಭವಾಗಿ ಅಂದಾಜಿಸಲು ಸಾಧ್ಯವೇ?

ಹರಿದ್ವಾರದಲ್ಲಿ ರಾಮ್‌ದೇವ್‌ರ ಆಶ್ರಮ ಸ್ಥಾಪನೆಗೆ ಹರ್ಯಾಣ ಸರಕಾರವು ರೈತರ ಭೂಮಿ ಒತ್ತುವರಿ ಮಾಡಿಕೊಟ್ಟ ಬಗ್ಗೆ ಅಂದು ವಿಧಾನಸಭೆಯಲ್ಲಿ ತೀವ್ರ ಚರ್ಚೆ ಗದ್ದಲ ಉಂಟಾಗಿತ್ತು. ಸ್ಥಳೀಯ ಗ್ರಾಮ ಪಂಚಾಯತ್‌ನೊಂದಿಗೆ ಸಮಾಲೋಚನೆ ನಡೆಸದೆ, ಬಿಜೆಪಿ ಆಡಳಿತವು ನೇರವಾಗಿ ನಿರ್ಧಾರ ತೆಗೆದುಕೊಂಡಿರುವುದರ ವಿರುದ್ಧ ವಿರೋಧ ಪಕ್ಷದ ನಾಯಕ ಹರಕ್ ಸಿಂಗ್ ರಾವತ್ ದನಿಯೆತ್ತಿದ್ದರು. ರಾಮ್‌ದೇವ್ ನಡೆಸುತ್ತಿರುವ ಲ್ಯಾಂಡ್ ಮಾಫಿಯಾದ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಹರಕ್ ಸಿಂಗ್ ಆಗ್ರಹಿಸಿದ್ದರು.

ಹರಿದ್ವಾರದಲ್ಲಿ ರಾಮ್‌ದೇವ್‌ರ ಆಶ್ರಮ ಸ್ಥಾಪನೆಗೆ ಹರ್ಯಾಣ ಸರಕಾರವು ರೈತರ ಭೂಮಿ ಒತ್ತುವರಿ ಮಾಡಿಕೊಟ್ಟ ಬಗ್ಗೆ ಅಂದು ವಿಧಾನಸಭೆಯಲ್ಲಿ ತೀವ್ರ ಚರ್ಚೆ ಗದ್ದಲ ಉಂಟಾಗಿತ್ತು. ಸ್ಥಳೀಯ ಗ್ರಾಮ ಪಂಚಾಯತ್‌ನೊಂದಿಗೆ ಸಮಾಲೋಚನೆ ನಡೆಸದೆ, ಬಿಜೆಪಿ ಆಡಳಿತವು ನೇರವಾಗಿ

## ಹರಿದ್ವಾರ್ !

**ಯೋಗ ಗುರು ರಾಮ್‌ದೇವ್ ಅವರ ಕಾರಸ್ಥಾನವಾಗಿರುವ ಹರಿದ್ವಾರ್ ಜಿಲ್ಲೆಯು ಚಿರಿಪರಿಚಿತವಾದದ್ದು. ಸಂಜೋತಾ ಎಕ್ಸ್‌ಪ್ರೆಸ್ ಸ್ಫೋಟಕ್ಕೆ ಸಂಬಂಧಿಸಿದಂತೆ 2010ರ ನವೆಂಬರ್ 19ರಂದು ಸ್ವಾಮಿ ಅಸೀಮಾನಂದನನ್ನು ಬಂಧಿಸಿದ್ದು ಇದೇ ಹರಿದ್ವಾರದಲ್ಲಿ. ಅಸೀಮಾನಂದನು ಇಲ್ಲಿ ಸ್ವಾಮಿ ಓಂಕಾರಾನಂದ ಹೆಸರಿನಲ್ಲಿ ತಲೆಮರೆಸಿಕೊಂಡು ಆಶ್ರಮ ನಡೆಸುತ್ತಿದ್ದ.**

ನಿರ್ಧಾರ ತೆಗೆದುಕೊಂಡಿರುವುದರ ವಿರುದ್ಧ ವಿರೋಧ ಪಕ್ಷದ ನಾಯಕ ಹರಕ್ ಸಿಂಗ್ ರಾವತ್ ದನಿಯೆತ್ತಿದ್ದರು. ರಾಮ್‌ದೇವ್ ನಡೆಸುತ್ತಿರುವ ಲ್ಯಾಂಡ್ ಮಾಫಿಯಾದ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಹರಕ್ ಸಿಂಗ್ ಆಗ್ರಹಿಸಿದ್ದರು.

''ಕೃಷಿ ಭೂಮಿಯನ್ನು ರಾಮ್‌ದೇವ್‌ರ ಕೃಷಿಯೇತರ ಚಟುವಟಿಕೆಗೆ ಹೇಗೆ ಪರಭಾರೆ ಮಾಡಲಾಯಿತು ಎಂಬುದನ್ನು ಸ್ಪಷ್ಟಪಡಿಸಬೇಕು. ಕಾನೂನಿನ ಪ್ರಕಾರ ಭೂಮಿಯನ್ನು ಮಾರಾಟ ಮಾಡಲಾಗಿಲ್ಲ. ಪ್ರಾಧಿಕಾರವು ರಾಮ್‌ದೇವ್‌ನ ಪಥಂಜಲಿ ಯೋಗಪೀಠಕ್ಕೆ 16 ಪ್ರಕರಣಗಳ ಮೇಲೆ ದಂಡ ವಿಧಿಸಿದೆ. ಇವೆಲ್ಲವನ್ನು ಗಮನಿಸಿದಾಗ ರಾಮ್‌ದೇವ್ ಯೋಗ ಮತ್ತು ಆಯುರ್ವೇದಿಕ್ ಔಷಧಿ ಹೆಸರಿನಲ್ಲಿ ಉದ್ಯಮವನ್ನು ನಡೆಸುತ್ತಿರುವುದು ಸ್ಪಷ್ಟವಾಗುತ್ತಿದೆ'' ಎಂದು ಹರಕ್ ಸಿಂಗ್ ವಿಧಾನಸಭೆಯಲ್ಲೇ ಪ್ರಸ್ತಾಪಿಸಿದ್ದರು.

ಹರ್ಯಾಣದ ನಾಗರಿಕ ಸಮಾಜದ ಮುಖಂಡ ಅವಧಾಸ್ ಕೌಶಲ್ ಹೇಳುವ ಪ್ರಕಾರ, ''ರೈತರು, ಸಾಮಾಜಿಕ ಕಾರ್ಯಕರ್ತರು ಇಷ್ಟೆಲ್ಲ ದನಿಯೆತ್ತಿದರೂ ಬಿಜೆಪಿ ಸರಕಾರವು ರಾಮ್‌ದೇವ್‌ಗೆ ಭೂಮಿ ನೀಡಿರುವ ಪ್ರಕರಣದ ಕುರಿತು ಯಾವುದೇ ಮಾಹಿತಿ ನೀಡಿಲ್ಲ. ನಮ್ಮ ಪ್ರಶ್ನೆಯೇನೆಂದರೆ, ಬಿಜೆಪಿ ಸರಕಾರವು ರಾಮ್‌ದೇವ್‌ರ' ರಿಯಲ್‌ಎಸ್ಟೇಟ್ ದಂಧೆಯಲ್ಲಿ ಮಧ್ಯಮವರ್ತಿಯಾಗಿ ಕೆಲಸ ಮಾಡುತ್ತಿದೆಯೇ?'' ಎಂಬುದಾಗಿದೆ.

ಇತ್ತೀಚೆಗಷ್ಟೇ ಹರ್ಯಾಣ ಮುಖ್ಯಮಂತ್ರಿ ಪೊಕ್ರಿಯಾಲ್ ನಡೆಸಿದ 'ಜನತಾ ದರ್ಬಾರ್' ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಔರಾಂಗಾಬಾದ್‌ನ ಮುಖಂಡ ಎ.ಬಿ.ಚೌಹಾಣ್, ''100



ಎಕರೆಗೂ ವಿಶಾಲಕ್ಕೆ ಹರಡಿಕೊಂಡಿರುವ ಯೋಗ ಗ್ರಾಮದ 43 ಭಿಗಾಸ್‌ನಷ್ಟು (ಭಿಗಾಸ್ ಎಂದರೆ ಎಕರೆಯ ಮೂರನೆ ಒಂದು ಭಾಗ) ಪಂಚಾಯತ್ ಜಾಗವನ್ನು ರಾಮ್‌ದೇವ್‌ನ ಕಾರ್ಯಕರ್ತರು ಅಕ್ರಮವಾಗಿ ವಶಪಡಿಸಿಕೊಂಡಿದ್ದಾರೆ'' ಎಂದು ಆರೋಪಿಸಿದ್ದರು. ಈ ಕುರಿತು ತನಿಖೆ ನಡೆಸುವಂತೆ ಜಿಲ್ಲಾಡಳಿತಕ್ಕೆ ಮುಖ್ಯಮಂತ್ರಿ ಸೂಚಿಸಿದ್ದರು. ಹರಿದ್ವಾರ್‌ನ ಸಬ್‌ಡಿವಿಶನಲ್ ಮ್ಯಾಜಿಸ್ಟ್ರೇಟ್ ಹರ್ವೀರ್ ಸಿಂಗ್ ನೀಡಿರುವ ತನಿಖಾ ವರದಿಯಲ್ಲಿ ಚೌಹಾಣ್‌ರ ಆರೋಪವು ದೃಢಪಟ್ಟಿತ್ತು.

1995ರಲ್ಲಿ ಹರಿದ್ವಾರದಲ್ಲಿ ದಿವ್ಯ ಯೋಗ ಮಂದಿರ ಟ್ರಸ್ಟ್ ಸ್ಥಾಪಿಸಿದ್ದ ರಾಮ್‌ದೇವ್, 2006ರಲ್ಲಿ ಪಥಂಜಲಿ ಯೋಗ ಟ್ರಸ್ಟ್‌ನ್ನು ಉದ್ಘಾಟಿಸಿದರು. ಇದು ಜಗತ್ತಿನ ಅತಿದೊಡ್ಡ ಆಯುರ್ವೇದ ಕೇಂದ್ರವಾಗಿದ್ದು, ಯೋಗ ಸೇರಿದಂತೆ ಆಯುರ್ವೇದ ಔಷಧಿ, ಚಿಕಿತ್ಸೆ, ಸಂಶೋಧನೆ ಮತ್ತು ವಿಶ್ವವಿದ್ಯಾನಿಲಯಗಳನ್ನು ಹೊಂದಿದೆ. 2005ರಲ್ಲಿ ಯೋಗ ಗುರು ಆಧ್ಯಾತ್ಮಿಕ ಸ್ವಾಮಿಯಾಗಿ ರೂಪುಗೊಂಡು ಜನರ ನಡುವೆ ಪ್ರಚಾರಕ್ಕೆ ಬಂದ ರಾಮ್‌ದೇವ್, ಮೊದಲ ಬಾರಿಗೆ ರಾಜಕೀಯ ಸಂಘರ್ಷಕ್ಕಿಳಿಯಬೇಕಾಯಿತು. ಸಿಪಿಎಂನ ಪಾಲಿಟ್ ಬ್ಯುರೋ ಸದಸ್ಯೆ ಬೃಂದಾ ಕಾರಟ್, ರಾಮ್‌ದೇವ್‌ರ ಆಯುರ್ವೇದ ಔಷಧಿ ತಯಾರಿಕೆಯ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದರು. ಆಯುರ್ವೇದ ಔಷಧಿ ತಯಾರಿಕೆಯಲ್ಲಿ ಮನುಷ್ಯರ ಮೂಳೆಗಳು ಮತ್ತು ಪ್ರಾಣಿಯ ದೇಹದ ಭಾಗಗಳನ್ನು ಬಳಸಲಾಗುತ್ತಿದೆ ಎಂಬುದು ಕಾರಟ್ ಅವರ ಆರೋಪವಾಗಿತ್ತು. ಈ ಆರೋಪವು ಈಗಲೂ ಹಾಗೆಯೇ ಇದೆ. ಇದರ ವಿರುದ್ಧ ರಾಮ್‌ದೇವ್ ಕಿಡಿಕಾರಿ, ''ಕಾರಟ್ ಬಹುರಾಷ್ಟ್ರೀಯ ಕಂಪೆನಿಗಳ ಔಷಧಿಗಳನ್ನು ಮಾತ್ರ ನೆಚ್ಚಿಕೊಂಡಿದ್ದು, ಆಯುರ್ವೇದ, ಯೋಗ ಚಿಕಿತ್ಸಾ ಪದ್ಧತಿಯನ್ನು ಮೂಲೆಗುಂಪಾಗಿಸಲು ಕಂಪೆನಿಗಳೊಂದಿಗೆ ಶಾಮೀಲಾಗಿದ್ದಾರೆ'' [illegible]

ಗಮನಾರ್ಹ.

ಬಾಲ್ಯದಲ್ಲೇ ರಾಮ್‌ದೇವ್ ಪಾರ್ಶ್ವವಾಯು ಪೀಡಿತನಾಗಿದ್ದರು. ಯೋಗದ ನೆರವಿನಿಂದಾಗಿ ತಾನು ವ್ಯಾಧಿಯನ್ನೂ ಜಯಿಸಿ ಬಂದಿದ್ದೇನೆ ಎಂಬುದು ಯೋಗ ಗುರುವಿನ ನಿಲುವು. ಆದಾಗ್ಯೂ ರಾಮ್‌ದೇವ್‌ರ ಒಂದು ಕಣ್ಣು ಈಗಲೂ ಪೀಡಿತವಾಗಿದೆ. ಎಂಟನೆಯ ತರಗತಿ ಮುಗಿಸಿದ ಬಳಿಕ ಹರ್ಯಾಣದ ಗುರುಕುಲ ಸೇರಿದ ರಾಮ್‌ದೇವ್ ಸನ್ಯಾಸ ಸ್ವೀಕರಿಸಿ ಯೋಗ ಕಲಿಸಲು ಆರಂಭಿಸಿದ. ಅನಂತರದ ದಿನಗಳಲ್ಲಿ ಯೋಗವೇ ಆತನ ಉದ್ಯಮವಾಯಿತು. ಆಯುರ್ವೇದ ಉತ್ಪನ್ನಗಳನ್ನು ಪಥಂಜಲಿ ಕಂಪೆನಿಯಲ್ಲಿ ಉತ್ಪಾದಿಸಲಾಗುತ್ತಿದೆ. ಶಾಂಪೂನಿಂದ ಕ್ರೀಮ್‌ವರೆಗೂ ಬಗೆ ಬಗೆಯ ಆಯುರ್ವೇದಿಕ್ ಉತ್ಪನ್ನಗಳು ಇಂದು ಮಾರುಕಟ್ಟೆಯಲ್ಲಿವೆ. ವರ್ಷವೊಂದಕ್ಕೆ 500 ಕೋಟಿ ರೂಪಾಯಿಗಿಂತಲೂ ಹೆಚ್ಚು ವಹಿವಾಟು ನಡೆಸುವ ಶ್ರೀಮಂತ ಉದ್ಯಮಿ ರಾಮ್‌ದೇವ್. ಆತನ ಹರಿದ್ವಾರ್ ಆಶ್ರಮಕ್ಕೆ ದೇಶಾದ್ಯಂತದಿಂದ ಭೇಟಿ ನೀಡುವ ಜನರಿಗೆ ಉಳಿದುಕೊಳ್ಳಲು ಐಶಾರಾಮಿ ಗೆಸ್ಟ್ ಹೌಸ್ ಕೂಡ ಆಶ್ರಮದಲ್ಲಿದೆ. ಈ ಆಶ್ರಮದಲ್ಲಿ ಒಂದು ದಿನ ತಂಗಬೇಕಾದರೆ ಪಂಚಾತಾರಾ ಹೊಟೇಲ್‌ನಷ್ಟೇ ಹಣ ಪಾವತಿಸಬೇಕು. ಅಂದಹಾಗೆ ಇದ್ಯಾವುದಕ್ಕೂ ಬಿಲ್ ಕೊಡಲಾಗುವುದಿಲ್ಲ, ದೇಣಿಗೆ ಎಂದೇ ಸ್ವೀಕರಿಸಲಾಗುತ್ತದೆ.



ಪಜಂತಲಿ ಯೋಗ ಪೀಠದ ಮುಖ್ಯದ್ವಾರ

ಡೆಹ್ರಾಡೂನ್‌ನ ಸರಕಾರೇತರ ಸಂಘಟನೆ ಆರ್‌ಎಲ್‌ಇಕೆ (ರೂರಲ್ ಲಿಟಿಗೇಶನ್ ಆ್ಯಂಡ್ ಎಂಪವರ್‌ಮೆಂಟ್ ಕೇಂದ್ರ) ಇದರ ಅಧ್ಯಕ್ಷ ಕೌಶಲ್ ಹೇಳುವಂತೆ, ''ರಾಮ್‌ದೇವ್ ರನ್ನು ಈ ರೀತಿ ಬೆಳೆಸುವಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸಮಪಾಲು ಹೊಂದಿದೆ. ಕೇಂದ್ರ ಪ್ರವಾಸೋದ್ಯಮ ಸಚಿವ ಸುಬೋಧ್

> *ಬಾಲ್ಯದಲ್ಲೇ ರಾಮ್‌ದೇವ್ ಪಾರ್ಶ್ವವಾಯು ಪೀಡಿತನಾಗಿದ್ದರು. ಯೋಗದ ನೆರವಿನಿಂದಾಗಿ ತಾನು ವ್ಯಾಧಿಯನ್ನೂ ಜಯಿಸಿ ಬಂದಿದ್ದೇನೆ ಎಂಬುದು ಯೋಗ ಗುರುವಿನ ನಿಲುವು. ಆದಾಗ್ಯೂ ರಾಮ್‌ದೇವ್‌ನ ಒಂದು ಕಣ್ಣು ಈಗಲೂ ಪೀಡಿತವಾಗಿದೆ. ಎಂಟನೆಯ ತರಗತಿ ಮುಗಿಸಿದ ಬಳಿಕ ಹರ್ಯಾಣದ ಗುರುಕುಲ ಸೇರಿದ ರಾಮ್‌ದೇವ್ ಸನ್ಯಾಸ ಸ್ವೀಕರಿಸಿ ಯೋಗ ಕಲಿಸಲು ಆರಂಭಿಸಿದ. ಅನಂತರದ ದಿನಗಳಲ್ಲಿ ಯೋಗವೇ ಆತನ ಉದ್ಯಮವಾಯಿತು. ಆಯುರ್ವೇದ ಉತ್ಪನ್ನಗಳನ್ನು ಪಥಂಜಲಿ ಕಂಪೆನಿಯಲ್ಲಿ ಉತ್ಪಾದಿಸಲಾಗುತ್ತಿದೆ. ಶಾಂಪೂನಿಂದ ಕ್ರೀಮ್‌ವರೆಗೂ ಬಗೆ ಬಗೆಯ ಆಯುರ್ವೇದಿಕ್ ಉತ್ಪನ್ನಗಳು ಇಂದು ಮಾರುಕಟ್ಟೆಯಲ್ಲಿವೆ. ವರ್ಷವೊಂದಕ್ಕೆ 500 ಕೋಟಿ ರೂಪಾಯಿಗಿಂತಲೂ ಹೆಚ್ಚು ವಹಿವಾಟು ನಡೆಸುವ ಶ್ರೀಮಂತ ಉದ್ಯಮಿ ರಾಮ್‌ದೇವ್.*

ಕಾಂತ್ ಸಹಾಯ್ ಅವರು ರಾಮ್‌ದೇವ್‌ನೊಂದಿಗೆ ಮಾತುಕತೆ ನಡೆಸುವ ಕೇಂದ್ರದ ತಂಡದಲ್ಲಿ ಮುಂಚೂಣಿಯಲ್ಲಿ ಯಾಕೆ ಇದ್ದಾರೆ ಎಂದು ಯಾರಾದರೂ ಚಿಂತಿಸಿದ್ದಾರೆಯೇ? ಯಾಕೆಂದರೆ ಅವರು ಈ ಹಿಂದೆ ಕೇಂದ್ರ ಆಹಾರ ಸರಬರಾಜು ಸಚಿವರಾಗಿದ್ದರು. ಕೆಲವು ವರ್ಷದ ಹಿಂದೆ ಕೇಂದ್ರ ಆಹಾರ ಪ್ರಕ್ರಿಯೆ ಸಚಿವಾಲಯದ ಸಹಯೋಗದೊಂದಿಗೆ ರಾಮ್‌ದೇವ್ ಅವರು ಹರಿದ್ವಾರದಲ್ಲಿ 1000 ಕೋಟಿ ರೂಪಾಯಿ ವೆಚ್ಚದ ಪಥಂಜಲಿ ಆಹಾರ ಮತ್ತು ನೈಸರ್ಗಿಕ ಪಾರ್ಕ್ ಸ್ಥಾಪಿಸಲು ಸುಭೋದ್ ಕಾಂತ್ ಅವರು ಕಾರಣಕರ್ತರಾಗಿದ್ದರು. ರಾಮ್‌ದೇವ್ ಮತ್ತು ಸುಭೋದ್ ಕಾಂತ್ ಸಹಾಯ್ ಅವರ ನಡುವಿನ ಗಾಢ ಸಂಬಂಧದ ಬಗ್ಗೆ ಉತ್ತರಾಖಂಡದ ಎಲ್ಲರಿಗೂ ಗೊತ್ತಿದೆ. ಕೆಲವು ದಿನಗಳ ಹಿಂದೆ ರಾಮ್‌ದೇವ್ ದೆಹಲಿಯ ವಿಮಾನನಿಲ್ದಾಣದಲ್ಲಿ ಬಂದಿಳಿದಾಗ ಅವರನ್ನು ಸುಭೋದ್ ಕಾಂತ್ ಅವರು ಸ್ವಾಗತಿಸಿದ್ದು ಸಹಜವೇ ಆಗಿತ್ತು''.

ರಾಮದೇವ್ ನಡೆಸುತ್ತಿರುವ ಉದ್ಯಮದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಸಮಪಾಲು ಇದೆ. ಆದರೆ ಕಾಂಗ್ರೆಸ್‌ನ ಕೆಲವು ಸಚಿವರು ವ್ಯಕ್ತಿಗತ ಲಾಭಕ್ಕಾಗಿ ರಾಮ್‌ದೇವ್ ಅವರೊಂದಿಗೆ ಸಂಬಂಧ ಹೊಂದಿದ್ದರೆ ಬಿಜೆಪಿಯು ತನ್ನ ರಾಜಕೀಯ ಅಜೆಂಡಾಕ್ಕಾಗಿ ರಾಮ್‌ದೇವ್‌ರನ್ನು ಬೆಳೆಸುತ್ತಿದೆ.

## ಬಿಜೆಪಿ ಸರಕಾರ ನೀಡಿರುವ ಜಮೀನು ಕೊಡುಗೆ

★ 2008ರಲ್ಲಿ ಸರಕಾರಿ ಆದೇಶ ಪತ್ರ ಸಂ.-56/18(1)/07 ದಿನಾಂಕ ಜುಲೈ 7, 2008: ಔರಂಗಾಬಾದ್‌ಸ ಶಿವದಾಸ್‌ಪುರ, ಟೆಲಿವಾಲಾ, ಶಂತರ್ಷ ಮತ್ತು ಬಹಾದರ್‌ಪುರದಲ್ಲಿರುವ 50 ಹೆಕ್ಟೇರ್ ಜಾಗವನ್ನು ಬಾಬಾ ರಾಮ್‌ದೇವ್ ಅವರ ಪಥಂಜಲಿ ಯೋಗಪೀಠಕ್ಕೆ 'ಪಂಚ ಕರ್ಮ ಆಯುರ್ವೇದಿಕ್ ಔಷಧಿ ತಯಾರಿಕಾ ಸಂಶೋಧನಾ ಲ್ಯಾಬೋರೇಟರಿಯ ಉದ್ದೇಶಕ್ಕಾಗಿ ನೀಡಲಾಗಿದೆ.

★ ಇದಾದ ಒಂದು ತಿಂಗಳಲ್ಲೇ ಅದೇ ಸರಕಾರವು ಆದೇಶ ಪತ್ರ ಸಂ.139/18(1)/07 ದಿನಾಂಕ ಆಗಸ್ಟ್ 8, 2008ರಂದು ಬಾಬಾ ರಾಮ್‌ದೇವ್ ಅವರ ಪಥಂಜಲಿ ಯೋಗಪೀಠಕ್ಕೆ ಮುಸ್ತಫಾಬಾದ್‌ನಲ್ಲಿ 56.468 ಹೆಕ್ಟೇರ್ ಭೂಮಿಯನ್ನು 'ಔಷಧಿ ತಯಾರಿಕೆ ಮತ್ತು ಸಂಶೋಧನೆ'ಗಾಗಿ ನೀಡಲಾಗಿದೆ.

★ ಎರಡು ವರ್ಷಗಳ ಬಳಿಕ ಸರಕಾರಿ ಆದೇಶ ಸಂ.57/ 118(2)/10 ದಿನಾಂಕ ಫೆಬ್ರವರಿ 26, 2010ರಂದು ಔರಂಗಾಬಾದ್ ಶಿವದಾಸ್‌ಪುರ ಮತ್ತು ಟೆಲಿವಾಲಾದಲ್ಲಿರುವ 155 ಹೆಕ್ಟೇರ್ ಜಾಗವನ್ನು ಬಾಬಾ ರಾಮ್‌ದೇವ್ ಅವರ ಪಥಂಜಲಿ ಯುನಿವರ್ಸಿಟಿಮತ್ತು ಯೋಗಪೀಠ ಟ್ರಸ್ಟ್‌ಗೆ ನೀಡಲಾಗಿದೆ.

ಇಷ್ಟಕ್ಕೂ ನಾವು ಅಂದುಕೊಂಡಂತೆ ಇದು ಕೇಂದ್ರದ ಕಾಂಗ್ರೆಸ್ ಸರಕಾರ ಮತ್ತು ರಾಮ್‌ದೇವ್ ನಡುವಿನ ಸಂಘರ್ಷವಲ್ಲ. ಇದು ಎರಡು ಸ್ವಹಿತಾಸಕ್ತಿಗಳ ನಡುವಿನ ಸಂಘರ್ಷ. ಮೊದಲೇ ವಿಶ್ಲೇಷಿಸಿದಂತೆ ಫ್ಯಾಶಿಸಂನ ಎರಡು ವಿಭಿನ್ನ ಬಣಗಳ ನಡುವಿನ ಆಂತರಿಕ ಸಂಘರ್ಷ. ಭ್ರಷ್ಟಾಚಾರದ ವಿರುದ್ಧದ ಹೋರಾಟಕ್ಕೆಂದು ದೆಹಲಿ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ರಾಮ್‌ದೇವ್ ಅವರನ್ನು ಕೇಂದ್ರದ ಕಾಂಗ್ರೆಸ್ ಸರಕಾರ ಗೌರವದಿಂದ ಸ್ವಾಗತಿಸಿತ್ತು. ಅನಂತರದ ದಿನಗಳಲ್ಲಿ ಬಾಬಾ ರಾಮ್‌ದೇವ್‌ರೊಂದಿಗೆ ಮಾತುಕತೆಯೂ ನಡೆದಿತ್ತು. ಕೇಂದ್ರದ ಪ್ಯಾಕೇಜ್‌ಗೆ ರಾಮ್‌ದೇವ್ ಒಪ್ಪಿಗೆಯನ್ನೂ ಸೂಚಿಸಿದ್ದರು. ಆದರೆ ಇದ್ದಕ್ಕಿದ್ದಂತೆಯೇ ಆಯುರ್ವೇದಿಕ್ ಗುರು ರಾಮ್‌ದೇವ್ ತಿರುಗಿ ಬೀಳಲು ಕಾರಣವೇನು?

ಸದ್ಯ ಕಳೆದ 10 ವರ್ಷಗಳಿಂದ ಅಧಿಕಾರದಿಂದ ದೂರವುಳಿದಿರುವ ಬಿಜೆಪಿಗೆ ಪ್ರಮುಖವಾದ ರಾಜಕೀಯ ತಿರುವು ಬೇಕಾಗಿದೆ. ಈ ಹಿಂದಿನಂತೆ ರಾಮಮಂದಿರ ವರ್ಕೌಟ್ ಆಗುವುದಿಲ್ಲ. ಕೇಸರಿ ಭಯೋತ್ಪಾದನೆಯು ಬಿಜೆಪಿಯ ವರ್ಚಸ್ಸನ್ನು ಪಾತಾಳಕ್ಕಿಳಿಸಿದೆ. ಮಾತ್ರವಲ್ಲದೆ, ಬಂಧನದಲ್ಲಿರುವ ಹೆಡ್ಲಿಗೂ ಶಿವಸೇನೆಗೂ ಸಂಬಂಧ ಇರುವುದಾಗಿ ಆರೋಪ ಕೇಳಿ ಬರುತ್ತಿದೆ. ಅದರ ಜೊತೆಗೆ ದೇಶದೊಳಗೆ ನಡೆದಿರುವ ಸ್ಫೋಟಗಳಲ್ಲಿ ಕೇಸರಿ ಭಯೋತ್ಪಾದನೆಯ ಪಾತ್ರವು ಬಹಿರಂಗಗೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ಭಯೋತ್ಪಾದನೆಯಾಗಲೀ, ರಾಮಮಂದಿರವಾಗಲೀ ಬಿಜೆಪಿಗೆ ರಾಜಕೀಯ ಲಾಭ ತಂದುಕೊಡಲು ಸಾಧ್ಯವಿಲ್ಲ. ಮುಂದಿನ ವರ್ಷವೇ ಉತ್ತರಪ್ರದೇಶದಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ. ಇತ್ತೀಚೆಗಷ್ಟೇ ಕೇರಳ, ತಮಿಳುನಾಡು, ಪಶ್ಚಿಮಬಂಗಾಳ ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕೋಮುವಾದಿ ಪಕ್ಷವು ಸೊನ್ನೆಸುತ್ತಿದೆ. ಈ ಎಲ್ಲ ವಿದ್ಯಮಾನಗಳ ನಡುವೆ ಬಿಜೆಪಿ ಕಂಡುಕೊಂಡ ದಾರಿ ರಾಮ್‌ದೇವ್ ಮೂಲಕ ಜನಾಂದೋಲನ ನಡೆಸುವುದು.

ಭ್ರಷ್ಟಾಚಾರ ಎಂಬುದು ಇಂದು ರಾಜಕೀಯದಲ್ಲಿ ಹಾಸುಹೊಕ್ಕಾಗಿರುವ ಪ್ರಕ್ರಿಯೆ. ಸದ್ಯ ಭ್ರಷ್ಟಾಚಾರದಲ್ಲಿ ದೇಶದಲ್ಲಿ ನಂ.1 ಸ್ಥಾನದಲ್ಲಿರುವುದು ಕರ್ನಾಟಕ ರಾಜ್ಯ. ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಬಹುಮತ ಇರುವ ಸರಕಾರವಿದೆ. ಇದರ ಬಗ್ಗೆ ರಾಮ್‌ದೇವ್ ಅವರಲ್ಲಿ ಪತ್ರಕರ್ತರು ಇತ್ತೀಚೆಗೆ ಬೆಂಗಳೂರಿನಲ್ಲಿ ಪ್ರಶ್ನೆಯನ್ನೂ ಕೇಳಿದ್ದರು. ಈ ಕುರಿತು ಯೋಗ ಗುರು ರಾಮ್‌ದೇವ್ ನೀಡಿರುವ ತರ್ಕಗಳನ್ನು ಗಮನಿಸೋಣ..

''ಮೈ ಯೇ ನಹೀ ಮಾನ್ತಾ ಹುಂ ಕಿ ಭಾರತ್ ಏಕ್ ಸೆಕ್ಯುಲರ್ ದೇಶ್ ಹೈ, ಮೈ ಯೇ ಮಾನ್ತಾ ಹುಂ ಕಿ ಭಾರತ್ ಏಕ್ ಆಧ್ಯಾತ್ಮಿಕ್ ದೇಶ್ ಹೈ (ನಾನು ಈ ದೇಶವನ್ನು ಜಾತ್ಯತೀತ ರಾಷ್ಟ್ರ ಎಂದು ಒಪ್ಪುವುದಿಲ್ಲ. ಭಾರತವು ಒಂದು ಆಧ್ಯಾತ್ಮಿಕ ದೇಶವಾಗಿದೆ ಎಂದು ನಾನು ನಂಬಿದ್ದೇನೆ)'' ಎಂದು ರಾಮ್‌ದೇವ್ ಪತ್ರಕರ್ತರ ಮುಂದೆ ತಿಳಿಸಿದಾಗ ''ಹಾಗಾದರೆ ನೀವು ಸಂವಿಧಾನ ವಿರೋಧಿಯೇ?'' ಎಂದು ಪ್ರಶ್ನಿಸಲಾಗಿತ್ತು.

''ಅಲ್ಲ, ನಾನೆಲ್ಲಿ ಹಾಗೆ ಹೇಳಿದೆ ?''

''ಭಾರತವು ಜಾತ್ಯತೀತ ರಾಷ್ಟ್ರ ಎಂದು ಸಂವಿಧಾನ ಹೇಳುತ್ತದೆ. ನೀವು ಅದನ್ನು ಒಪ್ಪುವುದಿಲ್ಲ ಎಂದು ಹೇಳುತ್ತಿದ್ದೀರಿ. ಹಾಗಿದ್ದರೆ ನೀವು ಸಂವಿಧಾನ ವಿರೋಧಿಯಲ್ಲವೇ?'' ಎಂಬುದು ಪತ್ರಕರ್ತರ ವಾದವಾಗಿತ್ತು.

''ಸಂವಿಧಾನವನ್ನು ನಾವು ಆಗಾಗ ತಿದ್ದುಪಡಿ ಮಾಡುವುದಿಲ್ಲವೇ?'' ಇದು ರಾಮ್‌ದೇವ್ ತರ್ಕ.

''ಹೌದು, ಮಾಡುತ್ತೇವೆ. ಭಾರತ ಜಾತ್ಯತೀತ ರಾಷ್ಟ್ರ ಎಂಬುದು ಸಂವಿಧಾನದ ಮೂಲ ಆಶಯ. ಅದನ್ನು ಬದಲಾಯಿಸುವುದು ಸಾಧ್ಯವಿಲ್ಲ. ಭಾರತವು ಸಾರ್ವಭೌಮ, ಜಾತ್ಯತೀತ, ಸಮಾಜವಾದಿ, ಪ್ರಜಾತಾಂತ್ರಿಕ ಗಣರಾಜ್ಯ ಎಂದು ಎಂದು ಸಂವಿಧಾನ ಘೋಷಿಸುತ್ತದೆ. ನೀವು ಅದನ್ನೇ ಒಪ್ಪೋದಿಲ್ಲ ಅಂತೀರಲ್ಲಾ!'' - ಪತ್ರಕರ್ತರು ವಾದಕ್ಕಿಳಿದರು.

''ಹಾಗಲ್ಲ, ಭಾರತವು ಆಧ್ಯಾತ್ಮಿಕವಾಗದಿದ್ದರೆ ನಾಸ್ತಿಕ ದೇಶವಾಗುವ ಅಪಾಯವಿದೆ''- ರಾಮ್‌ದೇವ್ ಹಾರಿಕೆಯ ಉತ್ತರ.

''ನಾಸ್ತಿಕನಾಗಿರುವುದು ತಪ್ಪೇ? ಜಗತ್ತಿನ ಸರ್ವಶ್ರೇಷ್ಠ ನಾಸ್ತಿಕ ಚಾರ್ವಾಕ ಈ ದೇಶದವನೇ ಎಂಬುದು ನಿಮಗೆ ಗೊತ್ತಿಲ್ಲವೇ?'' ಎಂದು ಪತ್ರಕರ್ತರು ವಾದಿಸಿದಾಗ ರಾಮ್‌ದೇವ್ ನಿರುತ್ತರ.

ರಾಮ್‌ದೇವ್ ಅವರ ವಾದಗಳು ಇದೇ ರೀತಿಯಲ್ಲಿರುತ್ತವೆ. ಎಷ್ಟರ ಮಟ್ಟಿಗೆ ರಾಮ್‌ದೇವ್ ಹೋದಲ್ಲೆಲ್ಲಾ ವಿತಂಡವಾದವನ್ನು ಪ್ರಚಾರಪಡಿಸುತ್ತಾರೆ ಎನ್ನುವುದಕ್ಕೆ ಸಣ್ಣ ಸ್ಯಾಂಪಲ್ ಹೀಗಿದೆ; ''ಯಾರೂ ಮೊಟ್ಟೆಯನ್ನು ತಿನ್ನಬಾರದು. ಅದು ಕೋಳಿ ತ್ಯಾಜ್ಯದ್ವಾರದಿಂದ ಹೊರಡುವ ತ್ಯಾಜ್ಯವಾಗಿದೆ''.

ಮೊನ್ನೆ ರಾಮ್‌ಲೀಲಾ ಮೈದಾನದಲ್ಲಿ ಪೊಲೀಸರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಮಹಿಳೆಯೊಬ್ಬರ ಚೂಡಿದಾರ್ ಧರಿಸಿ ಪರಾರಿಯಾದ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ರಾಮ್‌ದೇವ್ ಉತ್ತರಿಸಿದ್ದು - ''ಅದರಲ್ಲೇನಿದೆ ತಪ್ಪು, ಜನ್ಮ ನೀಡುವವಳು ತಾಯಿಯಲ್ಲವೇ?'' ಎಂದು.

ಹೀಗೆ ಸಂಶಯಾಸ್ಪದ ವ್ಯಕ್ತಿಯೋರ್ವ ಭ್ರಷ್ಟಾಚಾರದ ಬಗ್ಗೆ, ದೇಶದ ಭವಿಷ್ಯದ ಬಗ್ಗೆ ಹೋರಾಟಕ್ಕಿಳಿದಾಗ ಇಡೀ ಆಂದೋಲನವನ್ನು ಸಂಶಯದಿಂದಲೇ ನೋಡಬೇಕಾಗಿದೆ. ಭ್ರಷ್ಟಾಚಾರ, ಭ್ರಷ್ಟ ವ್ಯವಸ್ಥೆಯ ಮೇಲಿನ ನಮ್ಮ ಸಿಟ್ಟು, ಆಕ್ರೋಶವು ಸಭ್ಯತೆಯ ಸೋಗಿನಲ್ಲಿರುವ ಅಪಾಯಕಾರಿ ಭ್ರಷ್ಟಾಚಾರಿಯನ್ನು ರಕ್ಷಿಸುವಂತಿರಬಾರದು. ಅಥವಾ ಅಂತಹ ಭ್ರಷ್ಟಚಾರಿಯು ಜನನಾಯಕನೆನಿಸಿಕೊಳ್ಳದಂತೆ ನೋಡಿಕೊಳ್ಳುವುದು ಪ್ರಜ್ಞಾವಂತ ನಾಗರಿಕರ ಕರ್ತವ್ಯವಾಗಿದೆ.



# ಬೀಸುತ್ತಿವೆ ಬದಲಾವಣೆಯ ಅಲೆಗಳು

● ತಬೀರ್ ಕೆ.

'ನಿಮ್ಮ ಯೋಚನೆಯನ್ನು ಬದಲಿಸಿ, ನೀವು ವಿಶ್ವವನ್ನು ಬದಲಿಸುತ್ತೀರಿ'- ನಾರ್ಮನ್ ವಿನ್ಸೆಂಟ್ ಪೀಲ್

ಮೇಲಿನ ಮಾತು Positive Thinking Ideology (ಸಕಾರಾತ್ಮಕ ಚಿಂತನೆ ಸಿದ್ಧಾಂತ)ಯ ಪ್ರತಿಪಾದಕನದ್ದು. ಹೌದು, ಇದು ಒಪ್ಪಿಕೊಳ್ಳಲೇ ಬೇಕಾದ ಮಾತಾಗಿದೆ. ನಮ್ಮ ದೇಶದ ಈ ರಾಜಕೀಯ ಭ್ರಷ್ಟಾಚಾರ, ಪ್ರಭುತ್ವದ ದಮನಕಾರಿ ನೀತಿಗಳು, ಬಡವರ ವಿರುದ್ಧ ಹಾಗೂ ಶ್ರೀಮಂತರ ಪರ ನಿಲುವು, ಅಲ್ಪಸಂಖ್ಯಾತರ, ಹಿಂದುಳಿದ ವರ್ಗಗಳ ಮೇಲಿನ ದೌರ್ಜನ್ಯ... ಹೀಗೆ ಎಲ್ಲಾ ಸಮಸ್ಯೆಗಳನ್ನೂ ಕಾಣುವಾಗ 'ಇದಕ್ಕೆ ಪರಿಹಾರವೆಂಬುದಿಲ್ಲವೇ? ಸ್ವಾತಂತ್ರ್ಯ ಸಿಕ್ಕಿ 60 ವರ್ಷಗಳೇ ಸಂದರೂ ದೇಶವು ಬದಲಾಗುವುದು ಯಾವಾಗ?' ಎಂಬ ಪ್ರಶ್ನೆಯ್ನು ಜನ ಸಾಮಾನ್ಯನನ್ನು ಕಾಡುತ್ತಿದೆ. ಆದರೆ 'ಈ ದೇಶದಲ್ಲಿ ಬದಲಾವಣೆಯೇ ಅಸಾಧ್ಯ. ಹೇಗಿದ್ದರೂ ಪರವಾಗಿಲ್ಲ, ದಿನ ದೂಡಿದರಾಯಿತು' ಎಂಬ ಆತನೇ ಕಂಡುಕೊಳ್ಳುವ ನಿರ್ಲಕ್ಷ್ಯ ಭಾವದ ಉತ್ತರವು ದೇಶದ ಬದಲಾವಣೆಯ ಕಲ್ಪನೆಯ ಹುಟ್ಟನ್ನು ತಡೆಯುತ್ತದೆ.

ವಿನ್ಸೆಂಟ್ ಹೇಳುವಂತೆ ಯೋಚನಾ ಶೈಲಿಯ ಬದಲಾವಣೆಯ ಅಗತ್ಯವಿದೆ. ಆ ಮೂಲಕ ದೇಶದ ಸಾಮಾಜಿಕ, ರಾಜಕೀಯ ವ್ಯವಸ್ಥೆಯನ್ನು ಬದಲಾಯಿಸಬಹುದಾಗಿದೆ. ಇತ್ತೀಚಿಗಿನ ದಿನಗಳಲ್ಲಿ ದೇಶದ ಜನರಲ್ಲಿ ಬದಲಾವಣೆಯ ಕಲ್ಪನೆಯು ಹುಟ್ಟುತ್ತಿರುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ದೇಶದಲ್ಲಿ ಇತ್ತೀಚೆಗೆ ಭ್ರಷ್ಟಾಚಾರದ ವಿರುದ್ಧ ಜನರಲ್ಲಿ ಉಂಟಾದ ಜಾಗೃತಿ, ಅಸೆಂಬ್ಲಿ ಚುನಾವಣೆಯ ಫಲಿತಾಂಶ, ಕೋಮುವಾದದ ಸೋಲು, ಹೊಸ ರಾಜಕೀಯ ಪಕ್ಷಗಳ ಉದಯ ಮತ್ತು ಬೆಳವಣಿಗೆ.. ಇವೆಲ್ಲಾ ದೇಶದ ಜನರ ಮನಸ್ಸಿನಲ್ಲಿ ಬೀಸಿರುವ ಬದಲಾವಣೆಯ ಅಲೆಯ ಪ್ರತಿಬಿಂಬವಾಗಿದೆ. ಅದನ್ನು ಹೈಜಾಕ್ ಮಾಡುವ ಕೋಮುವಾದಿ ಗುಂಪುಗಳಿಗೆ ಉಂಟಾಗಿರುವ ಸೋಲನ್ನೂ ನಾವು ಗಮನಿಸಬಹುದಾಗಿದೆ. ಅಂತೂ ದೇಶದಲ್ಲಿ

*ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೆಯಲ್ಲಿ 34 ವರ್ಷಗಳ ಕಾಲ ಅಧಿಕಾರವನ್ನು ಅನುಭವಿಸಿದ್ದ ಕಮ್ಯುನಿಸ್ಟ್ ನೇತೃತ್ವದ ಎಡರಂಗ ಸೋಲನುಭವಿಸಿದೆ. 2006ರ ವಿಧಾನಸಭಾ ಚುನಾವಣೆಯಲ್ಲಿ ಕೇವಲ 30 ಸೀಟುಗಳನ್ನು ಪಡೆದಿದ್ದ ತೃಣಮೂಲ ಕಾಂಗ್ರೆಸ್, ಈ ಬಾರಿ 233 ಸೀಟುಗಳೊಂದಿಗೆ ಅಧಿಕಾರಕ್ಕೇರಿದೆ. ಕಮ್ಯುನಿಸ್ಟರಿಂದ ಬೇಸತ್ತಿದ್ದ ಜನ ತೃಣಮೂಲಕ್ಕೆ ಮತ ಒತ್ತಿದರು. ಅದರೊಂದಿಗೆ ಕೇವಲ ಒಂದೂವರೆ ವರ್ಷಗಳ ಹಿಂದೆ ಹುಟ್ಟಿರುವ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಪಾತ್ರ ವಹಿಸಿರುವುದು ಮತ್ತು ಜನರ ಮನಸ್ಸಿನಲ್ಲಿ ಸ್ಥಾನವನ್ನು ಗಳಿಸುತ್ತಿರುವುದು ಇಲ್ಲಿ ಉಲ್ಲೇಖನೀಯವಾಗಿದೆ.*

ಜನ ಬದಲಾವಣೆಯನ್ನು ಬಯಸುತ್ತಿರುವುದಂತೂ ಸತ್ಯ.



ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೆಯಲ್ಲಿ 34 ವರ್ಷಗಳ ಕಾಲ ಅಧಿಕಾರವನ್ನು ಅನುಭವಿಸಿದ್ದ ಕಮ್ಯುನಿಸ್ಟ್ ನೇತೃತ್ವದ ಎಡರಂಗ ಸೋಲನುಭವಿಸಿದೆ. 2006ರ ವಿಧಾನಸಭಾ ಚುನಾವಣೆಯಲ್ಲಿ ಕೇವಲ 30 ಸೀಟುಗಳನ್ನು ಪಡೆದಿದ್ದ ತೃಣಮೂಲ ಕಾಂಗ್ರೆಸ್, ಈ ಬಾರಿ 233 ಸೀಟುಗಳೊಂದಿಗೆ ಅಧಿಕಾರಕ್ಕೇರಿದೆ. ಕಮ್ಯುನಿಸ್ಟರಿಂದ ಬೇಸತ್ತಿದ್ದ ಜನ ತೃಣಮೂಲಕ್ಕೆ ಮತ ಒತ್ತಿದರು. ಅದರೊಂದಿಗೆ ಕೇವಲ ಒಂದೂವರೆ ವರ್ಷಗಳ ಹಿಂದೆ ಹುಟ್ಟಿರುವ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಪಾತ್ರ ವಹಿಸಿರುವುದು ಮತ್ತು ಜನರ ಮನಸ್ಸಿನಲ್ಲಿ ಸ್ಥಾನವನ್ನು ಗಳಿಸುತ್ತಿರುವುದು ಇಲ್ಲಿ ಉಲ್ಲೇಖನೀಯವಾಗಿದೆ.

ಪಶ್ಚಿಮ ಬಂಗಾಳದಲ್ಲಿ ಒಟ್ಟು 19 ಜಿಲ್ಲೆಗಳಿವೆ. ಅವುಗಳಲ್ಲಿ 7 ಜಿಲ್ಲೆಗಳಲ್ಲಿ ಎಸ್‌ಡಿಪಿಐ ಜಿಲ್ಲಾ ಸಮಿತಿಗಳನ್ನು ಹೊಂದಿದೆ. ಸ್ಥಾಪನೆಗೊಂಡಿರುವ ಒಂದೂವರೆ ವರ್ಷಗಳೊಳಗಾಗಿ ಇಲ್ಲಿ ಒಟ್ಟು 3,500 ಕೇಡರ್‌ಗಳನ್ನು ಹಾಗೂ 3000 ಮೆಂಬರ್‌ಗಳನ್ನು ಪಕ್ಷವು ಹೊಂದಿದೆ. ಈ ಬಾರಿಯ ಅಸೆಂಬ್ಲಿ ಚುನಾವಣೆಯಲ್ಲಿ ಪಕ್ಷವು ಮುರ್ಶಿದಾಬಾದ್ ಜಿಲ್ಲೆಯಲ್ಲಿ 10 ಅಭ್ಯರ್ಥಿಗಳನ್ನು ಹಾಗೂ 94ನೆ ಪರಗಣ ದಕ್ಷಿಣದಲ್ಲಿ ಒಬ್ಬನನ್ನು ಕಣಕ್ಕಿಳಿಸಿತ್ತು. ಸ್ಪರ್ಧಿಸಿದ ಹಲವು ಕ್ಷೇತ್ರಗಳಲ್ಲಿ ಪಕ್ಷವು ತೃತೀಯ ಸ್ಥಾನವನ್ನು ಗಳಿಸಿದೆ. ಇಲ್ಲಿ ಒಟ್ಟು 38,000ಕ್ಕೂ ಅಧಿಕ ಓಟುಗಳನ್ನು ಪಡೆದಿರುವ ಎಸ್‌ಡಿಪಿಐ, ಒಂದೇ ಕ್ಷೇತ್ರದಲ್ಲಿ 6000ಕ್ಕಿಂತಲೂ ಅಧಿಕ ಮತಗಳನ್ನು ಪಡೆದಿತ್ತು.

ಮುರ್ಶಿದಾಬಾದ್ ಮುಸ್ಲಿಮ್ ಬಾಹುಳ್ಯವಿರುವ ಜಿಲ್ಲೆಯಾಗಿದೆ. ಮೊಘಲ್ ಆಡಳಿತದ ವೇಳೆ ನವಾಬರು ಮುರ್ಶಿದಾಬಾದ್‌ಅನ್ನು ಕೇಂದ್ರವಾಗಿಟ್ಟುಕೊಂಡು ಬಂಗಾಳವನ್ನು ಆಳುತ್ತಿದ್ದರು. ಆದರೆ ಅದೇ ಜಿಲ್ಲೆಯು ಈಗ ದೇಶದಲ್ಲೇ ಅತ್ಯಂತ ಹಿಂದುಳಿದಿರುವ ಜಿಲ್ಲೆಯಾಗಿದೆ. ಇದನ್ನು ಸಾಚಾರ್ ಸಮಿತಿ ವರದಿಯು ಬಹಿರಂಗಪಡಿಸಿದೆ. 60% ಮಂದಿ ಇಲ್ಲಿ ಬಡತನ ರೇಖೆಗಿಂತ ಕೆಳ ಮಟ್ಟದಲ್ಲಿ ಜೀವಿಸುತ್ತಿರುವವರಾಗಿದ್ದಾರೆ. ಇಲ್ಲಿ ಸರಿಯಾದ ಸಾರಿಗೆ ವ್ಯವಸ್ಥೆ ಅಥವಾ ಮೂಲಭೂತ ಸೌಕರ್ಯಗಳಿಲ್ಲ. ಕಳೆದ 34 ವರ್ಷಗಳ ಕಾಲ ಎಡಪಕ್ಷಗಳು ರಾಜ್ಯವನ್ನು ಆಳಿದ್ದರೂ ಮುರ್ಶಿದಾಬಾದ್‌ನ ಮುಸ್ಲಿಮರಿಗೆ ಯಾವುದೇ ಪ್ರಯೋಜನವಾಗಿಲ್ಲ.

ಜಿಲ್ಲೆಯಲ್ಲಿ ಮುಸ್ಲಿಮರ ಜನಸಂಖ್ಯೆ ಅಧಿಕವಿದ್ದರೂ ರಾಷ್ಟ್ರೀಯ ಪಕ್ಷಗಳು ಮುಸ್ಲಿಮೇತರ ಅಭ್ಯರ್ಥಿಗಳಿಗೆ ಟಿಕೆಟ್ ನೀಡುತ್ತಿದ್ದವು. ಇಲ್ಲಿನ ಬರ್ಹಾನ್‌ಪುರ ಕ್ಷೇತ್ರದಲ್ಲಿ 70% ಮುಸ್ಲಿಮ್ ಬಾಹುಳ್ಯವಿದ್ದರೂ, ಕಳೆದ ನಾಲ್ಕು ಅಸೆಂಬ್ಲಿ ಚುನಾವಣೆಗಳಲ್ಲಿ ಯಾವುದೇ ಪ್ರಮುಖ ಪಕ್ಷಗಳು ಮುಸ್ಲಿಮ್ ಅಭ್ಯರ್ಥಿಗಳನ್ನು ಇಲ್ಲಿ ಕಣಕ್ಕಿಳಿಸಲಿಲ್ಲ. ಇದನ್ನು ಮನಗಂಡ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಈ ಬಾರಿ ಇಲ್ಲಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿತು. ಎಸ್‌ಡಿಪಿಐ ಅಭ್ಯರ್ಥಿಯು ಇಲ್ಲಿ ಗಣನೀಯ ಮತವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

94ನೆ ಪರಗಣ ದಕ್ಷಿಣದಲ್ಲಿ ಎಸ್‌ಡಿಪಿಐ ಹೆಚ್ಚೇನೂ ಕಾರ್ಯಕರ್ತರನ್ನು ಹೊಂದಿರಲಿಲ್ಲ. ಎಡ ರಂಗ ಸರಕಾರದಲ್ಲಿ ಭೂ ಸುಧಾರಣಾ ಸಚಿವರಾಗಿದ್ದ ಅಬ್ದುಲ್ ರಝಾಕ್ ವಿರುದ್ಧ ಎಸ್‌ಡಿಪಿಐ ತನ್ನ ಅಭ್ಯರ್ಥಿಯನ್ನು ಇಳಿಸಿತ್ತು. ಇಲ್ಲಿ ಚುನಾವಣಾ ಪ್ರಚಾರ ನಡೆಸುತ್ತಿರುವಾಗ ಎಸ್‌ಡಿಪಿಐ ಕಾರ್ಯಕರ್ತರ ಮೇಲೆ ಕಮ್ಯುನಿಸ್ಟ್ ಗೂಂಡಾಗಳು ದಾಳಿಗೆ ಪ್ರಯತ್ನಿಸಿದ್ದರು. ಆದರೆ ಪಟ್ಟಭದ್ರ ಹಿತಾಸಕ್ತಿಗಳ ತೋಳ್ಬಲವನ್ನು ಎಸ್‌ಡಿಪಿಐ ಸಮರ್ಥವಾಗಿ ಎದುರಿಸಿತ್ತು.

ಎಸ್‌ಡಿಪಿಐಯ ಪಶ್ಚಿಮ ಬಂಗಾಳ ರಾಜ್ಯಾಧ್ಯಕ್ಷ ತೌಹಿದ್

ಉಲ್ ಇಸ್ಲಾಮ್ ಹೇಳುವಂತೆ, ''ಪಕ್ಷವು ರಾಜ್ಯದಲ್ಲಿ ಬಹಳ ಬೇಗನೇ ಜನಪ್ರಿಯವಾಗುತ್ತಿದೆ. ಅಭಿಯಾನದ ವೇಳೆ ಜನರು ನಮ್ಮ ಬಗ್ಗೆ ಉತ್ತಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆದರೆ ಅವರಿಗೆ ಏನೋ ಒಂದು ಹಿಂಜರಿಕೆಯಿದೆ. ಈವರೆಗೆ ಆಳಿದ ಪಕ್ಷವು ಜನರನ್ನು ಭೀತಿಯಲ್ಲಿರಿಸಿದೆ. ಅದು ಕ್ರಮೇಣವಾಗಿ ದೂರಸರಿಯುವ ಭರವಸೆಯಿದೆ. ಜನರು ದಲಿತ-ಮುಸ್ಲಿಮ್ ಪಕ್ಷವೊಂದರ ಅನ್ವೇಷಣೆಯಲ್ಲಿದ್ದಾರೆ. ದಲಿತರು ಮತ್ತು ಮುಸ್ಲಿಮರು ರಾಜ್ಯದಲ್ಲಿ ರಾಜಕೀಯವಾಗಿ ಉತ್ತಮ ನಾಯಕತ್ವ ಹೊಂದಿಲ್ಲ. ಈ ಎರಡೂ ವರ್ಗಗಳನ್ನು ಎಲ್ಲಾ ಪಕ್ಷಗಳೂ ಓಟ್ ಬ್ಯಾಂಕ್‌ಗಾಗಿ ಬಳಸುತ್ತಿವೆ. ರಾಜ್ಯದಲ್ಲಿ ಮುಸ್ಲಿಮ್ ಲೀಗ್‌ನ ಮೇಲೆ ಮುಸ್ಲಿಮರಿಗೆ ಸಂಪೂರ್ಣ ನಂಬಿಕೆ ಹೊರಟು ಹೋಗಿದೆ. ಚುನಾವಣೆಯ ನಂತರ ದಲಿತ ನಾಯಕರು ನಮ್ಮನ್ನು ಭೇಟಿಯಾಗುತ್ತಿದ್ದು, ಭವಿಷ್ಯದಲ್ಲಿ ದಲಿತ-ಮುಸ್ಲಿಮ್ ಒಗ್ಗಟ್ಟಿನೊಂದಿಗೆ ರಾಜ್ಯದಲ್ಲಿ ಎಸ್‌ಡಿಪಿಐ ಬಲಿಷ್ಠವಾಗಿ ಬೆಳೆಯಲಿದೆ ಎಂಬ ನಂಬಿಕೆ ನನಗಿದೆ. ಅಲ್ಲದೆ ರಾಷ್ಟ್ರೀಯ



ಮಟ್ಟದಲ್ಲಿ ಪಕ್ಷವು ಅತ್ಯಂತ ಬೇಗನೆ ಬೆಳೆಯಲಿರುವುದು ಪಶ್ಚಿಮ ಬಂಗಾಳ ಹಾಗೂ ಮಣಿಪುರಗಳಲ್ಲಿ ಎಂಬುದು ನನ್ನ ಅಭಿಪ್ರಾಯ. ಯಾಕೆಂದರೆ ಈ ಎರಡು ರಾಜ್ಯಗಳಲ್ಲಿ ಮುಸ್ಲಿಮರು, ದಲಿತರು ಪರ್ಯಾಯ ಪಕ್ಷಗಳನ್ನು ಹೊಂದಿಲ್ಲ''.

ತಮಿಳುನಾಡಿನಲ್ಲೂ ಎಸ್‌ಡಿಪಿಐ ಪರ್ಯಾಯ ರಾಜಕೀಯ ಪಕ್ಷವಾಗಿ ಮೂಡಿಬರುತ್ತಿದೆ. ಈ ಬಾರಿ ಜನ ಡಿಎಂಕೆಯ

*ತಮಿಳುನಾಡಿನಲ್ಲೂ ಎಸ್‌ಡಿಪಿಐ ಪರ್ಯಾಯ ರಾಜಕೀಯ ಪಕ್ಷವಾಗಿ ಮೂಡಿಬರುತ್ತಿದೆ. ಈ ಬಾರಿ ಜನ ಡಿಎಂಕೆಯ ಭ್ರಷ್ಟಾಚಾರ, ಕುಟುಂಬ ರಾಜಕಾರಣಕ್ಕೆ ಬೇಸತ್ತು ಎಐಎಡಿಎಂಕೆಗೆ ಮತ ನೀಡಿದ್ದಾರೆ. ಆದರೆ ಎಐಎಡಿಎಂಕೆಯ ಮುಖ್ಯಸ್ಥೆ ಜಯಲಲಿತಾ ಭ್ರಷ್ಟಾಚಾರ ಮುಕ್ತಳೇನೂ ಅಲ್ಲ. ಹಲವು ಭ್ರಷ್ಟಾಚಾರ ಹಾಗೂ ಕೋಮುವಾದದ ಕಳಂಕ ಈಕೆಯ ಮೇಲಿದೆ. ಆದರೆ ಅಲ್ಲಿನ ಜನಕ್ಕೆ ಡಿಎಂಕೆಯನ್ನು ಬಿಟ್ಟರೆ ಎಐಎಡಿಎಂಕೆಯಲ್ಲದೆ ಬೇರೆ ಆಯ್ಕೆಯಿರಲಿಲ್ಲ. ಇವೆಲ್ಲದರ ಮಧ್ಯೆ ಎಸ್‌ಡಿಪಿಐ ಇಲ್ಲಿ ಉತ್ತಮ ಬೆಳವಣಿಗೆಯನ್ನು ಕಾಣುತ್ತಿದೆ.*

ಭ್ರಷ್ಟಾಚಾರ, ಕುಟುಂಬ ರಾಜಕಾರಣಕ್ಕೆ ಬೇಸತ್ತು ಎಐಎಡಿಎಂಕೆಗೆ ಮತ ನೀಡಿದ್ದಾರೆ. ಆದರೆ ಎಐಎಡಿಎಂಕೆಯ ಮುಖ್ಯಸ್ಥೆ ಜಯಲಲಿತಾ ಭ್ರಷ್ಟಾಚಾರ ಮುಕ್ತಳೇನೂ ಅಲ್ಲ. ಹಲವು ಭ್ರಷ್ಟಾಚಾರ ಹಾಗೂ ಕೋಮುವಾದದ ಕಳಂಕ ಈಕೆಯ ಮೇಲಿದೆ. ಆದರೆ ಅಲ್ಲಿನ ಜನಕ್ಕೆ ಡಿಎಂಕೆಯನ್ನು ಬಿಟ್ಟರೆ ಎಐಎಡಿಎಂಕೆಯಲ್ಲದೆ ಬೇರೆ ಆಯ್ಕೆಯಿರಲಿಲ್ಲ. ಇವೆಲ್ಲದರ ಮಧ್ಯೆ ಎಸ್‌ಡಿಪಿಐ ಇಲ್ಲಿ ಉತ್ತಮ ಬೆಳವಣಿಗೆಯನ್ನು ಕಾಣುತ್ತಿದೆ.

ತಮಿಳುನಾಡಿನಲ್ಲಿ ಎಸ್‌ಡಿಪಿಐ 7 ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಇಳಿಸಿತ್ತು. ಅವರಲ್ಲಿ ಇಬ್ಬರು ತೃತೀಯ ಸ್ಥಾನ ಗಳಿಸಿರುವುದು ಎಐಎಡಿಎಂಕೆ ಮತ್ತು ಡಿಎಂಕೆಗೆ ಪರ್ಯಾಯವಾಗಿ ಎಸ್‌ಡಿಪಿಐ ಬೆಳೆಯುತ್ತಿರುವುದನ್ನು ಸೂಚಿಸುತ್ತದೆ. ಅಲ್ಲದೆ ಈ ಅಭ್ಯರ್ಥಿಗಳು 29,000ಕ್ಕೂ ಅಧಿಕ ಮತವನ್ನು ಸೆಳೆದಿದ್ದಾರೆ.

ಕಡಯಲ್ಲನ್ನೂರು ಕ್ಷೇತ್ರದಲ್ಲಿ ಒಟ್ಟು 16 ಮಂದಿ ಕಣದಲ್ಲಿದ್ದರು. ಇಲ್ಲಿ ಎಸ್‌ಡಿಪಿಐ ಅಭ್ಯರ್ಥಿ ಮುಹಮ್ಮದ್ ಮುಬಾರಕ್ 6649 ಮತಗಳೊಂದಿಗೆ ತೃತೀಯ ಸ್ಥಾನವನ್ನು ಪಡೆದಿದ್ದಾರೆ. ಪೂಂಪುಹಾರ್‌ನಲ್ಲಿ ಒಟ್ಟು ಎಂಟು ಮಂದಿ ಕಣದಲ್ಲಿದ್ದರು. ಇಲ್ಲಿ ಎಸ್‌ಡಿಪಿಐ ಅಭ್ಯರ್ಥಿ ಮುಹಮ್ಮದ್ ತರೀಕ್ ಎಂ.ವೈ. ತೃತೀಯ ಸ್ಥಾನವನ್ನು ಪಡೆದಿದ್ದಾರೆ.



ಇವರೀರ್ವರೂ ರಾಷ್ಟ್ರೀಯ ಪಕ್ಷವಾದ ಬಿಜೆಪಿಗಿಂತ ಹೆಚ್ಚಿನ ಮತವನ್ನು ಸೆಳೆದಿದ್ದರು. ತ್ರಿಪುರದಲ್ಲಿ ಒಟ್ಟು 12 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಇಲ್ಲಿ ಎಸ್‌ಡಿಪಿಐ ಅಭ್ಯರ್ಥಿ ಮುಹಮ್ಮದ್ ಅಮಾನುಲ್ಲಾ 4ನೆ ಸ್ಥಾನವನ್ನು ಗಳಿಸಿದ್ದಾರೆ. ಹಾರ್ಬೌರ್ ಕ್ಷೇತ್ರದಲ್ಲಿ ಒಟ್ಟು 14 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಇಲ್ಲಿ ಎಸ್‌ಡಿಪಿಐ ಅಭ್ಯರ್ಥಿ ಮುಹಮ್ಮದ್ ಹುಸೈನ್ ಪಿ. 4ನೆ ಸ್ಥಾನವನ್ನು ಕಾಯ್ದುಕೊಂಡಿದ್ದರು. ತೊಂಡಮುತ್ತೂರು ಕ್ಷೇತ್ರದಲ್ಲಿ ಒಟ್ಟು 10 ಮಂದಿ ಸ್ಫರ್ಧಿಸಿದ್ದರು. ಅದರಲ್ಲಿ ಎಸ್‌ಡಿಪಿಐ ಅಭ್ಯರ್ಥಿ ಉಮರ್ ಕಠಾಪ್ ನಾಲ್ಕನೆ ಸ್ಥಾನವನ್ನು ಪಡೆದಿದ್ದರು.

ಪಕ್ಷದ ತಮಿಳುನಾಡು ಪ್ರಧಾನ ಕಾರ್ಯದರ್ಶಿ ಮುಬಾರಕ್ ಹೇಳುವಂತೆ, ''ಈ ಚುನಾವಣಾ ಫಲಿತಾಂಶ ರಾಜ್ಯದಲ್ಲಿ ಎಸ್‌ಡಿಪಿಐ ಜನಪ್ರಿಯವಾಗುತ್ತಿರುವುದನ್ನು ಸೂಚಿಸುತ್ತದೆ. ಅಭಿಯಾನದ ವೇಳೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಇಲ್ಲಿರುವ ಎರಡೂ ಮೈತ್ರಿಗಳು ಚುನಾವಣೆಯ ವೇಳೆ ಹೆಂಡ, ಹಣದ ಹೊಳೆಯನ್ನು ಹೊರೆಸಿದ್ದವು. ಚುನಾವಣೆಗೆ ಮುನ್ನಾ ದಿನ ಮತಕ್ಕಾಗಿ ಕೋಟ್ಯಂತರ ರೂಪಾಯಿಗಳನ್ನು ಜನರಿಗೆ ಹಂಚಲಾಗಿತ್ತು. ಆದರೆ ಎಸ್‌ಡಿಪಿಐ ಸಾಂವಿಧಾನಿಕವಾಗಿ ಸ್ಪರ್ಧಿಸಿ ಜನರ ಮನ ಗೆದ್ದಿತ್ತು. ಪಕ್ಷಕ್ಕೆ ರಾಜ್ಯದಲ್ಲಿ ಉತ್ತಮ ಭವಿಷ್ಯವಿದೆ''.

**ಕೇವಲ ಒಂದೂವರೆ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿರುವ ಪಕ್ಷವೊಂದು ಇಷ್ಟು ಬೇಗನೆ 16 ರಾಜ್ಯಗಳಲ್ಲಿ ಅಸ್ತಿತ್ವವನ್ನು ಕಾಣುವುದು ಸುಲಭದ ವಿಚಾರವಲ್ಲ. ಎಸ್‌ಡಿಪಿಐ ಈ ಚುನಾವಣೆಯಲ್ಲಿ ಸ್ಥಾನವನ್ನು ಗಿಟ್ಟಿಸಿಕೊಳ್ಳಲು ವಿಫಲವಾಗಿದ್ದರೂ ಪಕ್ಷದ ಈ ಮಟ್ಟಿನ ಬೆಳವಣಿಗೆಯು ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಸಂಚಲನವನ್ನುಂಟುಮಾಡಿದೆ. ಕೆಲವೇ ವರ್ಷಗಳಲ್ಲಿ ಇದು ದೇಶದಲ್ಲಿ ರಾಜಕೀಯ ಸ್ಥಿತಿಯನ್ನು ಬದಲಾಯಿಸಲಿದೆ ಎಂಬ ಭಯವನ್ನು ದೇಶದ ಪ್ರಮುಖ ಪಕ್ಷಗಳಲ್ಲಿ ಅದು ಉಂಟುಮಾಡಿದೆ.**

ಈ ಅಸೆಂಬ್ಲಿ ಚುನಾವಣೆಯಲ್ಲಿ ಎಸ್‌ಡಿಪಿಐ ಅತ್ಯಧಿಕ ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವುದು ಕೇರಳದಲ್ಲಾಗಿತ್ತು. ಪಕ್ಷವು ಒಟ್ಟು 82 ಕಡೆಗಳಲ್ಲಿ ಸ್ಪರ್ಧಿಸಿತ್ತು. ರಾಜ್ಯದಲ್ಲಿ 1.62 ಲಕ್ಷ ಮತಗಳನ್ನು ಸೆಳೆಯಲು ಪಕ್ಷವು ಯಶಸ್ವಿಯಾಗಿತ್ತು. ಕೇರಳದಲ್ಲಿ ಹಲವು ಮುಸ್ಲಿಮ್ ಪಕ್ಷಗಳು ಇರುವುದರ ಹೊರತಾಗಿಯೂ ಎಸ್‌ಡಿಪಿಐ ಮೊದಲ ಬಾರಿಗೆ ಸ್ಪರ್ಧಿಸಿ ಇಷ್ಟೊಂದು ಮಟ್ಟದಲ್ಲಿ ಮತ ಪಡೆದಿರುವುದು ಅಚ್ಚರಿಯೇ ಆಗಿದೆ. ಅಲ್ಲದೆ ಎರಡು ಕಡೆಗಳಲ್ಲಿ ಎಸ್‌ಡಿಪಿಐ 5000ಕ್ಕೂ ಅಧಿಕ ಮತಗಳನ್ನು ಪಡೆದಿದೆ.

ಕೊಲ್ಲಂ ಜಿಲ್ಲೆಯ ಕರುನಾಗಪಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿದ ನಾಸಿರುದ್ದೀನ್ ಎಲಮರಮ್ 7,645 ಮತಗಳನ್ನು ಪಡೆದರೆ, ಇಡುಕ್ಕಿ ಜಿಲ್ಲೆಯ ತೋಡುಪ್ಪುರ್ಝ ಕ್ಷೇತ್ರದಿಂದ ಸ್ಪರ್ಧಿಸಿದ ಎಂ.ಎ.ನಜೀಬ್ 5,386 ಮತಗಳನ್ನು ಗಳಿಸಿದ್ದರು.

ಕಣ್ಣೂರು ಜಿಲ್ಲೆಯ ಕುತುಪರಂಬ ಹಾಗೂ ಇನ್ನು ಕೆಲವೆಡೆಗಳಲ್ಲಿ ಕಮ್ಯುನಿಸ್ಟ್ ಗೂಂಡಾಗಳು ಇತರ ಪಕ್ಷಗಳ ಬೂತ್‌ಗಳನ್ನು ತೆರೆಯಲು ಅನುಮತಿಸುತ್ತಿರಲಿಲ್ಲ. ಪ್ರಮುಖ ಪಕ್ಷಗಳೂ ಈ ಪ್ರದೇಶಗಳಲ್ಲಿ ಬೂತ್‌ಗಳನ್ನು ತೆರೆಯಲು ಹೆದರುತ್ತಿದ್ದವು. ಆದರೆ ಕಮ್ಯುನಿಸ್ಟ್‌ನ ತೋಳ್ಬಲದ ರಾಜಕೀಯವನ್ನು ಸಮರ್ಥವಾಗಿ ಎದುರಿಸಿದ ಎಸ್‌ಡಿಪಿಐ ಈ ಎಲ್ಲಾ ಕಡೆಗಳಲ್ಲೂ ಬೂತ್‌ಗಳನ್ನು ತೆರೆದಿತ್ತು.

ಕೇವಲ ಒಂದೂವರೆ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿರುವ ಪಕ್ಷವೊಂದು ಇಷ್ಟು ಬೇಗನೆ 16 ರಾಜ್ಯಗಳಲ್ಲಿ ಅಸ್ತಿತ್ವವನ್ನು ಕಾಣುವುದು ಸುಲಭದ ವಿಚಾರವಲ್ಲ. ಎಸ್‌ಡಿಪಿಐ ಈ ಚುನಾವಣೆಯಲ್ಲಿ ಸ್ಥಾನವನ್ನು ಗಿಟ್ಟಿಸಿಕೊಳ್ಳಲು ವಿಫಲವಾಗಿದ್ದರೂ ಪಕ್ಷದ ಈ ಮಟ್ಟಿನ ಬೆಳವಣಿಗೆಯು ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಸಂಚಲನವನ್ನುಂಟುಮಾಡಿದೆ. ಕೆಲವೇ ವರ್ಷಗಳಲ್ಲಿ ಇದು ದೇಶದಲ್ಲಿ ರಾಜಕೀಯ ಸ್ಥಿತಿಯನ್ನು ಬದಲಾಯಿಸಲಿದೆ ಎಂಬ ಭಯವನ್ನು ದೇಶದ ಪ್ರಮುಖ ಪಕ್ಷಗಳಲ್ಲಿ ಅದು ಉಂಟುಮಾಡಿದೆ.

■ಕೆ.ವೈ ಅಬ್ದುಲ್ ಹಮೀದ್
kukkaje09@gmail.com

# ಬಸ್ಸು ಪ್ರಯಾಣ

ಬೆಳಗಿನ ಪ್ರಖರ ಬಿಸಿಲಿಗೆ ಅಬ್ಬಾಸ್ ಸಂಪೂರ್ಣ ಬೆವತು ಹೋಗಿದ್ದ. ಸಂಬಂಧಿಕರ ಮದುವೆಯಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದ ಅವನು ತನ್ನ ಮನೆಯಿಂದ ಬೆಳಗ್ಗೆ ಬೇಗನೆ ಹೊರಟಿದ್ದರೂ ಬಿ.ಸಿ.ರೋಡು ತಲುಪುವಷ್ಟರಲ್ಲಿ ಸಮಯ ಒಂಭತ್ತಾಗಿತ್ತು. ಮುಂಗಾರು ಮಳೆಗೆ ಮೊದಲು ಕರಾವಳಿಯಲ್ಲಿ ಸಾಮಾನ್ಯವಾಗಿ ಇರುವ ಉರಿ ಬಿಸಿಲಿನ ಪ್ರತಾಪ ಇಂದು ಬೇಗನೆ ತನ್ನ ಪ್ರತಾಪ ತೋರತೊಡಗಿತ್ತು. ಮದುವೆ ಮನೆಗೆ ಹೋಗುವ ಉದ್ದೇಶದಿಂದ ಶುಭ್ರ ವಸ್ತ್ರ ಧರಿಸಿ ಬಂದಿದ್ದ ಅಬ್ಬಾಸ್ ಬಟ್ಟೆ ಕೊಳೆಯಾಗದಂತೆ ಸಾಕಷ್ಟು ಎಚ್ಚರಿಕೆ ವಹಿಸಿಕೊಂಡು ಬಂದಿದ್ದರೂ ಬೆವರು ಅವನನ್ನು ಸಂಪೂರ್ಣ ತೊಯ್ದು ಬಿಟ್ಟಿತ್ತು. ವಾಹನಗಳ ಓಡಾಟದಿಂದ ಎದ್ದ ದೂಳು ಬಟ್ಟೆಗೆ ಮೆತ್ತಿಕೊಳ್ಳದಂತೆ ನೋಡಿಕೊಳ್ಳಲು ಕರವಸ್ತ್ರದಿಂದ ಅವನು ಆಗಾಗ ಕೊಡವಿಕೊಳ್ಳುತ್ತಿದ್ದ.

ಮದುವೆ ಮನೆಗೆ ತಲುಪಬೇಕಾದರೆ ಇನ್ನೂ ಇಪ್ಪತ್ತೈದು ಕಿಲೋಮೀಟರ್ ಪ್ರಯಾಣಿಸಬೇಕು ಎಂಬ ವಾಸ್ತವವನ್ನು ನೆನೆದು ಅವನು ಇನ್ನಷ್ಟು ಬೆವೆತು ಹೋಗಿದ್ದ. 'ಇವತ್ತು ಮಳೆ ಬರುವ ಸಾಧ್ಯತೆ ಇದೆ. ಬಿಸಿಲು ತುಂಬಾ ಜೋರಾಗಿದೆ ’ಬಳಿಯಲ್ಲಿ ನಿಂತ ವೃದ್ಧರೊಬ್ಬರು ಹಣೆಯಿಂದ ಹರಿಯುತಿದ್ದ ಬೆವರನ್ನು ತೋರು ಬೆರಳಿನಿಂದ ಒರೆಸಿಕೊಂಡು ತನ್ನಪಾಡಿಗೆ ಹೇಳಿಕೊಳ್ಳುತ್ತಿದ್ದರು. ರಸ್ತೆಗೆ ಹೊಂದಿಕೊಂಡಂತೆ ಇರುವ ಫ್ಲೈಓವರ್‌ನ ಬದಿಯಲ್ಲಿ ಅದಾಗಲೆ ಉದ್ದಕ್ಕೂ ಜನಸಂದಣಿ ನೆರೆದಿತ್ತು. ‘‘ಇದೇನು ಇಷ್ಟೊಂದು ಜನ ಇಂದು ?’’ ಎಂದು ಬಳಿಯೇ ಇದ್ದ ಅಪರಿಚಿತರೊಬ್ಬರಲ್ಲಿ ಅಬ್ಬಾಸ್ ಕೇಳಿದಾಗ ಈತ ಎಲ್ಲೋ ದೂರದ ಊರಿನವನಿರಬಹುದೋ ಎಂಬ ಅನುಮಾನವನ್ನು ಮುಖದಲ್ಲಿ ತೋರ್ಪಡಿಸುತ್ತಾ ‘ಇಲ್ಲಿ ಇದು ಸಾಮಾನ್ಯ ಮಾರಾಯರೆ, ನಿಮ್ಮ ಊರು ಯಾವುದು ?’ ಎಂದು ಕೇಳಿದರು. ಅವರ ಪ್ರಶ್ನೆಗೆ ಮುಜುಗರಗೊಂಡ ಅಬ್ಬಾಸ್ ದೂರದಲ್ಲಿ ಪರಿಚಿತನನ್ನು ಕಂಡ ಭಾವದಲ್ಲಿ ಆತನ ಕರೆಗೆ ಓಗೊಡುವವನಂತೆ ಅತ್ತ ನಡೆದ. ಅಷ್ಟರಲ್ಲಿ ಜನರಿಂದ ತುಂಬಿ ತುಳುಕುವ ಎರಡು ಬಸ್ಸುಗಳು ಒಂದನ್ನು ಮತ್ತೊಂದು ಬೆನ್ನಟ್ಟುವಂತೆ ಕಾಂ ಕೀ..ಎಂದು ಜೋರಾಗಿ ಹಾರ್ನ್ ಭಾರಿಸುತ್ತಾ ಟಾರು ರಸ್ತೆಯಿಂದ ಇಳಿದು ಬದಿಗೆ ಸರಿದು ದೂಳೆಬ್ಬಿಸುತ್ತಾ ಧಾವಿಸಿ ಬರುವುದನ್ನು ಕಂಡ ಅಲ್ಲಿ ಸೇರಿದ್ದ ಜನ ತಮ್ಮ ಪ್ರಯಾಣ ಪರಲೋಕದತ್ತ ಸಾಗುವುದೋ ಎಂಬ ಆತಂಕದಿಂದ ಒಮ್ಮೆಲೆ ಸಿಕ್ಕ ಸಿಕ್ಕ ಕಡೆಗೆ ಓಡತೊಡಗಿದರು. ಅವರ ಜತೆಯಲ್ಲಿ ಅಬ್ಬಾಸ್ ಕೂಡ ಸೇರಿದ್ದ.



ಬಸ್ಸು ತನ್ನ ವೇಗವನ್ನು ತಗ್ಗಿಸಿ ನಿಲ್ಲುವುದಕ್ಕೆ ಮೊದಲೆ ಕೆಲವು ಜನ ವಿಶಿಷ್ಟ ರೀತಿಯ ಕಸರತ್ತಿನ ಮೂಲಕ ನೆಲ ಸ್ಪರ್ಶ ಮಾಡಿದ್ದರು. ಅದರ ಬೆನ್ನಿಗೆ ಬೆಂಕಿ ಬಿದ್ದ ಮನೆಯವರಂತೆ

ಬಸ್ಸಿನ ನಿರ್ವಾಹಕನೂ ಸೇರಿದಂತೆ ನಾಲ್ಕೈದು ಮಂದಿ ವಿವಿಧ ರಾಗದಲ್ಲಿ ಕುಡ್ಲಾ, ಕುಡ್ಲಾ..ಕುಡ್ಲಾ ಎಂದೂ ಆಕಾಶ ಬಿರಿಯುವಂತೆ ಅರಚತೊಡಗಿದ್ದರು. ಒಟ್ಟು ಗೊಂದಲ ಗಲಾಟೆಯ ಮಧ್ಯೆ ಅಲ್ಲಿ ಸೇರಿದ್ದ ಜನರು ಬಸ್ಸನ್ನು ಮುತ್ತಿಗೆ ಹಾಕಿದ್ದರು. ಅವರಲ್ಲಿ ಕೆಲವರು ಬಸ್‌ನಿಂದ ಇಳಿಯುವವರ ನಡುವೆ ನುಸುಳಿಕೊಂಡು ಒಳ ಹೋಗುವ ವ್ಯರ್ಥ ಸಾಹಸಕ್ಕಿಳಿದಿದ್ದರು. ಬಸ್‌ನಿಂದ ಕೆಳಗಿಳಿಯಲು ಹೊರಟ ಪ್ರಯಾಣಿಕರಿಗೆ ಬಾಗಿಲ ಬಳಿ ಮುತ್ತಿದ್ದ ಜನರಿಂದ ಪಾರಾಗುವ ದಾರಿ ಕಾಣದೆ ದುಗುಡದ ಮುಖಭಾವವನ್ನು ಹೊತ್ತುಕೊಂಡು ಎತ್ತರದ ಮರ ಹತ್ತಿ ಇಳಿಯಲು ಕಷ್ಟ ಪಡುವ ಬೆಕ್ಕಿನಂತೆ ಪಿಳಿ ಪಿಳಿ ಕಣ್ಣು ಬಿಡುತ್ತಾ ನಿಂತಿದ್ದರು.

ಅಬ್ಬಾಸ್ ತನಗರಿವಿಲ್ಲದೆ ಬಸ್ಸನ್ನೇರುವ ನೂಕು ನುಗ್ಗಲಿನ ಮಧ್ಯೆ ಸಿಲುಕಿಕೊಂಡಿದ್ದ. ಏರುವ ಸಾಹಸವನ್ನು ಅರ್ಧದಲ್ಲೆ ತೊರೆಯಲು ನಿರ್ಧರಿಸಿದ ಅಬ್ಬಾಸ್ ಹಿಂದಕ್ಕೆ ಸರಿಯುವಷ್ಟರಲ್ಲಿ ಗಾಣಕ್ಕೆ ಸಿಕ್ಕ ಕಬ್ಬಿನಂತೆ ಆಗಿಬಿಟ್ಟಿದ್ದ. ಈ ಮಧ್ಯೆ ಕೆಲವರು ಹಿಂದಿನ ಬಸ್ಸಲ್ಲಿ ಜಾಗ ಸಿಗಬಹುದೇನೊ ಎಂಬ ಆಶೆಯಿಂದ ಜನಜಂಗುಲಿಯಿಂದ ಬಿಡಿಸಿಕೊಂಡು ಓಡಿ ಅದರ ಬಳಿ ತಲುಪುವಷ್ಟರಲ್ಲಿ ಅದರ ಪರಿಸ್ಥಿತಿ ಮೊದಲ ಬಸ್ಸಿಗಿಂತ ಭಿನ್ನವಾಗಿರಲಿಲ್ಲ. ಬಸ್‌ಗೆ ಮುತ್ತಿಗೆ ಹಾಕಿದವರು ಬಸ್‌ನ ಬಾಗಿಲಿನಲ್ಲಿ ಪಿಳಿಪಿಳಿ ಕಣ್ಣುಬಿಡುತ್ತಾ ನಿಂತವರಿಗೆ ಇಳಿಯಿರಿ, ಇಳಿಯಿರಿ ಎಂದು ಗಟ್ಟಿ ಸ್ವರದಲ್ಲಿ ಒಂದೆಡೆ ಗದರಿಸುತ್ತಿದ್ದರೆ ಬಸ್‌ನ ಒಳಗಿನಿಂದಲೂ ಅದೇ ಗದರಿಕೆ ವಿವಿಧ ಸ್ವರದಲ್ಲಿ ಕೇಳತೊಡಗಿತ್ತು. ಸದ್ದುಗದ್ದಲದ ಗೊಂದಲದ ಮಧ್ಯೆ ಯಾರೂ ಯಾರ ಮಾತನ್ನೂ ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ.

ಅಬ್ಬಾಸ್‌ಗೆ ಮದುವೆಗೆ ಹೋಗುವ ಉತ್ಸಾಹ ಅದಾಗಲೆ ಅರ್ಧ ಇಳಿದಿತ್ತು. ಹತ್ತಿರದ ಬಂಧುವಿನ ಮದುವೆ. ಅಲ್ಲಿ ಹೋಗಿ ತಲೆ ಕಾಣಿಸದಿದ್ದರೆ ಮಗಳ ಮದುವೆಗೆ ಆತನ ನೆರವು ಸಿಗದು ಎಂಬ ಆತಂಕ ಅಬ್ಬಾಸ್‌ನನ್ನು ಮತ್ತೆ ಬಸ್ ಏರುವ ಸಾಹಸಕ್ಕೆ ಎಳೆಸಿತ್ತು. ಧೈರ್ಯವನ್ನು ತಂದುಕೊಂಡು ತನ್ನ ಎಲ್ಲಾ ಶಕ್ತಿಯನ್ನುಪಯೋಗಿಸಿ ಜನರ ಮಧ್ಯೆ ಆತ ನುಗ್ಗಿಬಿಟ್ಟ. ಆ ವೇಳೆಗಾಗಲೆ ಬಸ್‌ನಿಂದ ಇಳಿಯುವವರು ಹರ ಸಾಹಸಪಟ್ಟು ಕೆಳಗಿಳಿದು ತಮ್ಮ ಜಾರಿದ ಸೀರೆ, ಪಂಚೆಯನ್ನು ಸರಿಪಡಿಸಿಕೊಳ್ಳುವಲ್ಲಿ ನಿರತರಾಗಿದ್ದರು. ಬಸ್ ಹತ್ತುವ ಪ್ರಕ್ರಿಯೆ ಮುಂದುವರಿದಿತ್ತು. ಜನರ ಮಧ್ಯೆ ಅಪ್ಪಚ್ಚಿಯಾಗಿ ಸಿಲುಕಿಕೊಂಡ ಅಬ್ಬಾಸ್‌ನ ಕಾಲು ಈಗ ನೆಲದಲ್ಲಿರಲಿಲ್ಲ. ಅಂತರಿಕ್ಷ ಯಾನಿಯಂತೆ ಆತನಿಗೆ ಗಾಳಿಯಲ್ಲಿ ತೇಲಾಡುವ ಅನುಭವ.ಮುಂದಕ್ಕೆ ತಳ್ಳಲ್ಪಟ್ಟ ಆತನು ಬಸ್‌ನ ಬಾಗಿಲ ಬಳಿ ತಲುಪಿದ್ದೇ ತಡ ಮೆಟ್ಟಿಲ ಮೇಲೆ ಕಾಲೂರುವಲ್ಲಿ ಹೇಗಾದರೂ ಸಫಲನಾಗಿದ್ದ. ಬಸ್‌ನ ಒಳಗೆ ನುಸುಳಲು ಮಾಡಿದ ಪ್ರಯತ್ನ ಯಶಸ್ವಿಯಾದುದರಿಂದ ಆತನ ಮುಖದಲ್ಲಿ ಎವರೆಸ್ಟ್ ಏರಿದ ಪರ್ವತಾರೋಹಿಯ ಸಂಭ್ರಮ ಮೇಳೈಸಿತ್ತು. ಅದೆಲ್ಲವೂ ಕ್ಷಣ ಮಾತ್ರ. ಬಸ್‌ನೊಳಗೆ ಸುರಕ್ಷಿತ ಜಾಗವನ್ನು ಅರಸಿ ಮುಂದೆ ಸಾಗುವ ಭರದಲ್ಲಿ ಒಬ್ಬಾತನ ಒರಟಾದ ಕೈಗಡಿಯಾರದ ಅಲಗು ಅಬ್ಬಾಸ್‌ನ ಕೆನ್ನೆಯ ಮೇಲೆ ಕಲಾತ್ಮಕವಾದ ರೇಖೆಯನ್ನು ಮೂಡಿಸಿತ್ತು. ಅದು ಕೆಂಪು ಬಣ್ಣಕ್ಕೆ ತಿರುಗುವುದರೊಂದಿಗೆ ಅಬ್ಬಾಸ್‌ನ ಬಾಯಿಯಿಂದ ಹೊರಟ ನೋವಿನ ಆರ್ತನಾದ ನಿರ್ವಾಹಕನ ಕರ್ಕಶ ಸಿಳ್ಳೆಯ ಮಧ್ಯೆ ಕರಗಿ ಹೋಗಿತ್ತು.

## ಫ್ರೀಡಂ ವಿಶೇಷಾಂಕಕ್ಕೆ ಲೇಖನ ಆಹ್ವಾನ

ಆಗಸ್ಟ್ 15ರ ಸ್ವಾತಂತ್ರ್ಯೋತ್ಸವದ ಅಂಗವಾಗಿ ಪ್ರಸ್ತುತ ಪಾಕ್ಷಿಕವು 'ಫ್ರೀಡಂ ವಿಶೇಷಾಂಕ'ವನ್ನು ಹೊರತರುತ್ತಿದೆ. ಸ್ವಾತಂತ್ರ್ಯ ವಿಚಾರಕ್ಕೆ ಸಂಬಂಧಿಸಿದ ಲೇಖನ, ಕವನ, ಕಥೆ, ಅನಿಸಿಕೆ, ವಿಶ್ಲೇಷಣೆಗಳನ್ನು ಪ್ರಸ್ತುತ ವಿಳಾಸಕ್ಕೆ ಕಳುಹಿಸಬಹುದು. ದೇಶದ ಪ್ರಸಕ್ತ ಸ್ಥಿತಿಗತಿ, ರಾಜಕೀಯ ವಿದ್ಯಮಾನಗಳು, ಜನಾಂದೋಲನದ ದುರ್ಬಳಕೆ, ದೇಶ ನಿರ್ಮಾಣದಲ್ಲಿ ವಿದ್ಯಾರ್ಥಿಗಳು, ಸಾಂವಿಧಾನಿಕ ಬಿಕ್ಕಟ್ಟುಗಳು, ಜಾತಿ ತಾರತಮ್ಯ, ದೇಶದ ಭವಿಷ್ಯ ಇತ್ಯಾದಿ ವಿಚಾರಗಳ ಕುರಿತು ಲೇಖನಗಳನ್ನು ಕಳುಹಿಸಬಹುದು.

## ಕಥೆ ಆಹ್ವಾನ

ಪ್ರಸ್ತುತ ಪಾಕ್ಷಿಕವು ಸಾಮಾಜಿಕ ಕಳಕಳಿ ಅಭಿವ್ಯಕ್ತಿಗೊಳಿಸುವ ವೈಚಾರಿಕ ಕಥೆಗಳನ್ನು ಓದುಗರಿಂದ ಆಹ್ವಾನಿಸುತ್ತಿದೆ. ಅತ್ಯುತ್ತಮವೆನಿಸಿದ ಕಥೆಗಳನ್ನು ಮಾತ್ರ ಪ್ರಕಟಿಸಲಾಗುವುದು.

ನಮ್ಮ ವಿಳಾಸ:
ಪ್ರಸ್ತುತ ಪಾಕ್ಷಿಕ
ಮೀಡಿಯಾ ಹೌಸ್,
ಡಾ.ಅನ್ಸಾರಿ ರಸ್ತೆ
ಯತೀಂ ಖಾನಾ ಹಾಲ್ ಸಮೀಪ
ಬಂದರ್, ಮಂಗಳೂರು-1

# ಮಕ್ಕಾ ಮಸ್ಜಿದ್ ಸ್ಫೋಟ ಪ್ರಕರಣಕ್ಕೆ ನಾಲ್ಕು ವರ್ಷ

- ಹೈದರಾಬಾದ್ ಪೊಲೀಸರು ಹಿಂದುತ್ವ ಭಯೋತ್ಪಾದಕರನ್ನು ರಕ್ಷಿಸುತ್ತಿದ್ದಾರೆಯೇ?
- ಭಾಸ್ಕರ್ ಆಯೋಗ ವರದಿಯ ಮಂಡನೆಗೆ ವಿಳಂಬವೇಕೆ?

**14** ಜೀವಗಳನ್ನು ಬಲಿತೆಗೆದುಕೊಂಡ ಹೈದರಾಬಾದ್‌ನ ಮಕ್ಕಾ ಮಸ್ಜಿದ್ ಸ್ಫೋಟ ಪ್ರಕರಣಕ್ಕೆ ಇಂದಿಗೆ ನಾಲ್ಕು ವರ್ಷ. ಆದಾಗ್ಯೂ ಪ್ರಕರಣದ ತನಿಖೆಯಲ್ಲಾಗಲೀ ವಿಚಾರಣೆಯಲ್ಲಾಗಲೀ ಯಾವುದೇ ಧನಾತ್ಮಕ/ ಸಮಾಧಾನಕರ ಬೆಳವಣಿಗೆ ಕಂಡುಬಂದಿಲ್ಲ.

ಸ್ಫೋಟ ನಡೆದ ಕೆಲವೇ ತಾಸುಗಳಲ್ಲಿ ಅಮಾಯಕ ಮುಸ್ಲಿಮ್ ಯುವಕರನ್ನು ಬಂಧಿಸಿದ್ದನ್ನು ಬಿಟ್ಟರೆ ಪೊಲೀಸರಿಗೆ ಮಹತ್ವದ ಬೇರಾವುದೇ ಕಾರ್ಯಾಚರಣೆ ಇಲ್ಲಿಯವರೆಗೆ ನಡೆದಿಲ್ಲ. ನಾಲ್ಕು ವರ್ಷಗಳಾದರೂ ನೈಜ ಆರೋಪಿಗಳ ಬಂಧನವಾಗಿಲ್ಲ. ಸಿವಿಲ್ ಲಿಬರ್ಟೀಸ್ ಮಾನಿಟರಿಂಗ್ ಸಮಿತಿಯ ಮುಖ್ಯಸ್ಥ ಲತೀಫ್ ಮುಹಮ್ಮದ್ ಖಾನ್, ''ಮಕ್ಕಾ ಮಸ್ಜಿದ್ ಸ್ಫೋಟಕ್ಕೆ ಕಾರಣಕರ್ತ ರಾಗಿರುವ ಹಿಂದುತ್ವ ಭಯೋತ್ಪಾದಕರನ್ನು ಪೊಲೀಸರು ರಕ್ಷಿಸುತ್ತಿದ್ದಾರೆ'' ಎಂದು ಆರೋಪಿಸಿದ್ದಾರೆ. ಸಮಿತಿಯು ಅಮಾಯಕರ ಬಿಡುಗಡೆಗಾಗಿ ಕಾನೂನು ಹೋರಾಟ ನಡೆಸುತ್ತಿದೆ.

**2007**ರ ಹೈದರಾಬಾದ್‌ನ ಮಕ್ಕಾ ಮಸ್ಜಿದ್ ಸ್ಫೋಟ ಪ್ರಕರಣವು ಭಾರತದಲ್ಲಿ ಭಯೋತ್ಪಾದನಾ ಚಟುವಟಿಕೆಗಳಿಗೆ ಹೊಸ ತಿರುವನ್ನು ನೀಡಿತು. ಪ್ರಕರಣದ ಆರೋಪವನ್ನು ಮುಸ್ಲಿಮ್ ಸಮುದಾಯದ ತಲೆಗೆ ಕಟ್ಟಲಾಗಿತ್ತು. ಅಮಾಯಕ ಮುಸ್ಲಿಮ್ ಯುವಕರ ಬಂಧನವೂ ನಡೆದಿತ್ತು. ಅನಂತರ ದಿನಗಳಲ್ಲಿ ಕೇಸರಿ ಭಯೋತ್ಪಾದನೆಯು ಬೆಳಕಿಗೆ ಬರತೊಡಗಿದಾಗ ಅವುಗಳ ಪೈಕಿ ಮಕ್ಕಾ ಮಸ್ಜಿದ್ ಸ್ಫೋಟದ ಹೆಸರೂ ಕೇಳಿಬಂದಿತ್ತು. ಆದರೆ ನಾಲ್ಕು ವರ್ಷಗಳಾದರೂ ಮಕ್ಕಾ ಮಸ್ಜಿದ್ ಸ್ಫೋಟದ ತನಿಖೆಯು ಮಂದಗತಿಯಲ್ಲಿ ಸಾಗುತ್ತಿದೆ.



ಸ್ಫೋಟ ನಡೆದಾಕ್ಷಣ ಪೊಲೀಸರು ಅದರ ಹೊಣೆಯನ್ನು ಹರ್ಕತುಲ್ ಜಿಹಾದ್ ಎ ಇಸ್ಲಾಮೀ ಹಾಗೂ ಮತ್ತಿತರ ಪಾಕಿಸ್ತಾನಿ ಭಯೋತ್ಪಾದಕ ಸಂಘಟನೆಗಳ ಮೇಲೆ ಹೊರಿಸಿ ಸ್ಥಳೀಯ ಯುವಕರನ್ನು ಬಂಧಿಸಿದ್ದರು. ಅನಂತರದ ದಿನಗಳಲ್ಲಿ ತನಿಖೆ ನಡೆಸಿದ ಸಿಬಿಐ, ಹಿಂದುತ್ವ ಭಯೋತ್ಪಾದಕರ ಕೈವಾಡವನ್ನು ಬಯಲಿಗೆಳೆಯಿತು.

ಇತ್ತೀಚೆಗಷ್ಟೇ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಇದರ ತನಿಖೆಯನ್ನು ಕೈಗೆತ್ತಿಕೊಂಡಿತ್ತು. ಹಿಂದುತ್ವ ಭಯೋತ್ಪಾದಕ ಅಸೀಮಾನಂದನ ಬಂಧನದೊಂದಿಗೆ ಕೇಸರಿ ಉಗ್ರ ಜಾಲವು ಬಯಲಾಗತೊಡಗಿದ್ದು, ಮಕ್ಕಾ ಮಸ್ಜಿದ್ ಸ್ಫೋಟದಲ್ಲಿ ತನ್ನ ಕೈವಾಡ ಇರುವುದನ್ನು ತನಿಖೆಯ ವೇಳೆ ಒಪ್ಪಿಕೊಂಡಿದ್ದನು ಹಾಗೂ ಅದಕ್ಕೆ ಸಹಕರಿಸಿದವರ ವಿವರವನ್ನು ಬಾಯಿಬಿಟ್ಟಿದ್ದನು.ಈತನ ವಿರುದ್ಧ ಹೆಚ್ಚುವರಿ ಚಾರ್ಜ್‌ಶೀಟ್ ದಾಖಲಿಸಲಾಗಿದೆ. ಮಕ್ಕಾ ಮಸೀದಿ ಸ್ಫೋಟ ಪ್ರಕರಣದಲ್ಲಿ ಎನ್‌ಐಎಯು ದಾಖಲಿಸಿದ ಎರಡನೆ ಚಾರ್ಜ್‌ಶೀಟ್‌ನಲ್ಲಿ

ಸ್ವಾಮಿ ಅಸೀಮಾನಂದನ ಹೆಸರು ದಾಖಲಿಸಲಾಗಿದೆ.

ರಾಷ್ಟ್ರೀಯ ತನಿಖಾ ದಳವು ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿರುವ ಹೆಚ್ಚುವರಿ ಚಾರ್ಜ್‌ಶೀಟ್‌ನಲ್ಲಿ 59ರ ಹರೆಯದ ನಭಕುಮಾರ್ ಸರ್ಕಾರ್ ಆಲಿಯಾಸ್ ಸ್ವಾಮಿ ಅಸೀಮಾನಂದನ ಮೇಲೆ ಕೊಲೆ, ಕೊಲೆಯತ್ನ, ಬೇರೆ ಸಮುದಾಯದ ವಿರುದ್ಧ ಕ್ರಿಮಿನಲ್ ಪಿತೂರಿ ನಡೆಸಿರುವುದು, ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆ ಉಲ್ಲಂಘನೆ, ಸ್ಫೋಟಕ ಕಾಯ್ದೆಯ ಉಲ್ಲಂಘನೆ ನಡೆಸಿರುವ ಆರೋಪವನ್ನು ಹೊರಿಸಲಾಗಿದೆ. ಮಾತ್ರವಲ್ಲದೆ ಸಂಜೋತಾ ಎಕ್ಸ್‌ಪ್ರೆಸ್ ಸ್ಫೋಟದಲ್ಲೂ ಅಸೀಮಾನಂದನ ಹೆಸರು ದಾಖಲಾಗಿದೆ.

ಸಂಜೋತಾ ಎಕ್ಸ್‌ಪ್ರೆಸ್ ಸ್ಫೋಟಕ್ಕೆ ಸಂಬಂಧಿಸಿದಂತೆ ಉತ್ತರಾಖಂಡದ ಹರಿದ್ವಾರದಲ್ಲಿ ಸ್ವಾಮಿ ಓಂಕಾರಾನಂದ ಹೆಸರಿನಲ್ಲಿ ತಲೆಮರೆಸಿಕೊಂಡಿದ್ದ ಅಸೀಮಾನಂದನನ್ನು 2010ರ ನವೆಂಬರ್ 19ರಂದು ಬಂಧಿಸಲಾಗಿತ್ತು. ಆರಂಭದಲ್ಲಿ ಮಕ್ಕ ಮಸ್ಜಿದ್ ಸ್ಫೋಟದ ತನಿಖೆಯನ್ನು ಹೈದರಾಬಾದ್‌ನ ಹುಸೈನಿ ಆಲಮ್ ಪೊಲೀಸ್ ಠಾಣೆ ಕೈಗೆತ್ತಿಕೊಂಡಿತ್ತು. ಅನಂತರದ ದಿನಗಳಲ್ಲಿ ತನಿಖೆಯನ್ನು ಸಿಬಿಐಗೆ ಒಪ್ಪಿಸಲಾಯಿತು. ತನಿಖೆಯಲ್ಲಿ ಕೊಂಚಮಟ್ಟಿನ ಪ್ರಗತಿ ಸಾಧಿಸಿದ ಸಿಬಿಐ ದೇವೇಂದರ್ ಗುಪ್ತಾ ಮತ್ತು ಲೋಕೇಶ್ ಶರ್ಮ ಎಂಬವರ ವಿರುದ್ಧ ಚಾರ್ಜ್‌ಶೀಟ್ ದಾಖಲಿಸಿ ನ್ಯಾಯಾಂಗ ಬಂಧನಕ್ಕೊಳಪಡಿಸಿತು.

ಅನಂತರದ ದಿನಗಳಲ್ಲಿ ಕೇಂದ್ರವು ಸ್ಫೋಟದ ತನಿಖೆಯನ್ನು 2011ರ ಎಪ್ರಿಲ್‌ನಲ್ಲಿ ರಾಷ್ಟ್ರೀಯ ತನಿಖಾದಳಕ್ಕೆ ವರ್ಗಾಯಿಸಿತು. ಇತರ ಇಬ್ಬರು ಆರೋಪಿಗಳಾದ ಸಂದೀಪ್ ಡಾಂಗೆ ಮತ್ತು ರಾಮ್‌ಜಿ ಕಾಲಸಂಗ್ರ ಎಂಬವರು ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕಾಗಿ ರೂಪಾಯಿ 10 ಲಕ್ಷ ಬಹುಮಾನವನ್ನು ರಾಷ್ಟ್ರೀಯ ತನಿಖಾ ದಳ ಘೋಷಿಸಿದೆ.

ಕಾನೂನು ಬಾಹಿರ ತಡೆ ಕಾಯ್ದೆಯ ಪ್ರಕಾರ ಪ್ರಕರಣ ದಾಖಲಾದ 180 (ಒಂದೂವರೆ ವರ್ಷ) ದಿನಗಳೊಳಗಾಗಿ ಚಾರ್ಜ್‌ಶೀಟ್ ಸಲ್ಲಿಸಬೇಕು. ಈ ನಿಯಮದಂತೆ ರಾಷ್ಟ್ರೀಯ ತನಿಖಾ ದಳವು ಎರಡನೆ ಚಾರ್ಜ್‌ಶೀಟ್ ತಯಾರಿಸಿದೆ. ಮಕ್ಕಾ ಮಸ್ಜಿದ್‌ನ ಅಂಗಳದಲ್ಲಿ ಬಾಂಬ್ ಸ್ಫೋಟಿಸಲು ಅಸೀಮಾನಂದನಿಗೆ ಆರೆಸ್ಸೆಸ್‌ನ ಸಂಚಾಲಕ ಸುನಿಲ್ ಜೋಶಿ ರೂಪಾಯಿ 65,000 ನೀಡಿದ್ದನೆಂಬುದನ್ನು ತನಿಖಾ ದಳವು ಬಹಿರಂಗಪಡಿಸಿದೆ.

ಮೊಬೈಲ್ ಫೋನ್ ಮೂಲಕ ನಿಯಂತ್ರಿಸುವ ಪೈಪ್ ಬಾಂಬ್‌ಗಳನ್ನು ಬಳಸಿ ಐತಿಹಾಸಿಕ ಮಕ್ಕಾ ಮಸ್ಜಿದ್‌ನಲ್ಲಿ 2007ರ ಮೇ 18ರಂದು ಶುಕ್ರವಾರದ ವಿಶೇಷ ಪ್ರಾರ್ಥನೆಯ ಸಮಯದಲ್ಲಿ (ಜನಸಂದಣಿ ಇರುವ ಸಂದರ್ಭ) ಸ್ಫೋಟ ಕೃತ್ಯ ನಡೆಸಲಾಗಿತ್ತು. ಸ್ಥಳದಲ್ಲೇ 9 ಮಂದಿ ಮೃತಪಟ್ಟರೆ, ಪೊಲೀಸರು ನಡೆಸಿದ ಗೋಲಿಬಾರ್‌ನಿಂದಾಗಿ ಐದು ಮಂದಿ ಬಲಿಯಾಗಿದ್ದರು.

ಮಕ್ಕಾ ಮಸ್ಜಿದ್ ಸ್ಫೋಟವನ್ನು ಖಂಡಿಸಿ ಶಾ ಅಲಿ ಬಂದಾ ಪ್ರದೇಶದಲ್ಲಿ ಜಮಾವಣೆಗೊಂಡ ಪ್ರತಿಭಟನಕಾರರ ಮೇಲೆ ಪೊಲೀಸರು ಗೋಲಿಬಾರ್ ನಡೆಸಿರುವ ಘಟನೆಯು ಪ್ರಶ್ನಾರ್ಹವಾಗಿತ್ತು. ಇದರ ಕುರಿತು ತನಿಖೆ ನಡೆಸಲು ನಿವೃತ್ತ ನ್ಯಾಯಾಧೀಶ ವಿ.ಭಾಸ್ಕರ ರಾವ್ ನೇತೃತ್ವದ ಏಕಸದಸ್ಯ ಆಯೋಗವನ್ನು ನೇಮಿಸಲಾಯಿತು. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಆಯೋಗವು ತನ್ನ ವರದಿಯನ್ನು ಆಂಧ್ರ ಸರಕಾರಕ್ಕೆ ವಹಿಸಿದ್ದು ವರದಿಯ ಸಾರಾಂಶವನ್ನು ಸಾರ್ವಜನಿಕರಿಗೆ ಬಿಡುಗಡೆಗೊಳಿಸಬೇಕು ಎಂದು ದಿ ಯುನೈಟೆಡ್ ಮುಸ್ಲಿಮ್ ಫೋರಮ್ ಮತ್ತು ಸಿವಿಲ್ ಲಿಬರ್ಟೀಸ್ ಮಾನಿಟರಿಂಗ್ ಕಮಿಟಿ ಎಂಬ ಸಂಘಟನೆಗಳು ಸರಕಾರವನ್ನು ಒತ್ತಾಯಿಸಿವೆ.

ಭಾಸ್ಕರ್ ರಾವ್ ಆಯೋಗವು ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿದ್ದರೂ ಸರಕಾರವು ಅದನ್ನು ವಿಧಾನಸಭೆಯಲ್ಲಿ ಮಂಡಿಸಿಲ್ಲ. ಈ ವರದಿಯನ್ನು ತಕ್ಷಣವೇ ಅಸೆಂಬ್ಲಿಯಲ್ಲಿಟ್ಟು ಚರ್ಚಿಸಬೇಕು ಎಂದು ಅಖಿಲ ಭಾರತೀಯ ಮುಸ್ಲಿಮ್ ವೈಯಕ್ತಿಕ ಮಂಡಳಿಯ ಸಹಾಯಕ ಕಾರ್ಯದರ್ಶಿ ಮುಹಮ್ಮದ್ ಅಬ್ದುಲ್ ರಹೀಮ್ ಖುರೇಷಿ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದ್ದಾರೆ. ಅಲ್ಲದೆ ಸ್ಫೋಟದ ಹಿಂದಿರುವ ಷಡ್ಯಂತ್ರ ಮತ್ತು ಆರೋಪಿಗಳನ್ನು ಪತ್ತೆಹಚ್ಚಿ ಸಾರ್ವಜನಿಕರ ಮುಂದಿರಸಬೇಕು ಎಂದು ತನಿಖಾ ದಳವನ್ನು ಅವರು ಆಗ್ರಹಿಸಿದ್ದಾರೆ.

**ಕೃಪೆ : ಮಿಲ್ಲಿಗಝೆಟ್**

2nd Floor,
Saibeen Complex,
Lalbagh, **Mangalore-4**
**Ph : 0824-2452998**

casual wear
the menz shoppe

B.J.M.Complex,
**Moodbidri**
**Cell : 9916820707**

email : cwear_1999@hotmail.com

■ ಅರಬಿ ಮೂಲ: ಸುವರುನ್ ಮಿನ್ ಹಯಾತಿಸ್ಸಹಾಬಾ
ಮಳಯಾಳಂ: ಡಾ.ಎ.ಐ.ವಿಲಾಯತುಲ್ಲಾ
ಕನ್ನಡಕ್ಕೆ: ಮುರ್ಷಿದ್

# ಸಈದ್ ಬಿನ್ ಆಮಿರ್ (ರ)

*''ಇಹಲೋಕಕ್ಕೆ ಬದಲಾಗಿ ಪರಲೋಕವನ್ನು ಖರೀದಿಸಿದ ವ್ಯಕ್ತಿ ಸಈದ್ ಬಿನ್ ಆಮಿರ್. ಅವರು ಅಲ್ಲಾಹ್ ಮತ್ತು ಪ್ರವಾದಿ (ಸ)ಗೆ ಇನ್ನಿತರ ಯಾವುದಕ್ಕಿಂತಲೂ ಪ್ರಾಮುಖ್ಯತೆಯನ್ನು ನೀಡಿದರು.'' -ಇತಿಹಾಸಕಾರರು.*

ಸಈದ್ ಬಿನ್ ಆಮಿರ್-ಅಲ್-ಜುಮುಹೀ ಯುವಕನಾಗಿದ್ದ ಕಾಲ. ಪ್ರವಾದಿ (ಸ)ರವರ ನಿಕಟ ಅನುಯಾಯಿಗಳಲ್ಲೋರ್ವರಾದ ಖುಬೈಬ್ ಬಿನ್ ಅದಿಯ್ಯ್(ರ)ರನ್ನು ಕುರೈಶಿಗಳು ಮೋಸದಿಂದ ಬಂಧಿಸಿ ಖೈದಿಯನ್ನಾಗಿಸಿದರು. ಮಕ್ಕಾದ ಹೊರ ವಲಯ ತನ್‌ಈಮ್‌ನಲ್ಲಿ ಅವರನ್ನು ಬಂಧಿಸಿಟ್ಟರು. ಇದೀಗ ಅವರನ್ನು ಬಹಿರಂಗವಾಗಿ ವಧಿಸಲು ತಯಾರಿ ನಡೆಸುತ್ತಿದ್ದಾರೆ. ಆ ದೃಶ್ಯವನ್ನು ನೋಡಲು ಹಲವಾರು ಜನರು ಅಲ್ಲಿ ಗುಂಪು ಸೇರಿದ್ದಾರೆ. ಅವರಲ್ಲೋರ್ವ ಸಈದ್ ಬಿನ್ ಆಮಿರ್.

ಅಂದು ಸಈದ್ ಬಿನ್ ಆಮಿರ್(ರ) ಆರೋಗ್ಯ ದೃಢಕಾಯನಾಗಿದ್ದರು. ಗುಂಪುಗೂಡಿದ ಜನರ ಮಧ್ಯೆ ದಾರಿ ಮಾಡಿಕೊಂಡು ಗುಂಪನ್ನು ತಳ್ಳುತ್ತಾ ಅವರು ಆ ಜಾಗಕ್ಕೆ ಸರಿಯುತ್ತಿದ್ದಾರೆ. ಅಬೂಸುಫ್‌ಯಾನ್ ಬಿನ್ ಹರ್‌ಬ್, ಸಫ್‌ವಾನ್ ಬಿನ್ ಉಮಯ್ಯ ಮೊದಲಾದ ಪ್ರಮುಖರು ಅಲ್ಲಿದ್ದಾರೆ.

ಕುರೈಶಿಗಳು ಬಂಧಿಸಿದ ಖುಬೈಬ್ ಬಿನ್ ಅದಿಯ್ಯ(ರ)ರನ್ನು ತುಂಬಾ ಸಮೀಪದಿಂದ ನೋಡಲು ಸಈದ್(ರ)ರಿಗೆ ಆ ವೇಳೆ ಸಾಧ್ಯವಾಯಿತು. ಖುರೈಷೀ ಗಂಡು ಹೆಣ್ಣುಗಳು ಯುವಕರು, ಮಕ್ಕಳಾದಿ ಎಲ್ಲರೂ ಬೊಬ್ಬಿಡುತ್ತಾ, ಗೇಲಿ ಮಾಡುತ್ತಾ ಖುಬೈಬ್‌ರನ್ನು ತಳ್ಳುತ್ತಾ ಬಹಿರಂಗವಾಗಿ ವಧಿಸಲು ತಯಾರಿಗೊಳಿಸಿದ ಜಾಗಕ್ಕೆ ಅವರನ್ನು ಕರೆ ತರುತ್ತಿದ್ದಾರೆ. ಅವರೆಲ್ಲರೂ ಪ್ರವಾದಿ(ಸ)ರೊಂದಿಗೆ ಪ್ರತೀಕಾರವನ್ನು ತೀರಿಸುತ್ತಿದ್ದಾರೆ. ಬದ್‌ರಲ್ಲಿ ತಮ್ಮವರನ್ನು ವಧಿಸಿದ್ದಕ್ಕೆ ಪ್ರತೀಕಾರವಾಗಿ ಖುಬೈಬ್(ರ)ರನ್ನು ಕೊಲ್ಲಲು ಸಜ್ಜಾಗುತ್ತಿದ್ದಾರೆ.

ಈ ರೀತಿ ಖುರೈಷೀ ಗುಂಪು ಬಂಧಿಯನ್ನು ಪ್ರತ್ಯೇಕವಾಗಿ ತಯಾರುಗೊಳಿಸಿದ ಸ್ಥಳಕ್ಕೆ ತರುತ್ತಿದ್ದಾರೆ. ಸಈದ್(ರ)ರವರು ಎಲ್ಲವನ್ನೂ ನೋಡುತ್ತಾ ನಿಂತಿದ್ದಾರೆ. ಅವರು ಸಜ್ಜುಗೊಳಿಸಿದ ಮರದ ಶಿಲುಬೆಯ ಬಳಿ ಖುಬೈಬ್(ರ)ರನ್ನು ಕರೆತಂದಿದ್ದಾರೆ. ಮಕ್ಕಳ ಮತ್ತು ಮಹಿಳೆಯರ ಕಿರುಚಾಟ, ಅರಚಾಟದ ಮಧ್ಯೆಯು ಕೂಡ ಖುಬೈಬ್(ರ)ರ ದೃಢವಾದ ಶಬ್ದವನ್ನು ಸಈದ್(ರ)ರವರು ಕೇಳುತ್ತಿದ್ದಾರೆ. ''ನೀವು ನನ್ನನ್ನು ವಧಿಸಲು ಕೊಂಡೊಯ್ಯುತ್ತಿದ್ದೀರಲ್ಲವೇ? ಅದಕ್ಕೂ ಮುಂಚೆ ಎರಡು ರಕಅತ್ ನಮಾಝ್ ನಿರ್ವಹಿಸಲು ನನಗೆ ಅನುಮತಿ ನೀಡುವಂತಿದ್ದರೆ?''

ಖುಬೈಬ್(ರ) ಖಿಬ್ಲಾದ ಎದುರು ತಿರುಗಿ ನಿಂತು ನಮಾಝ್ ನಿರ್ವಹಿಸುವುದನ್ನು ಕಂಡಾಗ ಸಈದರ ಮನಸ್ಸು ಭಕ್ತಿಯಿಂದ ತುಂಬಿಹೋಯಿತು. ಎಷ್ಟೊಂದು ಸುಂದರವಾದ ಪ್ರಾರ್ಥನೆ! ಆ ನಮಾಝ್‌ನಲ್ಲಿ ಅದೆಂತಹ ಪರಿಪೂರ್ಣತೆ!

ನಮಾಝ್ ಪೂರ್ತಿಗೊಳಿಸಿ ಖುರೈಷಿಗಳ ಎದುರು ನಿಂತು ಖುಬೈಬ್(ರ) ನುಡಿದರು;

''ಅಲ್ಲಾಹನ ಮೇಲಾಣೆ. ಮರಣ ಭಯದಿಂದ ನಾನು ನಮಾಝ್‌ನ್ನು ದೀರ್ಘಗೊಳಿಸುತ್ತಿದ್ದೇನೆಂದು ನೀವು ಭಾವಿಸದೇ ಇರುತ್ತಿದ್ದರೆ ನಮಾಝ್‌ನ್ನು ಇನ್ನೂ ದೀರ್ಘಗೊಳಿಸುತ್ತಿದ್ದೆ.''

ನಂತರ ನಡೆದ ಘಟನೆಗಳನ್ನು ನೋಡಿ ಸಈದರ ಕಣ್ಣುಗಳು ನಿಶ್ಚಲಗೊಂಡವು. ಅಷ್ಟೊಂದು ಭಯಾನಕವಾಗಿತ್ತು ಆ ದೃಶ್ಯ. ಅವರು ಖುಬೈಬ್(ರ)ರವರ ದೇಹದಿಂದ ಮಾಂಸವನ್ನು ತುಂಡು

ತುಂಡಾಗಿ ಕತ್ತರಿಸಿ ತೆಗೆಯಲು ಶುರು ಮಾಡಿದರು. ಅದರ ಮಧ್ಯೆ ಅವರು ಖುಬೈಬ್(ರ)ರೊಂದಿಗೆ ಕೇಳುತ್ತಿದ್ದರು;

''ನಿನ್ನ ಜಾಗದಲ್ಲಿ ಮುಹಮ್ಮದ್‌ರನ್ನು ಈ ರೀತಿ ತುಂಡರಿಸುತ್ತಿದ್ದರೆ ಮತ್ತು ನೀನು ರಕ್ಷಿಸಲ್ಪಡುವಂತಿದ್ದರೆ ನೀನದನ್ನು ಇಷ್ಟಪಡುತ್ತಿದ್ದೆಯಾ?

ತನ್ನ ದೇಹದಿಂದ ರಕ್ತವು ಧಾರಾಕಾರವಾಗಿ ಸುರಿಯುತ್ತಿದ್ದ ವೇಳೆಯೂ ಖುಬೈಬ್(ರ)ರವರು ಹೇಳಿದರು.

''ಅಲ್ಲಾಹನಾಣೆ. ಮುಹಮ್ಮದ್ (ಸ)ರವರು ಒಂದಿನಿತು ನೋವನುಭವಿಸುತ್ತಿರುವ ವೇಳೆ ಖಂಡಿತವಾಗಿಯೂ ನನ್ನ ಕುಟುಂಬದೊಂದಿಗೆ, ಮಕ್ಕಳೊಂದಿಗೆ ಸುರಕ್ಷಿತವಾಗಿ ನಿಶ್ಚಿಂತನಾಗಿ ಇರುವುದನ್ನು ಇಷ್ಟಪಡಲಾರೆ.''

ಖುಬೈಬ್(ರ)ರವರ ಮಾತನ್ನು ಕೇಳಿದಾಕ್ಷಣ ಅಲ್ಲಿ ಸೇರಿರುವ ಜನರೆಲ್ಲರೂ ಆಕಾಶದೆಡೆಗೆ ಕೈ ಎತ್ತಿ ಜೋರಾಗಿ ಕೂಗಿ ಹೇಳಿದರು;

''ಆತನನ್ನು ಕೊಂದು ಬಿಡಿ, ಆತನನ್ನು ಕೊಂದು ಬಿಡಿ.''

ಮರದ ಶಿಲುಬೆಯಲ್ಲಿ ಕೈಕಾಲುಗಳಿಗೆ ಮೊಳೆ ಹೊಡೆದು ಬಂಧಿಸಲ್ಪಟ್ಟ ಸ್ಥಿತಿಯಲ್ಲಿ ತನ್ನೆರಡೂ ಕಣ್ಣುಗಳನ್ನು ಆಕಾಶದೆಡೆಗೆತ್ತಿ ಖುಬೈಬ್(ರ) ಈ ರೀತಿ ಪ್ರಾರ್ಥಿಸುವುದನ್ನು ಸಈದ್ ಕಿವಿಗೊಟ್ಟು ಕೇಳಿದರು.

''ಯಾ ಅಲ್ಲಾಹ್, ನೀನು ಅವರಲ್ಲಿರುವ ಪ್ರತಿಯೊಬ್ಬರ ಮೇಲೆಯೂ ಪ್ರತೀಕಾರವನ್ನು ತೀರಿಸು. ಅವರಲ್ಲಿ ಪ್ರತಿಯೊಬ್ಬರೂ ತೀವ್ರ ನೋವನುಭವಿಸಿ ಕೊಲ್ಲಲ್ಪಡಲು ವಿಧಿಸು. ಅವರಲ್ಲಿ ಯಾರನೇ ಒಬ್ಬನೇ ಬಿಟ್ಟು ಬಿಡದಿರು.''

ಅಷ್ಟು ಹೇಳಿ ಖುಬೈಬ್(ರ)ರವರು ಕೊನೆಯುಸಿರೆಳೆದರು. ಅದರೊಂದಿಗೆ ಖಡ್ಗದಿಂದ ಕಡಿದು, ಚೂಪಾದ ಭರ್ಚಿಯಿಂದ ತಿವಿದು ಗಾಯಗೊಳಿಸಲು, ನೋವುಣಿಸಲು ಸಾಧ್ಯವಾಗದಂತಹ ಸುರಕ್ಷಿತ ಲೋಕಕ್ಕೆ ಅವರು ಪಯಣಿಸಿದರು.

ಆ ಕ್ರೂರ ವಿನೋದವನ್ನು ಅನುಭವಿಸಿದ ನಂತರು ಖುರೈಷರು ಮಕ್ಕಾಗೆ ಮರಳಿದರು. ದಿವಸಗಳು ಕಳೆದವು. ಇನ್ನಿತರ ಘಟನಾವಳಿಗಳ ಮಧ್ಯೆ ಖುಬೈಬ್(ರ)ರನ್ನು ಮೃಗೀಯವಾಗಿ ಕೊಂದ ಘಟನೆಯನ್ನೂ ಅವರು ಮರೆತು ಬಿಟ್ಟರು.

ಆದರೆ ಖುರೈಷಿಗಳು ಖುಬೈಬ್(ರ)ರೊಂದಿಗೆ ತೋರಿದ ಮೃಗೀಯ ಕ್ರೌರ್ಯ ದೃಶ್ಯವನ್ನು ಒಂದು ಕ್ಷಣವೂ ತನ್ನ ಮನಸ್ಸಿನಿಂದ ನೀಗಿಸಲು ಸಈದ್‌ರವರಿಗೆ ಸಾಧ್ಯವಾಗಲಿಲ್ಲ.

ನಿದ್ರಿಸಲು ಹೋದರೆ ಭಯ ಹುಟ್ಟಿಸುವಂತಹ ಕನಸನ್ನು ಅವರು ಕಾಣುತ್ತಿದ್ದರು. ಕನಸಿನಲ್ಲಿ ರಕ್ತದಿಂದ ಸ್ನಾನಗೈದ ಖುಬೈಬ್(ರ)ರ ಚಿತ್ರವು ತುಂಬಿರುತ್ತಿತ್ತು. ಎಚ್ಚರದ ವೇಳೆಯಲ್ಲಿ ಮನದ ಕನ್ನಡಿಯಲ್ಲೂ ಖುಬೈಬ್(ರ)ರ ಚಿತ್ರ! ತನಗಾಗಿ ತಯಾರುಗೊಳಿಸಿದ ಮರದ ಶಿಲುಬೆಯ ಮುಂದೆ ಖುಬೈಬ್ ಅದೆಷ್ಟು ಶಾಂತನಾಗಿ ಮಾತನಾಡಿದರು! ಖುಬೈಬ್(ರ) ಖುರೈಷಿಗಳ ವಿರುದ್ಧ ನಡೆಸಿದ ಪ್ರಾರ್ಥನೆ ಇದೀಗಲೂ ಸಈದ್‌ರವರ ಕಿವಿಯಲ್ಲಿ ಪ್ರತಿಧ್ವನಿಸುತ್ತಿದೆ. ಆ ಕ್ಷಣದಲ್ಲಿ ಬೆಂಕಿಯ ಉಂಡೆಗಳು ಅವರ ಮೇಲೆ ಬಿದ್ದು ಅವರೆಲ್ಲರನ್ನೂ ಬಲಿತೆಗೆದುಕೊಳ್ಳುವುದೋ ಎಂದು ಅವರು ಭಯಪಟ್ಟಿದ್ದರು. ಆಕಾಶದಿಂದ ಭೀಮಾಕಾರದ ಬಂಡೆಯು ಅವರ ಮೇಲೆ ಎರಗಬಹುದೇ ಎಂದು ಭಾವಿಸಿದರು.

*ಆ ದೃಶ್ಯವೇ ಅವರನ್ನು ಇಸ್ಲಾಂ ಸ್ವೀಕರಿಸಲು ಪ್ರೇರೇಪಿಸಿತು. ಅವರ ಮನಸ್ಸನ್ನೂ ವಿಶಾಲಗೊಳಿಸಿತು. ಅದರೊಂದಿಗೆ ಖುರೈಷಿಗಳ ದುಷ್ಟ ತ್ಯ ಮತ್ತು ಪಾಪಗಳಲ್ಲಿ ತಾನು ಭಾಗೀದಾರನಲ್ಲವೆಂದೂ, ಅವರ ವಿಗ್ರಹಗಳನ್ನೂ ಮೂರ್ತಿಗಳನ್ನು ನಾನು ಉಪೇಕ್ಷಿಸಿ ಅಲ್ಲಾಹನ ಧರ್ಮದಲ್ಲಿ ಪ್ರವೇಶಿಸುವೆನೆಂದೂ ಬಹಿರಂಗವಾಗಿ ಘೋಷಿಸಿದರು.*

*ನಂತರ ಸಈದ್ ಬಿನ್ ಆಮಿರ್(ರ) ಮದೀನಾಗೆ ಹಿಜ್ರಾ ಹೋಗಿ ಪ್ರವಾದಿ (ಸ)ರವರ ಸನ್ನಿಧಿಗೆ ತಲುಪಿದರು. ಖೈಬರ್ ಮತ್ತು ನಂತರ ನಡೆದ ಯುದ್ಧಗಳಲ್ಲಿ ಪ್ರವಾದಿ (ಸ)ರೊಂದಿಗೆ ಧೈರ್ಯದಿಂದ ಭಾಗವಹಿಸಿದರು.*

ಆ ದೃಶ್ಯ ಮತ್ತು ಅನುಭವವು ಹೃದಯವನ್ನು ಒಡೆಯುವಂತಿದ್ದವು. ಸಈದ್‌ರಿಗೆ ಬದುಕಿನಲ್ಲಿ ದೊಡ್ಡ ಪಾಠವೊಂದನ್ನು ಖುಬೈಬ್(ರ)ರವರು ಕಲಿಸಿದಂತಿತ್ತು. ಹೌದು, ಸಈದ್‌ರಿಗೆ ಈ ಹಿಂದೆ ಕಲಿಯಲು ಸಾಧ್ಯವಾಗದಂತಹ ಪಾಠವಾಗಿತ್ತದು.

ಯಥಾರ್ಥ ಜೀವನವೆಂದರೆ ವಿಶ್ವಾಸವೆಂದೂ, ವಿಶ್ವಾಸದ ಮಾರ್ಗದಲ್ಲಿ ಮರಣದವರೆಗಿರುವ ಹೋರಾಟ ಎಂಬುದೇ ಆ ಪಾಠ. ಅಪಾರವಾದ ವಿಶ್ವಾಸಕ್ಕೆ ಅದ್ಭುತವನ್ನು ಸೃಷ್ಟಿಸಲು ಸಾಧ್ಯವೆಂಬ ಪಾಠ. ಓರ್ವ ವ್ಯಕ್ತಿಯನ್ನು ಅವರು ಅನುಯಾಯಿಗಳು ಇಷ್ಟೊಂದು ತೀವ್ರವಾಗಿ ಪ್ರೀತಿಸುವುದೆಂದರೆ ಅದು ಅಲ್ಲಾಹನ ಸಹಾಯ ಮತ್ತು ಬೆಂಬಲ ಲಭಿಸುವ ಪ್ರವಾದಿಯೇ ಆಗಿರಬೇಕು- ಸಈದ್ ತೀರ್ಮಾನಿಸಿದರು.

ಆ ದೃಶ್ಯವೇ ಅವರನ್ನು ಇಸ್ಲಾಂ ಸ್ವೀಕರಿಸಲು ಪ್ರೇರೇಪಿಸಿತು. ಅವರ ಮನಸ್ಸನ್ನೂ ವಿಶಾಲಗೊಳಿಸಿತು. ಅದರೊಂದಿಗೆ ಖುರೈಷಿಗಳ ದುಷ್ಕೃತ್ಯ ಮತ್ತು ಪಾಪಗಳಲ್ಲಿ ತಾನು ಭಾಗೀದಾರನಲ್ಲವೆಂದೂ, ಅವರ ವಿಗ್ರಹಗಳನ್ನೂ ಮೂರ್ತಿಗಳನ್ನು

ಹಿಮ್ಸ್ ಪ್ರದೇಶದ ಅಧಿಕಾರವನ್ನು ವಹಿಸಿ ಹೆಚ್ಚೇನೂ ದಿನಗಳಾಗಿರಲಿಲ್ಲ. ಹಿಮ್ಸ್‌ನ ಕೆಲವು ಜನರು ಉಮರ್(ರ)ರನ್ನು ಭೇಟಿಯಾಗಲು ಬಂದರು. ಸಈದರೊಂದಿಗೆ ಉಮರ್ (ರ)ರಿಗೆ ಒಳ್ಳೆಯ ನಂಬಿಕೆ ಇತ್ತು. ಉಮರ್(ರ) ಅವರೊಂದಿಗೆ ಕೇಳಿದರು. ನಿಮ್ಮೂರಿನ ಅತ್ಯಂತ ಬಡವರ ಹೆಸರುಗಳನ್ನು ನನಗೆ ಬರೆದುಕೊಡಿ. ಅವರ ಅಗತ್ಯಗಳನ್ನು ಪೂರೈಸಲು ನಾನೇನಾದರೂ ಮಾಡುತ್ತೇನೆ.''

ಅವರು ಆ ಬಡವರ ಹೆಸರುಗಳನ್ನು ಬರೆದು ಉಮರ್ (ರ)ರವರಿಗೆ ಕೊಟ್ಟ. ಅದರಲ್ಲಿ ಸಈದ್ ಬಿನ್ ಆಮಿರ್(ರ)ರವರ ಹೆಸರೂ ಇತ್ತು.

ನಾನು ಉಪೇಕ್ಷಿಸಿ ಅಲ್ಲಾಹನ ಧರ್ಮದಲ್ಲಿ ಪ್ರವೇಶಿಸುವೆನೆಂದೂ ಬಹಿರಂಗವಾಗಿ ಘೋಷಿಸಿದರು.

ನಂತರ ಸಈದ್ ಬಿನ್ ಆಮಿರ್(ರ) ಮದೀನಾಗಿ ಹಿಜ್ರಾ ಹೋಗಿ ಪ್ರವಾದಿ (ಸ)ರವರ ಸನ್ನಿಧಿಗೆ ತಲುಪಿದರು. ಖೈಬರ್ ಮತ್ತು ನಂತರ ನಡೆದ ಯುದ್ಧಗಳಲ್ಲಿ ಪ್ರವಾದಿ (ಸ)ರೊಂದಿಗೆ ಧೈರ್ಯದಿಂದ ಭಾಗವಹಿಸಿದರು.

ಪ್ರವಾದಿ(ಸ)ರವರು ಇಹಲೋಕ ಯಾತ್ರೆಗೈದು ತನ್ನ ಒಡೆಯನೆಡೆಗೆ ಸಂಪ್ರೀತನಾಗಿ ಮರಳಿ ಹೋದರು. ನಂತರ ಬಂದ ಖಲೀಫರಾದ ಅಬೂಬಕರ್(ರ), ಉಮರ್(ರ)ರವರ ಕೈಯಿಂದ ಹೊಣೆಗಾರಿಕೆಯನ್ನು ಸಮರ್ಪಣಾ ಮನೋಭಾವದಿಂದ ಸ್ವಯಂ ವಹಿಸಿಕೊಂಡರು. ಸಈದ್(ರ) ಇಹಲೋಕಕ್ಕೆ ಬದಲಾಗಿ ಪರಲೋಕವನ್ನು ಖರೀದಿಸಿದ ಅಪೂರ್ವ ಸತ್ಯ ವಿಶ್ವಾಸಿಯಾಗಿ ಮುಂದೆ ಜೀವಿಸಿದರು.

ಮನಸ್ಸಿನ ಯಾವುದೇ ಬಯಕೆಗಳಲ್ಲಿ ಜಟಿಲವಾದ ಎಲ್ಲಾ ಆಸ್ವಾದನೆಗಳಿಗಿಂತ ಹೆಚ್ಚಾಗಿ ಅಲ್ಲಾಹನ ತೃಪ್ತಿಗೆ ಮತ್ತು ಪ್ರತಿಫಲಕ್ಕೆ ಅವರು ಪ್ರಾಮುಖ್ಯತೆ ನೀಡಿದರು.

ಪ್ರವಾದಿ (ಸ)ರವರ ನಂತರ ಖಲೀಫರಾಗಿ ನಾಯಕತ್ವ ವಹಿಸಿದ ಅಬೂಬಕರ್(ರ) ಮತ್ತು ಉಮರ್(ರ) ಸಈದ್‌ಬಿನ್ ಆಮಿರ್(ರ)ರವರ ಸತ್ಯಸಂಧತೆ ಮತ್ತು ದೇವಭಕ್ತಿಯ ಬಗ್ಗೆ ಚೆನ್ನಾಗಿ ಅರಿವು ಇತ್ತು. ಅವರೆಲ್ಲರೂ ಸಈದರೊಂದಿಗೆ ಸಲಹೆಯನ್ನು ಕೇಳುತ್ತಿದ್ದರು. ಅವರ ಅಭಿಪ್ರಾಯಗಳಿಗೆ ಮನ್ನಣೆಯನ್ನು ಕೊಡುತ್ತಿದ್ದರು.

ಉಮರ್(ರ)ರವರ ಖಿಲಾಫತ್‌ನ ಮೊದಲ ಹಂತದಲ್ಲಿ ಒಮ್ಮೆ ಸಈದ್(ರ) ಖಲೀಫರ ಬಳಿಗೆ ತೆರಳಿ ಹೀಗೆಂದರು.

''ಓ ಉಮರ್, ಜನರ ವಿಷಯದಲ್ಲಿ ಅಲ್ಲಾಹನನ್ನು ಭಯಪಡಬೇಕೆಂದು ನಾನು ನಿಮಗೆ ಉಪದೇಶಿಸುವೆನು. ಆದರೆ ಅಲ್ಲಾಹನಿಗೆ ಸಂಬಂಧಿಸಿದ ವಿಷಯಗಳಲ್ಲಿ ತಾವುಗಳು ಜನರನ್ನು ಭಯಪಡಬೇಕಾಗಿಲ್ಲ. ತಮ್ಮ ಕೃತಿಗಳು ಮಾತಿಗೆ ವಿರುದ್ಧವಾಗಬಾರದೆಂದು ನಾನು ನಿಮ್ಮೊಂದಿಗೆ ಉಪದೇಶಿಸುವೆನು. ಕಾರಣ, ಕೃತಿಗಿಳಿಸುವ ಮೂಲಕ ನಿಜಗೊಳಿಸುವ ಮಾತುಗಳೇ ಉತ್ತಮವಾದ ಮಾತುಗಳು.

''ಓ ಉಮರ್, ಸಮೀಪವಿರುವ ಮತ್ತು ದೂರವಿರುವ ಎಲ್ಲಾ ಮುಸ್ಲಿಮರ ವಿಚಾರದಲ್ಲಿ ಹೊಣೆಗಾರಿಕೆ ವಹಿಸಲ್ಪಟ್ಟಿರುವ ನೀವು ಆ ಮುಸ್ಲಿಮರ ವಿಚಾರದಲ್ಲಿ ಮಗ್ನರಾಗಿರಿ. ತಮಗೆ ಮತ್ತು ತಮ್ಮ ಕುಟುಂಬಕ್ಕೆ ತಾವು ಮೆಚ್ಚುವ ಎಲ್ಲವನ್ನೂ ಅವರಿಗೂ ಮೆಚ್ಚಿರಿ. ತಾವು ತಮಗೂ ಕುಟುಂಬಕ್ಕೂ ಯಾವುದನ್ನು ಇಷ್ಟಪಡುವುದಿಲ್ಲವೋ ಅದನ್ನು ಅವರಿಗೂ ಇಷ್ಟಪಡದಿರಿ. ಸತ್ಯಕ್ಕಾಗಿ ಯಾವ ರಣರಂಗಕ್ಕೂ ಧುಮುಕಲು ತಾವು ತಯಾರಾಗಿರಿ. ಅಲ್ಲಾಹನ ವಿಚಾರದಲ್ಲಿ ಯಾವುದೇ ಟೀಕಾಕಾರನ ಟೀಕೆಯನ್ನು ಭಯಪಡದಿರಿ.''

ಸಈದ್(ರ) ಉಪದೇಶವನ್ನು ಆಲಿಸಿದ ಉಮರ್(ರ)ರವರು ಕೇಳಿದರು; ''ಇಷ್ಟೆಲ್ಲಾ ಯಾರಿಗೆ ಸಾಧ್ಯವಾಗಬಹುದು ಸಈದ್?''

ಸಈದ್(ರ) ಹೇಳಿದರು. ''ಅಲ್ಲಾಹನು ಮುಹಮ್ಮದ್ (ಸ)ರವರ ಸಮುದಾಯದಲ್ಲಿ ಹೊಣೆಗಾರಿಕೆಯಿರುವ ವ್ಯಕ್ತಿಗಳ ಮಧ್ಯೆ ಇಷ್ಟನ್ನೆಲ್ಲಾ ಮಾಡಲು ತಮ್ಮಂಥವರಿಗೆ ಮಾತ್ರ ಸಾಧ್ಯ. ಅಂತಹ ವ್ಯಕ್ತಿಗಳ ಮತ್ತು ಅಲ್ಲಾಹನ ಮಧ್ಯೆ ಯಾವನೂ ತಡೆಯಾಗಲಾರ''.

ಸಂಭಾಷಣೆಯು ಮುಂದುವರಿಯುತ್ತಿರಲು ಉಮರ್(ರ)ರವರು ಆಡಳಿತದಲ್ಲಿ ತನಗೆ ಸಹಾಕನಾಗಿ ನಿಲ್ಲಬೇಕೆಂದು ಸಈದ್‌ರೊಂದಿಗೆ ಆಗ್ರಹಿಸಿದರು.

''ಸಈದ್, ನಾನು ತಮ್ಮನ್ನು ಹಿಮ್ಸ್ ಪ್ರದೇಶದ ಗವರ್ನರ್ ಆಗಿ ನೇಮಿಸುವೆನು.'' ಅದನ್ನು ಕೇಳಿದ ಸಈದ್(ರ) ಹೇಳಿದರು. ''ಓ ಉಮರ್ ಅಲ್ಲಾಹನ ಹೆಸರಿನಲ್ಲಿ ನಾನು ತಮ್ಮಲ್ಲಿ ಬೇಡಿಕೊಳ್ಳುತ್ತಿದ್ದೇನೆ. ದಯವಿಟ್ಟು ನನ್ನನ್ನು ದಾರಿಗೆಟ್ಟು ಹೋಗುವಂತೆಯೂ, ಗೊಂದಲದಲ್ಲಿರುವಂತೆಯೂ ಮಾಡಬಾರದು.

ತಕ್ಷಣ ಕುಪಿತನಾದ ಉಮರ್(ರ)ರವರು ಹೇಳಿದರು: ''ಅಕಟಾ! ಈ ಭಾರವನ್ನು ನನ್ನ ಬೆನ್ನ ಮೇಲೆ ಹಾಕಿ ನನ್ನನ್ನು ಒಂಟಿಯಾಗಿ ಬಿಟ್ಟು ಹೋಗುತ್ತಿದ್ದೀರಾ? ಅಲ್ಲಾಹನಾಣೆ, ನಾನು ನಿಮ್ಮನ್ನು ಮುಕ್ತಗೊಳಿಸಲಾರೆನು.''

ನಂತರ ಉಮರ್(ರ) ಅವರನ್ನು ಹಿಮ್ಸ್ ಪ್ರದೇಶದ ಆಡಳಿತಾಧಿಕಾರಿಯಾಗಿ ನೇಮಿಸಿದರು. ನಂತರ ಹೇಳಿದರು:

''ತಮಗಾಗಿ ನಾನು ಒಂದಿಷ್ಟು ವೇತನವನ್ನು ನಿರ್ಣಯಿಸಲೇ?''

ಸಈದ್(ರ) ಹೇಳಿದರು: ಅಮೀರುಲ್ ಮುಅ್‌ಮಿನೀನ್, ಆ ವೇತನದಿಂದ ನಾನೇನು ಮಾಡಲಿ? ಬೈತುಲ್ ಮಾಲ್‌ನಿಂದ ನನಗೆ ಸಿಗುತ್ತಿರುವ ಪಾಲು ನನ್ನ ಅಗತ್ಯಕ್ಕಿಂತಲೂ ಮಿಕ್ಕಿದೆಯಲ್ಲವೇ?

ಹಿಮ್ಸ್ ಪ್ರದೇಶದ ಅಧಿಕಾರವನ್ನು ವಹಿಸಿ ಹೆಚ್ಚೇನೂ ದಿನಗಳಾಗಿರಲಿಲ್ಲ. ಹಿಮ್ಸ್‌ನ ಕೆಲವು ಜನರು ಉಮರ್(ರ)ರನ್ನು ಭೇಟಿಯಾಗಲು ಬಂದರು. ಸಈದರೊಂದಿಗೆ ಉಮರ್ (ರ)ರಿಗೆ ಒಳ್ಳೆಯ ನಂಬಿಕೆ ಇತ್ತು. ಉಮರ್(ರ) ಅವರೊಂದಿಗೆ ಕೇಳಿದರು. ನಿಮ್ಮೂರಿನ ಅತ್ಯಂತ ಬಡವರ ಹೆಸರುಗಳನ್ನು ನನಗೆ ಬರೆದುಕೊಡಿ. ಅವರ ಅಗತ್ಯಗಳನ್ನು ಪೂರೈಸಲು ನಾನೇನಾದರೂ ಮಾಡುತ್ತೇನೆ.''

ಅವರು ಆ ಬಡವರ ಹೆಸರುಗಳನ್ನು ಬರೆದು ಉಮರ್ (ರ)ರವರಿಗೆ ಕೊಟ್ಟರು. ಅದರಲ್ಲಿ ಸಈದ್ ಬಿನ್ ಆಮಿರ್(ರ)ರವರ ಹೆಸರೂ ಇತ್ತು. ಅದನ್ನು ನೋಡಿದಾಗ ಉಮರ್(ರ) ಕೇಳಿದರು. ''ಯಾರು ಈ ಸಈದ್ ಬಿನ್ ಆಮಿರ್?''.

ಅವರು ಹೇಳಿದರು ''ನಮ್ಮೂರ ಅಮೀರ್''.

ಉಮರ್(ರ) ಕೇಳಿದರು: ನಿಮ್ಮ ಅಮೀರ್ ಅಷ್ಟೂ ಬಡವನೇ?

ಅವರು ಹೇಳಿದರು: ''ಹೌದು, ಅಲ್ಲಾಹನಾಣೆ, ಅವರ ಮನೆಯಲ್ಲಿ ಅದೆಷ್ಟೋ ದಿನ ಬೆಂಕಿಯೇ ಕಾಣುವುದಿಲ್ಲ.''

ಅವರ ಮಾತನ್ನು ಕೇಳಿದ ಉಮರ್(ರ)ರವರು ಅತ್ತು ಬಿಟ್ಟರು. ಉದುರಿದ ಕಣ್ಣೀರು ಅವರ ದಾಡಿಯನ್ನು ನೆನೆಸಿತು. ಸಾವಿರ ದೀನಾರ್ (ಚಿನ್ನದ ನಾಣ್ಯಗಳು)ಗಳನ್ನು ಒಂದು ಚೀಲದಲ್ಲಿ ಹಾಕಿ ಅವರ ಕೈಯಲ್ಲಿಟ್ಟು ಉಮರ್(ರ)ರವರು ಹೇಳಿದರು. ''ನೀವು ಹೊರಟು ಹೋಗಿ ಅವರಿಗೆ ನನ್ನ ಸಲಾಂ ಹೇಳಿ. ಇದನ್ನು ಅಮೀರುಲ್ ಮುಅ್‌ಮಿನೀನ್ ಕಳುಹಿಸಿಕೊಟ್ಟದ್ದೆಂದೂ, ಈ ಹಣವು ತಮ್ಮ ಅಗತ್ಯಗಳನ್ನು ಪೂರೈಸಲು ಇರುವುದೆಂದೂ ತಿಳಿಸಿ.''

ಆ ಸಂಘವು ಉಮರ್(ರ) ಕೊಟ್ಟು ಕಳುಹಿಸಿದ ಚೀಲವನ್ನು ಸಈದ್(ರ)ರವರ ಮುಂದಿಟ್ಟರು. ಅದನ್ನು ತೆರೆದೊಡನೆ ಅದರ ತುಂಬಾ ಚಿನ್ನದ ನಾಣ್ಯಗಳಿದ್ದವು. ಇದನ್ನು ಕಂಡ ಸಈದ್ 'ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್' ಅನ್ನುತ್ತಾ ಆ ಚೀಲವನ್ನು ಪಕ್ಕದಲ್ಲಿರಿಸಿದರು. ಅವರ ಮಾತು ಕೇಳಿದರೆ ಅದೇನೋ ದುರ್ಘಟನೆ ಸಂಭವಿಸಿದಂತೆ ತೋರುತ್ತಿತ್ತು. ಸಈದ್(ರ)ರವರ ಪತ್ನಿ ಈ ಮಾತನ್ನು ಕೇಳಿ ಭಯಪಟ್ಟರು. ಅವರು ಆತಂಕದಿಂದ ಕೇಳಿದರು. ''ಏನು ನಡೆಯಿತು?, ಅಮೀರುಲ್ ಮುಅ್‌ಮಿನೀನ್ ಮರಣ ಹೊಂದಿದರೆ?''

ಸಈದ್ ನುಡಿದರು. ''ಅಲ್ಲ, ಅದಕ್ಕಿಂತಲೂ ಭೀಕರವಾದದ್ದು ಸಂಭವಿಸಿದೆ.''

ಅವರು ಕೇಳಿದರು. ''ಮುಸ್ಲಿಮರಿಗೇನಾದರೂ ದುರಂತ, ನಾಶ ಸಂಭವಿಸಿತೇ?''

''ಅಲ್ಲ, ಅದಕ್ಕಿಂತಲೂ ಭೀಕರವಾದದ್ದು ನಡೆದಿದೆ.''

''ಅದಕ್ಕಿಂತಲೂ ದೊಡ್ಡ ದುರಂತ. ಅದೇನದು?

''ನನ್ನ ಪರಲೋಕ ಜೀವನವನ್ನು ಪರಾಜಯಗೊಳಿಸಲು ಐಹಿಕ ಜೀವನದ ಸಂಪತ್ತು ನನ್ನ ಬಳಿಗೆ ಬಂದು ಬಿಟ್ಟಿದೆ. ನನ್ನ ಮನೆಯಲ್ಲಿ ಕೆಡುಕುಗಳು ಸಂಭವಿಸಲು ಅದು ಕಾರಣವಾದೀತು.''

''ಅದು ಬೇಡವೆಂದು ತಿರಸ್ಕರಿಸಿ ಅದರಿಂದ ಮುಕ್ತಗೊಂಡರೆ ಸಾಕಲ್ಲವೇ?''

ಅಲ್ಲಿರುವ ದೀನಾರ್‌ಗಳ ಕುರಿತು ಅವರಿಗೇನೂ ತಿಳಿದಿರಲಿಲ್ಲ.

ಸಈದ್(ರ) ಕೇಳಿದರು: ''ಈ ವಿಷಯದಲ್ಲಿ ನನಗೆ ಸಹಾಯ ಮಾಡುವೆಯಾ?''

''ಹೌದು ಮಾಡುತ್ತೇನೆ.''

ಸಈದ್ ಆ ದೀನಾರ್‌ಗಳನ್ನು ಅವರ ಕೈಯಲ್ಲಿರಿಸಿದರು. ನಂತರ ಹಲವಾರು ಚೀಲಗಳೊಂದಿಗೆ ಅವೆಲ್ಲವನ್ನೂ ಬಡವರಿಗೆ ಹಂಚಿದರು.

ಕೆಲವು ದಿನಗಳ ನಂತರ ಪ್ರಜೆಗಳ ಸ್ಥಿತಿಗತಿಗಳನ್ನು ನೋಡಿ ತಿಳಿಯಲು ಅಮೀರುಲ್ ಮುಅ್‌ಮಿನೀನ್ ಉಮರ್(ರ)ರವರು ಶಾಮ್‌ಗೆ ಹೊರಟರು. ಶಾಮ್‌ನ ಸಂದರ್ಶನದ ಭಾಗವೆಂಬಂತೆ ಅವರು ಹಿಮ್ಸ್ ಪ್ರದೇಶಕ್ಕೆ ತಲುಪಿದರು. ಹಿಮ್ಸ್ 'ಕುವೈಫ' ಎಂಬ ಹೆಸರಿನಿಂದಲೂ ಕರೆಯಲ್ಪಡುತ್ತಿತ್ತು. ಕೂಫ ಎಂಬ ಹೆಸರನ್ನು ಸ್ವಲ್ಪ ಬದಲಿಸಿ 'ಸಣ್ಣ ಕೂಫ' ಎಂಬರ್ಥದಲ್ಲಿ ಹಿಮ್ಸ್‌ನ್ನು 'ಕುವೈಫ' ಎಂದು ಜನರು ಕರೆಯುತ್ತಿದ್ದರು.

ಕೂಫಾದ ಜನತೆ-ಅಲ್ಲಿನ ಸಾಮಾನ್ಯ ಉದ್ಯೋಗಿಗಳಿಂದ ಹಿಡಿದು ಅಧಿಕಾರಿಗಳವರೆಗೆ ಎಲ್ಲರೂ ದೂರುಕೋರರಾಗಿದ್ದರು. ಒಂದನ್ನೂ ಬಿಡದೆ ಎಲ್ಲದಕ್ಕೂ ದೂರು ಹೇಳುವುದು ಅವರ ಅಭ್ಯಾಸವಾಗಿತ್ತು. ಹಿಮ್ಸ್ ಪ್ರದೇಶದ ಜನತೆಗೂ ಈ ದುರ್ಗುಣವಿದ್ದ ಕಾರಣ ಹಿಮ್ಸನ್ನು ' ಸಣ್ಣ ಕೂಫಾ' ಎಂಬರ್ಥ ಬರುವ 'ಕುವೈಫ' ಎಂದು ಕರೆಯುತ್ತಿದ್ದರು. ಉಮರ್(ರ)ರವರು ಹಿಮ್ಸ್ ತಲುಪಿದಾಗ ಊರ ಜನತೆ ಸ್ವಾಗತಿಸುತ್ತಾ ಸಲಾಂ ಹೇಳಿದರು. ಅ ವೇಳೆ ಅವರೊಂದಿಗೆ ಉಮರ್(ರ) ಕೇಳಿದರು. ''ನಿಮ್ಮ ಅಮೀರ್ ಹೇಗಿದ್ದಾರೆ?''

*ಆ ವೇಳೆ ಅವರು ಹೇಳಿದರು. ''ಅಲ್ಲಾಹನಾಣೆ ನನ್ನ ಕುಟುಂಬ ಮತ್ತು ಮಕ್ಕಳೊಂದಿಗೆ ನಾನು ನಿರ್ಭೀತನಾಗಿದ್ದು ಅದೇ ವೇಳೆ ಮುಹಮ್ಮದ್(ಸ) ರವರು ಕಷ್ಟಪಡುತ್ತಿರುವುದನ್ನು ನಾನು ಒಂದಿನಿತು ಇಷ್ಟಪಡಲಾರೆನು. ಆ ದಿನ ಮತ್ತು ದೃಶ್ಯವು ನನ್ನ ಕಣ್ಣ ಮುಂದೆ ಬರುವಾಗ ನನ್ನನ್ನು ಭಯ ಆವರಿಸುವುದು. ಅಂದು ನಾನು ಖುಬೈಬ್‌ರಿಗೆ ಸಹಾಯ ಮಾಡಲು ಮುಂದೆ ಬರಲಿಲ್ಲವಲ್ಲಾ? ಆ ಕಾರಣದಿಂದ ಅಲ್ಲಾಹನು ನನಗೆ ಮಾಫಿ ಮಾಡದಿದ್ದರೆ? ಆ ಭಯವು ಹೃದಯದಲ್ಲಿ ಬಂದಾಗ ನಾನು ಅಸ್ವಸ್ಥಗೊಳ್ಳುವೆನು.''*

ಅಷ್ಟರಲ್ಲಿ ಅವರೆಲ್ಲರೂ ಅಮೀರರ ಕುರಿತು ದೂರತೊಡಗಿದರು. ಅವುಗಳಲ್ಲಿ ಮುಖ್ಯವಾಗಿ ನಾಲ್ಕು ವಿಷಯಗಳ ಕುರಿತಾಗಿತ್ತು ಅವರ ದೂರು.  ಅವುಗಳಲ್ಲಿ ಪ್ರತಿಯೊಂದು ವಿಷಯವೂ ಗಂಭೀರವಾಗಿತ್ತು.

ಉಮರ್(ರ) ಹೇಳುತ್ತಾರೆ. ''ನಂತರ ನಾನು ವಿವರಣೆಯನ್ನು ಶೇಖರಿಸಿದೆನು. ಅವರ ಕುರಿತು ನನ್ನ ಊಹೆ ತಪ್ಪಾಗದಿರಲಿ ಎಂದು ಅಲ್ಲಾಹನೊಂದಿಗೆ ಪ್ರಾರ್ಥಿಸಿದೆನು. ಸಈದ್ (ರ)ರ ಬಗ್ಗೆ ನನಗೆ ಅಷ್ಟೊಂದು ವಿಶ್ವಾಸವಿತ್ತು. ಹಿಮ್ಸ್‌ನ ಜನತೆ ಮತ್ತು ಅವರ ಅಮೀರ್ ನನ್ನ ಮುಂದೆ ತಲುಪಿದಾಗ ನಾನು ಕೇಳಿದೆನು. ''ನಿಮ್ಮ ಅಮೀರ್‌ನ ಕುರಿತು ನಿಮಗಿರುವ ದೂರು ಏನದು?''

ಅವರು ಹೇಳಿದರು. ''ಹಗಲು ಹೊತ್ತು ತುಂಬಾ ಮೇಲೇರಿದ ನಂತರವಷ್ಟೇ ಅವರು ಮನೆಯಿಂದ ಹೊರಗಿಳಿದು ಬಂದು ನಮ್ಮ ಮಧ್ಯೆ ಬರುತ್ತಾರೆ''

ಆ ವೇಳೆ ನಾನು ಕೇಳಿದೆನು. ''ಸಈದ್ ಈ ದೂರಿನ ಕುರಿತು ನಿಮಗೇನು ಹೇಳಲಿಕ್ಕಿದೆ.?''

ಅಲ್ಪ ವೇಳೆಯ ನಂತರ ಸಈದ್ ಉತ್ತರಿಸಿದರು ''ಅಲ್ಲಾಹನ ಮೇಲಾಣೆ. ಅದನ್ನು ಬಹಿರಂಗ ಪಡಿಸಲು ನಾನು ಇಚ್ಛಿಸುವುದಿಲ್ಲ. ಆದರೆ ಇದೀಗ ಹೇಳುವುದು ಅನಿವಾರ್ಯವಾಗಿ ಬಿಟ್ಟಿದೆ. ನನ್ನ ಮನೆಯಲ್ಲಿ ಕೆಲಸದಾಳುಗಳಿಲ್ಲ. ನಾನು ಬೆಳಗ್ಗೆ ಎದ್ದು ಮನೆಮಂದಿಗಾಗಿ ಹಿಟ್ಟನ್ನು ಕಲಸಿ ಇಟ್ಟು ಅದು ಒಂದಿನಿತು ಹುಳಿ ಬರಲು ಕಾದು ನಿಲ್ಲುವೆನು. ಅದರಿಂದ ಬೆಳಗ್ಗಿನ ಉಪಹಾರವನ್ನು ಸಿದ್ಧಪಡಿಸಿದ ನಂತರವಷ್ಟೇ ಜನರನ್ನು ಕಾಣಲು ಹೊರಡುವೆನು.

ಉಮರ್(ರ) ಅವರೊಂದಿಗೆ ಕೇಳಿದರು. ನಿಮ್ಮ ಎರಡನೇ ದೂರು ಯಾವುದು?

ಅವರು ಹೇಳಿದರು. ''ರಾತ್ರಿಯ ವೇಳೆ ಅವರು ಯಾರಿಗೂ ಯಾವುದಕ್ಕೂ ಜವಾಬು ನೀಡುವುದೇ ಇಲ್ಲ.''

ನಾನು ಕೇಳಿದೆನು, ''ಸಈದ್ ಈ ವಿಷಯದ ಕುರಿತು ತಾವೇನು ಹೇಳುತ್ತೀರಿ?

ಅವರು ನುಡಿದರು, ''ಈ ವಿಷಯವನ್ನೂ ಸಹ ಬಹಿರಂಗಪಡಿಸಲು ನಾನು ಇಷ್ಟಪಡುವುದಿಲ್ಲ. ನಾನು ಹಗಲಿನ ವೇಳೆಯನ್ನು ಅವರಿಗಾಗಿ ಮೀಸಲಿಟ್ಟಿರುವೆ. ರಾತ್ರಿಯ ವೇಳೆಯನ್ನು ಪ್ರತಾಪನಾದ ಅಲ್ಲಾಹನಿಗಾಗಿ ಮೀಸಲಿಟ್ಟಿರುವೆನು.

ನಾನು ಕೇಳಿದೆನು, ''ಇನ್ನಾವುದು ನಿಮ್ಮ ದೂರು?''

ಅವರು ಹೇಳಿದರು, ''ತಿಂಗಳಲ್ಲಿ ಒಂದು ದಿನ ಪೂರ್ತಿಯಾಗಿ ಅವರು ನಮ್ಮ ಮಧ್ಯೆ ಬರುವುದೇ ಇಲ್ಲ.''

ನಾನು ಕೇಳಿದೆನು, 'ಅದ್ಯಾಕೆ ಸಈದ್?''

ಅವರು ಹೇಳಿದರು, ''ಓ ಅಮೀರುಲ್ ಮುಅ್‌ಮಿನೀನ್ ನನ್ನ ಮನೆಯಲ್ಲಿ ಕೆಲಸದಾಳುಗಳಿಲ್ಲ. ಇದೀಗ ನಾನು ಧರಿಸಿದ ಬಟ್ಟೆಯ ಹೊರತು ಬೇರೆ ಬಟ್ಟೆ ನನಗಿಲ್ಲ. ತಿಂಗಳಲ್ಲಿ ಒಂದಾವರ್ತಿ ನಾನು ಅದನ್ನು ಒಗೆಯುವೆನು. ನಂತರ ಒಣಗುವವರೆಗೆ ಕಾಯುವೆನು. ಆ ದಿನದಂದು ಹೊತ್ತು ತುಂಬಾ ಮೇಲೇರಿದ ನಂತರವಷ್ಟೇ ನನಗೆ ಅವರ ಬಳಿ ಹೋಗಲು ಸಾಧ್ಯವಾಗುತ್ತದೆ.''

ಅವರು ಹೇಳಿದರು: ''ಕೆಲವೊಮ್ಮೆ ನಮ್ಮೊಂದಿಗೆ ಮಾತನಾಡುತ್ತಿರುವ ಮಧ್ಯೆ ಅವರನ್ನು ಯಾರೋ ಹಿಡಿದಿಟ್ಟಂತೆ ನಮಗೆ ಭಾಸವಾಗುವುದು. ಅಂತಹ ಸಂದರ್ಭಗಳಲ್ಲಿ ಅವರು ಜನರ ಬಳಿಯಿಂದ ದೂರ ಸರಿದು ಒಂಟಿಯಾಗಿರುವುದನ್ನೂ ಕಂಡಿದ್ದೇವೆ.''

ನಾನು ಕೇಳಿದೆನು: ''ಇದು ಯಾತಕ್ಕಾಗಿ ಸಈದ್?''

ಆ ವೇಳೆ ಅವರು ಹೇಳಿದರು: ''ನಾನೋರ್ವ ಬಹುದೈವ ವಿಶ್ವಾಸಿಯಾಗಿದ್ದ ವೇಳೆ ಖುಬೈಬು ಬಿನ್ ಅದಿಯ್ಯ್‌ರ ಕೊಲೆಗೆ ದೃಕ್‌ಸಾಕ್ಷಿಯಾಗಿದ್ದೆನು. ಅವರ ದೇಹದಿಂದ ಮಾಂಸವನ್ನು ತುಂಡರಿಸಿ ತೆಗೆಯುತ್ತಿದ್ದ ವೇಳೆ ಖುರೈಷಿಗಳು ಅವರೊಂದಿಗೆ ಕೇಳುತ್ತಿದ್ದರು. ನಿನ್ನ ಜಾಗದಲ್ಲಿ ಮುಹಮ್ಮದ್ ಆಗಿದ್ದರೆ ಅದನ್ನು ನೀನು ಇಷ್ಟಪಡುತ್ತಿದ್ದೆಯಾ?''

ಆ ವೇಳೆ ಅವರು ಹೇಳಿದರು. ''ಅಲ್ಲಾಹನಾಣೆ ನನ್ನ ಕುಟುಂಬ ಮತ್ತು ಮಕ್ಕಳೊಂದಿಗೆ ನಾನು ನಿರ್ಭೀತನಾಗಿದ್ದು, ಅದೇ ವೇಳೆ ಮುಹಮ್ಮದ್(ಸ)ರವರು ಕಷ್ಟಪಡುತ್ತಿರುವುದನ್ನು ನಾನು ಒಂದಿನಿತು ಇಷ್ಟಪಡಲಾರೆನು. ಆ ದಿನ ಮತ್ತು ದೃಶ್ಯವು ನನ್ನ ಕಣ್ಣಮುಂದೆ ಬರುವಾಗ ನನ್ನನ್ನು ಭಯ ಆವರಿಸುವುದು. ಅಂದು ನಾನು ಖುಬೈಬ್‌ರಿಗೆ ಸಹಾಯ ಮಾಡಲು ಮುಂದೆ ಬರಲಿಲ್ಲವಲ್ಲಾ? ಆ ಕಾರಣದಿಂದ ಅಲ್ಲಾಹನು ನನಗೆ ಮಾಫಿ

ಮಾಡದಿದ್ದರೆ? ಆ ಭಯವು ಹೃದಯದಲ್ಲಿ ಬಂದಾಗ ನಾನು ಅಸ್ವಸ್ಥಗೊಳ್ಳುವೆನು.''

ನಂತರ ಉಮರ್(ರ)ರವರು ಸಈದ್(ರ)ರಿಗೆ ಅಗತ್ಯಕ್ಕೆಂದು ಸಾವಿರ ದೀನಾರ್‌ಗಳನ್ನು ಕಳಿಸಿಕೊಟ್ಟರು. ಅದನ್ನು ನೋಡಿದಾಗ ಸಈದ್(ರ)ರವರ ಪತ್ನಿ ಹೇಳಿದರು. ಪರಿಶ್ರಮವಿಲ್ಲದೆ ನಮಗೆ ಸಂಪತ್ತನ್ನು ನೀಡಿದ ಅಲ್ಲಾಹನಿಗೆ ಸ್ತುತಿ. ಆ ಹಣದಿಂದ ನಮಗೆ ಅಗತ್ಯದ ಆಹಾರ ಸಾಮಗ್ರಿಗಳನ್ನು ಖರೀದಿಸಬಹುದು ಮತ್ತು ಓರ್ವ ಸೇವಕನನ್ನು ಕೆಲಸಕ್ಕೆ ನೇಮಿಸಬಹುದು.

ಅದನ್ನು ಕೇಳಿದ ಸಈದ್(ರ)ರವರು ಕೇಳಿದರು. ''ಅದಕ್ಕಿಂತಲೂ ಉತ್ತಮವಾದುದನ್ನು ನಿನಗೆ ನಾನು ತಿಳಿಸಲೇ?''

ಪತ್ನಿ ಕೇಳಿದರು: ''ಅದೇನದು?''

ಅವರು ಹೇಳಿದರು: ಅದನ್ನು ನಮಗೆ ತಂದು ಕೊಡುವವರಿಗೂ ಮತ್ತು ನಮ್ಮೊಂದಿಗೆ ಸಹಾಯ ಯಾಚಿಸುವವರಿಗೂ ಕೊಟ್ಟು ಬಿಡೋಣ. ನಮಗದು ಅತ್ಯಂತ ಅವಶ್ಯ ಇದ್ದರೂ ಕೂಡ.

ಅವರು ಕೇಳಿದರು: ''ಅದೇನದು''

ಸಈದ್(ರ)ರವರು ಉತ್ತರಿಸಿದರು: ''ನಾವು ಅದನ್ನು ಅಲ್ಲಾಹನಿಗಾಗಿ ಉತ್ತಮವಾದ ಕೊಡುಗೆಯನ್ನಾಗಿ ನೀಡೋಣ.''

ಅವರು ಹೇಳಿದರು: ''ಹಾಗೆಯೇ ಆಗಲಿ, ತಮಗೆ ಅಲ್ಲಾಹನು ಉತ್ತಮವಾದ ಪ್ರತಿಫಲವನ್ನು ನೀಡಲಿ''

ವಿರಮಿಸುವ ಮೊದಲೇ ಸಈದ್(ರ)ರವರು ಆ ದೀನಾರ್‌ಗಳನ್ನು ಅಲ್ಲಿದ್ದ ಹಲವು ಚೀಲಗಳಲ್ಲಿ ತುಂಬಿಸಿಟ್ಟರು. ನಂತರ ತನ್ನ ಕುಟುಂಬದಲ್ಲಿರುವ ಓರ್ವನನ್ನು ಕರೆದು ಈ ರೀತಿ ಹೇಳಿದರು. ಇದನ್ನು ತೆಗೆದುಕೊಂಡು ಹೋಗಿ ಇಂತಿಂತಹ ವ್ಯಕ್ತಿಯ ವಿಧವೆಗೂ, ಇಂತಿಂತಹ ವ್ಯಕ್ತಿಯ ಅನಾಥರಾದ ಮಕ್ಕಳಿಗೂ, ಇಂತಿಂತಹ ನಿರ್ಗತಿಕರಿಗೂ, ಬಡವರಿಗೂ ಹಂಚಿರಿ.

ಅಲ್ಲಾಹನು ಸಈದ್ ಬಿನ್ ಆಮಿರ್ (ರ)ರಿಂದ ತೃಪ್ತನಾಗಲಿ. ಕಡುಬಡತನದಿಂದಲೂ, ಅತೀ ಅಗತ್ಯ ಇರುವಾಗಲೂ ತನಗಿಂತ ಬೇರೆಯವರ ಕ್ಷೇಮಕ್ಕಾಗಿ ಪ್ರಾಮುಖ್ಯತೆಯನ್ನು ನೀಡಿದ್ದ ಮಹಾನುಭಾವರಾಗಿದ್ದರು ಸಈದ್(ರ).

ಪ್ರಿಯದರ್ಶಿನಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಟೆಕ್ನಾಲಜಿ
ಒಂದೇ ವರ್ಷದಲ್ಲಿ ಉದ್ಯೋಗ ಪಡೆಯುವ ಸುವರ್ಣಾವಕಾಶ
10 ನೇ ವರ್ಷದ ಬ್ಯಾಚಿಗೆ ಪ್ರವೇಶ ಆರಂಭವಾಗಿದೆ.
ಅಲ್ ಬರಕ ಕಾಂಪ್ಲೆಕ್ಸ್, ಹೊಸಂಗಡಿ, ಮಂಜೇಶ್ವರ-671 323.
Ph : 04998-320347, Cell: 09947152399, 09895416201
ವಿದ್ಯಾರ್ಹತೆ S.S.L.C ಮೇಲ್ಪಟ್ಟು
• ದೇಶ ವಿದೇಶಗಳಲ್ಲಿ ಉದ್ಯೋಗ ಗಳಿಸಲು ಒಂದು ಸುವರ್ಣಾವಕಾಶ • K.P.M.E.S. ನಿಂದ ಅಂಗೀಕೃತಗೊಂಡ ಜಿಲ್ಲೆಯ ಏಕೈಕ ಸಂಸ್ಥೆ
• ಹುಡುಗರಿಗೆ ಹಾಗೂ ಹುಡುಗಿಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ • ಕನ್ನಡ ಹಾಗೂ ಮಲಯಾಳಂನಲ್ಲಿ ಅನುಭವಿ ಶಿಕ್ಷಕರಿಂದ ತರಬೇತಿ. • ಆಸ್ಪತ್ರೆಯಲ್ಲಿ ಪ್ರಾಕ್ಟಿಕಲ್ ಸೌಲಭ್ಯ ಸಹಿತ ತರಬೇತಿ • ಉತ್ತಮವಾಗಿ ಕೋರ್ಸನ್ನು ಪೂರ್ತಿಗೊಳಿಸಿದವರಿಗೆ ಉದ್ಯೋಗದ ಭರವಸೆ.
ನಮ್ಮಲ್ಲಿರುವ ಕೋರ್ಸ್‌ಗಳು:
• ಮೆಡಿಕಲ್ ಲ್ಯಾಬ್ ಟೆಕ್ನೀಷಿಯನ್ ಕೋರ್ಸ್ • ಮೆಡಿಕಲ್ ಎಕ್ಸ್‌ರೇ ಟೆಕ್ನೀಷಿಯನ್ ಕೋರ್ಸ್ • ಇಸಿಜಿ ಟೆಕ್ನೀಷಿಯನ್ ಕೋರ್ಸ್.
3ನೇ ವರ್ಷದಲ್ಲಿ ಸರ್ಕಾರಿ ಉದ್ಯೋಗ ಗಳಿಸಲು ಒಂದು ಸುವರ್ಣಾವಕಾಶ ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದ ಹಾಗೂ INC, KNC ಮಾನ್ಯತೆ ಇರುವ ಸರ್ಕಾರಿ ಕೋಟಾ ಪ್ರವೇಶಕ್ಕಾಗಿ ವಿಚಾರಿಸಿರಿ.
1. Medical LAB ಟೆಕ್ನೀಷಿಯನ್ (DMLT) 2. Medical X-Ray ಟೆಕ್ನೀಷಿಯನ್ (DMRT) 3. Medical O.T. ಟೆಕ್ನೀಷಿಯನ್ (DMOT) 4. Health Inspector (BHI) 5. General Nursing Course (GNM) 6. BSc Nursing Course(Bsc Nurse)
ಸಂಪರ್ಕಿಸಿರಿ: ಎನ್. ಅಬ್ದುಲ್ ಹಮೀದ್
ಪ್ರಾಂಶುಪಾಲರು
ಪ್ರಿಯದರ್ಶಿನಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಟೆಕ್ನಾಲಜಿ (DMLT,DMRT) Reg No-4583

# ಯೋಜನಾ ಆಯೋಗದ ಅಯೋಗ್ಯರ ಬಡತನ ವ್ಯಾಖ್ಯಾನ!

● ಗೌರಿ ಲಂಕೇಶ್

''ಭಾರತದ ನಗರ ನಿವಾಸಿಗಳು ದಿನಕ್ಕೆ 20 ರೂಪಾಯಿಗಳನ್ನು ದುಡಿಯುತ್ತಿದ್ದು, ಗ್ರಾಮೀಣ ಪ್ರದೇಶದ ಜನರು ದಿನಕ್ಕೆ 15 ರೂಪಾಯಿಗಳನ್ನು ದುಡಿಯುತ್ತಿದ್ದರೆ ಅಂತಹವರು ಬಡತನ ರೇಖೆಗಿಂತ ಕೆಳಗೆ ಬರುವುದಿಲ್ಲ'' ಎಂದು ಯೋಜನಾ ಆಯೋಗ ಇತ್ತೀಚೆಗೆ ಘೋಷಿಸಿದೆ. ಅಂದರೆ ನಗರದಲ್ಲಿ ತಿಂಗಳಿಗೆ ಕೇವಲ ಆರು ನೂರು ರೂಪಾಯಿ ಪಗಾರ ಮತ್ತು ಹಳ್ಳಿಗಳಲ್ಲಿ 450 ರೂಪಾಯಿ ಸಂಬಳ ಗಳಿಸುತ್ತಿದ್ದರೆ ಸಾಕು ಯಾರೇ ಆಗಲಿ, ಆರಾಮದ ಜೀವನ ನಡೆಸಬಹುದು ಎಂಬ ನಿಲುವ ಏಸಿ ರೂಮ್‌ಗಳಲ್ಲಿ ಕೂರುವ, ಐಷರಾಮಿ ಕಾರ್‌ಗಳಲ್ಲಿ ಸುತ್ತಾಡುವ, ತಿಂಗಳಿಗೆ ಲಕ್ಷಾಂತರ ರೂಪಾಯಿಗಳ ಆದಾಯವನ್ನು ಹೊಂದಿರುವ ಯೋಜನಾ ಆಯೋಗದ ಬೃಹಸ್ಪತಿಗಳದ್ದು!

ಯೋಜನಾ ಆಯೋಗದ ಆಯೋಗ್ಯರ ನೀಚಬುದ್ಧಿಯನ್ನು ವರ್ಣಿಸಲು ಪದಗಳೇ ಸಿಗದಷ್ಟು ಕೋಪ ನನ್ನ ನೆತ್ತಿಗೇರಿದೆ. ಇವತ್ತು ನಮ್ಮ ನಗರಗಳಲ್ಲೇ ಆಗಲಿ, ಹಳ್ಳಿಗಳಲ್ಲೇ ಆಗಲಿ ಒಂದು ಚಿಕ್ಕ ಸಂಸಾರವನ್ನು ನೆಮ್ಮದಿಯಿಂದ ನಿರ್ವಹಿಸಲು, ಸಂಸಾರದ ಎಲ್ಲರಿಗೂ ಆರೋಗ್ಯಕರ ಆಹಾರ, ವಿದ್ಯೆ, ನೆಟ್ಟಗಿನ ಬಟ್ಟೆ ಕೊಡಿಸಲು ಎಷ್ಟು ಹಣ ಬೇಕಾಗುತ್ತದೆಂದು ಆ ದರಿದ್ರಗಳಿಗೆ ಅರಿವಾದರೂ ಇದೆಯೇ? ಅದರಲ್ಲೂ ಈಗ ಎಲ್ಲಾ ಪದಾರ್ಥಗಳ ಬೆಲೆ ಗಗನಕ್ಕೇರುವಾಗ?

ಇತ್ತೀಚೆಗೆ 'ಇಂಡಿಯಾ ಟುಡೆ' ಪತ್ರಿಕೆಯವರು ಬೆಲೆ ಏರಿಕೆ ಬಗ್ಗೆ ಇದೇ ಯೋಜನಾ ಆಯೋಗದ ಡೆಪ್ಯೂಟಿ ಚೇರ್ಮನ್ ಮಾಂಟೆಕ್ ಸಿಂಗ್ ಅಹ್ಲುವಾಲಿಯಾನನ್ನು ಪ್ರಶ್ನಿಸಿದಾಗ ಆತ ಎಂತಹ ಉತ್ತರ ಕೊಟ್ಟಿದ್ದಾನೆ ಗೊತ್ತಾ? ''ನಿಜ, ಇತ್ತೀಚೆಗೆ ಹಾಲು ಮತ್ತು ತರಕಾರಿಗಳ ಬೆಲೆ ಏರಿದೆ. ಆದರೆ ಇದೆಲ್ಲ ನಮ್ಮ ಆರ್ಥಿಕ ಸಮೃದ್ಧಿ ಮತ್ತು ಖರೀದಿಸುವ ತಾಕತ್ತಿನ ಸಂಕೇತವಾಗಿದೆ'' ಎಂದಿದ್ದಾನೆ ಆ ಮುಠ್ಠಾಳ. ಅಷ್ಟೇ ಅಲ್ಲ, ಇದೇ ಹಣದುಬ್ಬರ ಲಕ್ಷಾಂತರ ಭಾರತೀಯರನ್ನು ಸಾವಿನ ಅಂಚಿಗೆ ದೂಡುತ್ತಿದ್ದರೂ, 'ಇಂಡಿಯಾ ಟುಡೆ' ಪ್ರಕಾರ ಈ ಬೆಲೆ ಏರಿಕೆ ಬಗ್ಗೆ ಕೇಂದ್ರ ಸರಕಾರಕ್ಕೆ ಹೆಮ್ಮೆ ಇದೆಯಲ್ಲದೆ, ತನ್ನ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದಾಗಿ ಜನರ ಕೈಯಲ್ಲಿ ಅಪಾರ ಹಣ ಹರಿದಾಡುತ್ತಿದ್ದು ಅವರೆಲ್ಲ ಹೆಚ್ಚು ವಸ್ತುಗಳನ್ನು ಖರೀದಿಸುತ್ತಿರುವುದರಿಂದ ಆಹಾರ ಬೆಲೆ ಏರುತ್ತಿದೆ ಎಂಬ ತರ್ಕ ಅದರದ್ದಾಗಿದೆ.

ಜಾಗತಿಕವಾಗಿ ಆಹಾರ ಬೆಲೆ ಏರುತ್ತಿರುವುದಕ್ಕೆ ಕಾರಣ ಚೀನಿಯರು ಮತ್ತು ಭಾರತೀಯರು ಹೆಚ್ಚು ತಿನ್ನುತ್ತಿರುವುದೇ ಕಾರಣ ಎಂದಿದ್ದ ಅಮೆರಿಕಾದ ಮಾಜಿ ಅಧ್ಯಕ್ಷ ಜಾರ್ಜ್ ಬುಷ್‌ನ ಅವಿವೇಕತನಕ್ಕೂ, ಹಣದುಬ್ಬರದಿಂದ ನಮ್ಮ ಜನರಿಗೆ ಒಳ್ಳೆಯದಾಗುತ್ತಿದೆ ಎಂದು ಅಹ್ಲುವಾಲಿಯಾ ತರಹದ ಹುಚ್ಚರಿಗೂ ಏನು ವ್ಯತ್ಯಾಸ?

ಇವತ್ತು ನಮ್ಮ ರಾಜ್ಯದಲ್ಲೇ ಹಾಲಿನ ಬೆಲೆ ಲೀಟರ್‌ಗೆ 23 ರೂಪಾಯಿ. 30 ರೂಪಾಯಿಗಿಂತ ಕಡಿಮೆ ಬೆಲೆಗೆ ಮನುಷ್ಯರು ತಿನ್ನುವಂತಹ ಅಕ್ಕಿ ಸಿಗುವುದಿಲ್ಲ. ಕೇಜಿ ರಾಗಿ ಬೆಲೆ 18 ರೂಪಾಯಿ ಆಗಿದ್ದರೆ, ಗೋಧಿ ಬೆಲೆ 20 ರೂಪಾಯಿ. ಇದೆಲ್ಲದರೊಂದಿಗೆ ಮನೆ ಬಾಡಿಗೆ, ನೀರು, ವಿದ್ಯುತ್, ಶಾಲೆ-ಕಾಲೇಜಿನ ಶುಲ್ಕ,

ಆರೋಗ್ಯ, ಬಟ್ಟೆ ಇತ್ಯಾದಿಗಳನ್ನು ಲೆಕ್ಕ ಹಾಕಿದರೆ ತಂದೆತಾಯಿ ಮತ್ತು ಇಬ್ಬರು ಮಕ್ಕಳಿರುವ ಚಿಕ್ಕ ಕುಟುಂಬಕ್ಕೆ, ಹಾಸಿಗೆ ಇದ್ದಷ್ಟು ಕಾಲು ಚಾಚಿ ಬದುಕುವುದಕ್ಕೆ ಕನಿಷ್ಠವೆಂದರೂ ತಿಂಗಳಿಗೆ ಎಂಟು ಸಾವಿರ ರೂಪಾಯಿಗಳ ಆದಾಯ ಇರಲೇಬೇಕಾಗಿದೆ. ಇದರಲ್ಲಿ ಆಕಸ್ಮಿಕ ವೆಚ್ಚಗಳನ್ನು ಲೆಕ್ಕ ಹಾಕಿಲ್ಲ.





ನಿಜವಾಗಲೂ ಸಾಮಾನ್ಯ ಜನರು ಹೇಗೆ ಬದುಕುತ್ತಿದ್ದಾರೆ ಎಂದು ವಿಚಾರಿಸಲು ನಮ್ಮ ಮನೆ ಕೆಲಸಕ್ಕೆ ಬರುವ ಯಶೋಧಳಿಗೆ ಕೆಲವು ಪ್ರಶ್ನೆಗಳನ್ನು ಕೇಳಿದೆ.

ಎಂದೂ ಆಕೆಯನ್ನು ಹೆಚ್ಚು ಮಾತನಾಡಿಸದ ನಾನು ಇದ್ದಕ್ಕಿದ್ದಂತೆ ಆಕೆಯ ಆದಾಯ, ಅವಳ ಮಗನಿಗೆ ಬರುತ ತಿಂಗಳ ಸಂಬಳ, ತಿಂಗಳ ವೆಚ್ಚಗಳ ಕೇಳಿದಾಗ ಕುತೂಹಲಗೊಂಡ ಯಶೋಧ ''ಯಾಕೆ ಅಕ್ಕ ಅದೆಲ್ಲ'' ಎಂದಳು. ''ಇಲ್ಲ, ನೀನು ತಿಂಗಳಿಗೆ 600 ರೂಪಾಯಿಗಳಿಗಿಂತ ಹೆಚ್ಚು ದುಡಿಯುತ್ತಿದ್ದರೆ ನೀನು ಬಡವಿ ಅಲ್ಲ, ಆದುದರಿಂದ ನಿನ್ನಂಥವರಿಗೆ ರೇಷನ್ ಕಾರ್ಡ್ ಇತ್ಯಾದಿಗಳನ್ನು ನೀಡುವ ಅಗತ್ಯ ವಿಲ್ಲ ಅಂತ ಭಾರತ ಸರಕಾರ ಹೇಳಿದೆ. ಅದಕ್ಕೇ ಕೇಳಿದೆ'' ಎಂದು ಆಕೆಗೆ ಅರ್ಥವಾಗುವ ರೀತಿಯಲ್ಲಿ ಸಂಕ್ಷಿಪ್ತವಾಗಿ ಹೇಳಿದೆ.

ಇತ್ತೀಚೆಗೆ 'ಇಂಡಿಯಾ ಟುಡೆ' ಪತ್ರಿಕೆಯವರು ಬೆಲೆ ಏರಿಕೆ ಬಗ್ಗೆ ಇದೇ ಯೋಜನಾ ಆಯೋಗದ ಡೆಪ್ಯೂಟಿ ಚೇರ್ಮನ್ ಮಾಂಟೆಕ್ ಸಿಂಗ್ ಅಹ್ಲುವಾಲಿಯಾನನ್ನು ಪ್ರಶ್ನಿಸಿದಾಗ ಆತ ಎಂತಹ ಉತ್ತರ ಕೊಟ್ಟಿದ್ದಾನೆ ಗೊತ್ತಾ? ''ನಿಜ, ಇತ್ತೀಚೆಗೆ ಹಾಲು ಮತ್ತು ತರಕಾರಿಗಳ ಬೆಲೆ ಏರಿದೆ. ಆದರೆ ಇದೆಲ್ಲ ನಮ್ಮ ಆರ್ಥಿಕ ಸಮೃದ್ಧಿ ಮತ್ತು ಖರೀದಿಸುವ ತಾಕತ್ತಿನ ಸಂಕೇತವಾಗಿದೆ'' ಎಂದಿದ್ದಾನೆ ಆ ಮುಠ್ಠಾಳ. ಅಷ್ಟೇ ಅಲ್ಲ, ಇದೇ ಹಣದುಬ್ಬರ ಲಕ್ಷಾಂತರ ಭಾರತೀಯರನ್ನು ಸಾವಿನ ಅಂಚಿಗೆ ದೂಡುತ್ತಿದ್ದರೂ, 'ಇಂಡಿಯಾ ಟುಡೆ' ಪ್ರಕಾರ ಈ ಬೆಲೆ ಏರಿಕೆ ಬಗ್ಗೆ ಕೇಂದ್ರ ಸರಕಾರಕ್ಕೆ ಹೆಮ್ಮೆ ಇದೆಯಲ್ಲದೆ, ತನ್ನ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದಾಗಿ ಜನರ ಕೈಯಲ್ಲಿ ಅಪಾರ ಹಣ ಹರಿದಾಡುತ್ತಿದ್ದು ಅವರೆಲ್ಲ ಹೆಚ್ಚು ವಸ್ತುಗಳನ್ನು ಖರೀದಿಸುತ್ತಿರುವುದರಿಂದ ಆಹಾರ ಬೆಲೆ ಏರುತ್ತಿದೆ ಎಂಬ ತರ್ಕ ಅದರದ್ದಾಗಿದೆ.

ಅದನ್ನು ಕೇಳಿ ಯಶೋಧಳಿಗೆ ನಗಬೇಕೋ, ಅಳಬೇಕೋ ಗೊತ್ತಾಗಲಿಲ್ಲ. ''ತಿಂಗಳಿಗೆ 600 ರೂಪಾಯಿ ದುಡಿದರೆ ನಾನು ಬಾಡಿಗೆ ಕಟ್ಟಲೋ, ಗಂಜಿ ಕುಡಿದು ಬದುಕಲೋ'' ಎಂದಳು ಯಶೋಧ.

ಸುಮಾರು 38 ವರ್ಷ ವಯಸ್ಸಿನ ಯಶೋಧಳ ಮನೆಯಲ್ಲಿ ಆಕೆ, ಅವಳ ಮಗ, ಮಗಳು, ಸೊಸೆ ಮತ್ತು ಮೊಮ್ಮಗ ಇದ್ದಾರೆ. ನನ್ನ ಮತ್ತು ಇನ್ನೊಂದು ಮನೆಯಲ್ಲಿ ಕೆಲಸ ಮಾಡುತ್ತಿರುವ ಯಶೋಧ ತಿಂಗಳಿಗೆ 2,500 ರೂಪಾಯಿಗಳನ್ನು ದುಡಿಯುತ್ತಾಳೆ. ಅವಳ ಮಗ ಕಾರ್ ಡ್ರೈವರ್ ಆಗಿದ್ದು, ತಿಂಗಳಿಗೆ 6000 ರೂಪಾಯಿ ಸಂಬಳ ಪಡೆಯುತ್ತಾನೆ. ಯಶೋಧಳ ಮಗಳು ಇನ್ನೂ ಶಾಲೆಯಲ್ಲಿ ಓದುತ್ತಿದ್ದು, ಸೊಸೆ ಇತ್ತೀಚೆಗೆ ಮಗುವಿಗೆ ಜನ್ಮ ನೀಡಿರುವುದರಿಂದ ಮನೆಯಲ್ಲಿದ್ದಾಳೆ.

ಈ ಐವರ ಕುಟುಂಬ ಒಂದು ಹಾಲ್, ಚಿಕ್ಕ ಕೊಠಡಿ ಮತ್ತು ಅಡುಗೆ ಮನೆ (ಒಟ್ಟು ವಿಸ್ತೀರ್ಣ 12X12 ಅಡಿ) ಇರುವ ಮನೆಯಲ್ಲಿ ವಾಸಿಸುತ್ತಿದ್ದು ಅದರ ತಿಂಗಳ ಬಾಡಿಗೆಯೇ ಎರಡು ಸಾವಿರ ರೂಪಾಯಿ. ನೀರು, ಕರೆಂಟ್ ಎಂದು 500 ರೂಪಾಯಿ ಹೋಗುತ್ತದೆ. ರೇಷನ್ ಅಂಗಡಿಯಲ್ಲಿ ಸಿಗುವ ಅಕ್ಕಿ, ಗೋಧಿ, ರಾಗಿ, ಬೇಳೆ, ಸಕ್ಕರೆ ಮತ್ತು ಬಟ್ಟೆ ಸೋಪಿಗೆ ಒಂದು ಸಾವಿರಕ್ಕಿಂತಲೂ ಹೆಚ್ಚು ವೆಚ್ಚವಾಗುತ್ತದೆ. ಆದರೆ ಐವರು ಇರುವ ಕುಟುಂಬಕ್ಕೆ ರೇಷನ್ ಅಂಗಡಿಯಿಂದ ಸಿಗುವಷ್ಟು ದವಸ ಧಾನ್ಯ ಸಾಕಾಗುವುದಿಲ್ಲವಾದ್ದರಿಂದ ಅಂಗಡಿಯಲ್ಲಿ ಖರೀದಿಸಲು ಇನ್ನೊಂದು ಸಾವಿರ ಕೈ ಬಿಡುತ್ತದೆ. ಬರೀ ಅಷ್ಟಿದ್ದರೆ ಸಾಕೆ? ಹಾಲು, ತರಕಾರಿ ಇತ್ಯಾದಿಗಳಿಗೆ ಮಗಳ ಶಾಲೆ ಫೀಸು, ಸಮವಸ್ತ್ರ, ಪುಸ್ತಕ, ಶೂ, ಸಾಕ್ಸ್ ಇತ್ಯಾದಿಗಳಿಗೆ ಹಣ ಬೇಕೇಬೇಕು.

ಆಕೆಯ ಮಗ ಕೆಲಸಕ್ಕೆ ಸರಿಯಾದ ಸಮಯಕ್ಕೆ ಹೋಗಬೇಕೆಂದರೆ ಆತ ಸರಕಾರಿ ಬಸ್‌ಗಳನ್ನು ಅವಲಂಬಿಸುವಂತಿಲ್ಲ. ಆದುದರಿಂದ ಆತ ಸಾಲ ಮಾಡಿ ಒಂದು

ಮೋಟಾರ್ ಸೈಕಲ್ ಖರೀದಿಸಿದ್ದಾನೆ. ಈಗ ಅದರ ತಿಂಗಳ ಕಂತು ಕಟ್ಟಬೇಕಿದೆಯಲ್ಲದೆ ಮೋಟಾರ್ ಬೈಕನ್ನು ಓಡಿಸಲು ಅಗತ್ಯವಾದ ಪೆಟ್ರೋಲ್ ಬೆಲೆ ಲೀಟರ್‌ಗೆ 70 ರೂಪಾಯಿ ಆಗಿದೆ.

ಇನ್ನು ಹಬ್ಬ ಹರಿದಿನಗಳಲ್ಲಿ ಒಂದಿಷ್ಟು ಸಿಹಿ ಊಟ, ವರ್ಷಕ್ಕೆರಡು ಬಾರಿ ಮನೆಯವರಿಗೆಲ್ಲ ಹೊಸ ಬಟ್ಟೆ, ವರ್ಷಕ್ಕೊಮ್ಮೆ ತವರುಮನೆಗೆ ಭೇಟಿ, ಇಂತಹ ಮನುಷ್ಯ ಸಹಜ ಸಂಭ್ರಮಕ್ಕೆಂದು ಕಾಸು ವೆಚ್ಚವಾಗುತ್ತದೆ.

ಅತಿವೃಷ್ಟಿಯಿಂದ ತಮ್ಮದೆಲ್ಲವನ್ನು ಕಳೆದುಕೊಂಡು ಇವತ್ತಿಗೂ ನಿರ್ಗತಿಕರಾಗಿ ಶೆಡ್ಡುಗಳಲ್ಲಿ ವಾಸಿಸುತ್ತಿರುವ ನಮ್ಮ ಉತ್ತರ ಕರ್ನಾಟಕದ ಜನರ ಬದುಕಿಗೆ ಹೋಲಿಸಿದರೆ ನಮ್ಮ ಯಶೋಧ 'ನೆಮ್ಮದಿ'ಯಿಂದ ಜೀವಿಸುವಂತೆ ಕಾಣಿಸುತ್ತದೆ. ಯಾಕೆಂದರೆ ಯಶೋಧೆಯ ಮನೆಯಲ್ಲಿ ಟಿವಿ ಇದೆ, ಗ್ಯಾಸ್ ಸ್ಟವ್ ಇದೆ, ಹೊರಗಡೆ ಒಂದು ಮೋಟಾರ್ ಬೈಕ್ ನಿಂತಿದೆ...!

ಈ ಹೋಲಿಕೆ ಬಗ್ಗೆ ಒಂದೆರಡು ನಿಮಿಷ ಯೋಚಿಸಿದ ನಾನು ''ಕಷ್ಟ ಇದೆ, ಆದರೂ ತಿಂಗಳಲ್ಲಿ ಒಂದಿಷ್ಟಾದರೂ ಹಣವನ್ನು ಉಳಿತಾಯ ಮಾಡುತ್ತೀಯಾ? ಎಂದು ಕೇಳಿದೆ.

''ಹೇಗೆ ಉಳಿತಾಯ ಮಾಡೋದು ಅಕ್ಕಾ? ಎರಡು ವರ್ಷಗಳ ಹಿಂದೆ ನನಗೆ ಕಿಡ್ನಿ ಸಮಸ್ಯೆ ಆಗಿತ್ತು. ಆಗ ಆಪರೇಷನ್‌ಗೆ ಅಂತ ಒಂದು ಲಕ್ಷ ರೂಪಾಯಿ ಸಾಲ ಮಾಡಿದ್ದೆ. ಇವತ್ತಿಗೂ ಆ ಸಾಲದ ಮೇಲಿನ ಬಡ್ಡಿ ಕಟ್ಟುತ್ತಿದ್ದೇನೆ. ಅಸಲು ಹಾಗೆ ಉಳಿದಿದೆ'' ಎಂದ ಯಶೋಧ ವ್ಯಂಗ್ಯದ ನಗೆ ನಕ್ಕಳು...

ಬೆನ್ನು ಬಗ್ಗಿಸಿ, ಬೆವರು ಸುರಿಸಿ ದುಡಿಯುವ ಯಶೋಧೆಯ ಬದುಕೇ ಇಷ್ಟೊಂದು ಸಮಸ್ಯೆಗಳಿಂದ ಕೂಡಿರುವಾಗ ಆಕೆಗಿಂತ ಕೆಟ್ಟ ಪರಿಸ್ಥಿತಿಯಲ್ಲಿ ಬದುಕುತ್ತಿರುವ ನಮ್ಮ ದೇಶದ ಲಕ್ಷಾಂತರ ಬಡವರ ಬದುಕು ಇನ್ನೆಷ್ಟು ಕಷ್ಟಕಾರ್ಪಣ್ಯಗಳಿಂದ ಕೂಡಿರಬೇಕು ಯೋಚಿಸಿ.

ಪ್ರತಿ ದಿನ ನಮ್ಮ ಮನೆ, ಬಟ್ಟೆ, ಪಾತ್ರೆಗಳನ್ನು ಸ್ವಚ್ಛ ಮಾಡುವ ಯಶೋಧೆಯ ಅಗತ್ಯಗಳ ಬಗ್ಗೆ ನಾನು ವಿಚಾರಿಸಿದಂತೆ ಯೋಜನಾ ಆಯೋಗದ ಡೆಪ್ಯೂಟಿ ಚೇರ್ಮನ್ ಅಹ್ಲುವಾಲಿಯಾ ಕೂಡ ತಮ್ಮ ಮನೆ ಕೆಲಸದಾಕೆಯನ್ನೋ, ತಮ್ಮ ಐಷಾರಾಮಿ ಕಾರ್ ಅನ್ನು ಪ್ರತಿದಿನ ತೊಳೆಯುವ ವ್ಯಕ್ತಿಯನ್ನೋ ವಿಚಾರಿಸಿದರೆ ''ದಿನಕ್ಕೆ 20 ರೂಪಾಯಿ ಆದಾಯ ಪಡೆದವರು ಬಡತನ ರೇಖೆಗಿಂತ ಕೆಳಗೆ ಬರುವುದಿಲ್ಲ'' ಎಂಬಂತಹ ಕ್ರೂರ ನಿರ್ಧಾರಕ್ಕೆ ಬರುತ್ತಿರಲಿಲ್ಲ.

ಅದೆಲ್ಲ ಅವರಿಗೆ ಗೊತ್ತಿಲ್ಲ ಎಂದೇನಲ್ಲ. ಆದರೂ ಅಹ್ಲುವಾಲಿಯಾ, ಗೃಹ ಸಚಿವ ಪಿ.ಚಿದಂಬರಂ, ಪ್ರಧಾನಮಂತ್ರಿ ಮನಮೋಹನ್ ಸಿಂಗ್ ತರಹದ ಜಗದ್ವಿಖ್ಯಾತ ಆರ್ಥಿಕ ತಜ್ಞರು ಇಂತಹ ನೀಚ ನಿಲುವುಗಳನ್ನು ತೆಗೆದುಕೊಳ್ಳುವುದಕ್ಕೆ ಕಾರಣವಿದೆ.

***ಇಂತಹ 'ಕಳಂಕ' ಅವರೆಲ್ಲರಿಗೆ ಬೇಡವಾಗಿದೆ. ಬದಲಾಗಿ ದಿನಕ್ಕೆ ಕೇವಲ 20 ರೂಪಾಯಿ ಗಳಿಸುವವನು ಬಡವನಲ್ಲ ಎಂದು ಒಂದೆಡೆ ಘೋಷಿಸುತ್ತಾ ಇನ್ನೊಂದೆಡೆ ಅಂಬಾನಿ, ಮಿತ್ತಲ್, ಟಾಟಾರಂತಹ ಬಿಲಿಯಾಧಿಪತಿಗಳಿಗೆ ರಿಯಾಯಿತಿಗಳನ್ನು ಕೊಡುತ್ತಾ ಭಾರತ 'ಪ್ರಜ್ವಲಿಸುತ್ತಿದೆ' ಎಂಬ 'ಶೋ' ಕೊಡುವುದರಲ್ಲೇ ಅವರಿಗೆ 'ಖ್ಯಾತಿ' ಸಿಗುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಬಡವರು ಹೆಚ್ಚಿನ ಸಂಖ್ಯೆಯಲ್ಲಿ ಆದಷ್ಟು ಬೇಗ ಸಾವನ್ನಪ್ಪುತ್ತಾ ಅಂಬಾನಿ ತರಹದ ತಿಮಿಂಗಿಲಗಳು ಆದಷ್ಟು ಕೊಬ್ಬುತ್ತಾ ಹೋದರೆ ಸಿಂಗ್ ಮತ್ತವರ ಪಟಾಲಂ ಸಂತುಷ್ಟಗೊಳ್ಳುತ್ತದೆ...***

ಅದೇನೆಂದರೆ ಭಾರತದಲ್ಲಿ ಬಡವರ ಸಂಖ್ಯೆ ಹೆಚ್ಚಿದೆ ಎಂದು ಅವರು ಒಪ್ಪಿಕೊಂಡರೆ ಆ ಬಡವರಿಗೆಲ್ಲಾ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು ನೀಡಬೇಕಾಗುತ್ತದೆ. ಹಾಗೆ ನೀಡಿದರೆ ನಮ್ಮ ದೇಶದ 'ಅಭಿವೃದ್ಧಿ ದರ' ಕುಸಿಯುತ್ತದೆ!

ಇಂತಹ 'ಕಳಂಕ' ಅವರೆಲ್ಲರಿಗೆ ಬೇಡವಾಗಿದೆ. ಬದಲಾಗಿ ದಿನಕ್ಕೆ ಕೇವಲ 20 ರೂಪಾಯಿ ಗಳಿಸುವವನು ಬಡವನಲ್ಲ ಎಂದು ಒಂದೆಡೆ ಘೋಷಿಸುತ್ತಾ ಇನ್ನೊಂದೆಡೆ ಅಂಬಾನಿ, ಮಿತ್ತಲ್, ಟಾಟಾರಂತಹ ಬಿಲಿಯಾಧಿಪತಿಗಳಿಗೆ ರಿಯಾಯಿತಿಗಳನ್ನು ಕೊಡುತ್ತಾ ಭಾರತ 'ಪ್ರಜ್ವಲಿಸುತ್ತಿದೆ' ಎಂಬ 'ಶೋ' ಕೊಡುವುದರಲ್ಲೇ ಅವರಿಗೆ 'ಖ್ಯಾತಿ' ಸಿಗುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಬಡವರು ಹೆಚ್ಚಿನ ಸಂಖ್ಯೆಯಲ್ಲಿ ಆದಷ್ಟು ಬೇಗ ಸಾವನ್ನಪ್ಪುತ್ತಾ ಅಂಬಾನಿ ತರಹದ ತಿಮಿಂಗಿಲಗಳು ಆದಷ್ಟು ಕೊಬ್ಬುತ್ತಾ ಹೋದರೆ ಸಿಂಗ್ ಮತ್ತವರ ಪಟಾಲಂ ಸಂತುಷ್ಟಗೊಳ್ಳುತ್ತದೆ...

ಈಗ ಎಲ್ಲರಿಗೂ ಗೊತ್ತಿರುವಂತೆ ನಮ್ಮ ದೇಶದಲ್ಲಿ ಒಂದೆಡೆ ಲಕ್ಷಾಂತರ ಜನರು ಹಸಿವಿನಿಂದ ಬಳಲುತ್ತಿದ್ದರೆ ನಮ್ಮ ಸರಕಾರಿ ಗೋದಾಮುಗಳಲ್ಲಿರುವ ಸಾವಿರಾರು ಟನ್‌ಗಟ್ಟಲೆ ದವಸ ಧಾನ್ಯಗಳು ಹೆಗ್ಗಣಗಳ ಪಾಲಾಗುತ್ತಿವೆ. ಆದರೂ ಈ ದವಸ ಧಾನ್ಯಗಳನ್ನು ಬಡವರಿಗೆ ಅತಿ ಕಡಿಮೆ ದರದಲ್ಲಿ ಹಂಚಲು ಸರಕಾರ ಸಿದ್ಧವಿಲ್ಲ.

ಭಾರತದ ಬಡವರಿಗೆ ಸಲ್ಲಬೇಕಿರುವ ಧಾನ್ಯಗಳನ್ನು ತಿಂದು ಕೊಬ್ಬುತ್ತಿರುವ ಹೆಗ್ಗಣಗಳಿಗೂ ಸಿಂಗ್-ಚಿದಂಬರಂ-ಅಹ್ಲುವಾಲಿಯಾ ತರಹದ ಮತಿಗೇಡಿಗಳಿಗೂ ವ್ಯತ್ಯಾಸ ಇದೆಯಾ.....?

# ಮಾನಸಿಕ ಆರೋಗ್ಯ ಮತ್ತು ಸಾಮರ್ಥ್ಯ ಹೆಚ್ಚಿಸಲು 12 ಸೂತ್ರಗಳು

ಡಾ.ಸಿ.ಆರ್.ಚಂದ್ರಶೇಖರ್
ನಿಮ್ಹಾನ್ಸ್, ಬೆಂಗಳೂರು

***MENTAL HEALTH (ಮಾನಸಿಕ ಆರೋಗ್ಯ) ಎಂಬ ಇಂಗ್ಲೀಷ್ ಪದಗಳ ಪ್ರತಿ ಪದದ ಆದಿ ಅಕ್ಷರವನ್ನು ಲೇಖಕರು ಇಂಗ್ಲೀಷಿನಲ್ಲಿ ಅಕ್ಷರಕ್ಕೆ ಸರಿಯಾಗಿ ಹೊಂದಿಸಿ ಮಾನಸಿಕ ಆರೋಗ್ಯ ಪಡೆಯುವ ಬಗೆಯನ್ನು ವಿವರಿಸಿ, ಅದನ್ನು ಕನ್ನಡೀಕರಿಸಿದ್ದಾರೆ.***



**1**.M = ಹಣಕಾಸಿನ ನಿರ್ವಹಣೆ, ವಿವೇಚನೆಯಿಂದ ಸಂಪಾದಿಸಿ, ಖರ್ಚು ಮಾಡಿ. ಆದಾಯಕ್ಕಿಂತ ಖರ್ಚು ಹೆಚ್ಚುವುದು ಬೇಡ. ನಿಮ್ಮ ಅಗತ್ಯಗಳನ್ನು ನಿರೀಕ್ಷೆಗಳನ್ನು ತಗ್ಗಿಸಿ. ಸರಳ-ತೃಪ್ತ ಜೀವನ ಮಾಡಿ. ಭೋಗ ಜೀವನ ದುಖಕ್ಕೆ ದಾರಿ. ಆಹಾರ ವಸತಿ, ಪ್ರೀತಿ, ಮಾನ್ಯತೆಗಳು ಎಷ್ಟು ಸಿಗುತ್ತವೋ, ಅಷ್ಟೇ ಸಾಕು ಎನ್ನಿ.

**2**.E = ಸಣ್ಣ ಪುಟ್ಟ ಸಂಗತಿಗಳಿಗೆ- ಅನುಕೂಲತೆಗಳಿಗೆ ಸಂತೋಷಪಡಿ. ನೀವು ಮಾಡುವ ಕೆಲಸ-ಚಟುವಟಿಕೆಗಳಿಂದ ಖುಷಿ ಪಡಿ.

**3**.N= ನಕರಾತ್ಮಕ ಆಲೋಚನೆಗಳನ್ನು ಹಾಗೂ ಅನುಭವಗಳನ್ನು ಬದಲಿಸಿ. ಸಕಾರಾತ್ಮಕವಾಗಿ, ಆಶಾವಾದಿಯಾಗಿ ಯೋಚಿಸಿ ಮತ್ತು ಕಾರ್ಯಪ್ರವೃತ್ತರಾಗಿ.

**4**.T = ತಾಳ್ಮೆ ಇರಲಿ. ಯಾವುದೇ ವ್ಯಕ್ತಿ, ಘಟನೆಯನ್ನು ಭಾವೋದ್ವೇಗದಿಂದ ನೋಡದೆ, ವಸ್ತುನಿಷ್ಠವಾಗಿ ಹಾಗೂ ವಿವೇಚನೆಯಿಂದ ನೋಡಿ, ಪ್ರತಿಕ್ರಿಯಿಸಿ.

**5**.A = ವಾಸ್ತವಿಕತೆಯನ್ನು, ಸತ್ಯವನ್ನು ಒಪ್ಪಿಕೊಳ್ಳಿ ಮತ್ತು ಅದಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸಿ. ಕುಟುಂಬ, ಸಮಾಜ, ಉದ್ಯೋಗ, ಪರಿಸರ ಮತ್ತು ಸಂಪನ್ಮೂಲಗಳನ್ನು ಅವು ಇರುವಂತೆಯೇ ಸ್ವೀಕರಿಸಿ.

**6**. L = ಎಲ್ಲರಿಗೆ ಪ್ರೀತಿ-ವಾತ್ಸಲ್ಯ-ಸ್ನೇಹವನ್ನು ಕೊಡಿ. ಟೀಕೆ, ತಿರಸ್ಕಾರ, ದ್ವೇಷ ಬೇಡ.

**7**.H = ಆರೋಗ್ಯಕರ ಹವ್ಯಾಸಗಳು, ನಿತ್ಯ ಕೆಲಸಗಳಲ್ಲಿ ಕ್ರಮಬದ್ಧತೆ ಇರಲಿ. ಸಂಗೀತ, ಕಲೆ, ಓದು, ಯೋಗ, ಧ್ಯಾನ, ಕ್ರೀಡೆ, ಪ್ರವಾಸದಿಂದ ವಿರಮಿಸಿ.

**8**.E = ನಿಮ್ಮ ಭಾವನೆಗಳನ್ನು ಅದುಮಿಡಬೇಡಿ. ಅವುಗಳನ್ನು ಆತ್ಮೀಯರೊಂದಿಗೆ ಹಂಚಿಕೊಳ್ಳಿ. ಪ್ರೀತಿ, ಸಂತೋಷ-ದಯೆಯಂತಹ ಸಕರಾತ್ಮಕ ಭಾವನೆಗಳನ್ನು ಹೆಚ್ಚಿಸಿಕೊಳ್ಳಿ.

**9**.A = ಸದಾ ಚಟುವಟಿಕೆಯಿಂದಿರಿ. ಯಾವುದಾದರೂ ಉದ್ದೇಶ-ಗುರಿಗಾಗಿ ಕೆಲಸ ಮಾಡಿ.

**10**. L = ಇತರರ ಅನಿಸಿಕೆ ಅಭಿಪ್ರಾಯಗಳನ್ನು ಕೇಳಿಸಿಕೊಳ್ಳಿ. ಹೊಸ ಜ್ಞಾನ ಮತ್ತು ಕೌಶಲಗಳನ್ನು ಕಲಿಯಿರಿ. ಸಾವು, ಅಗಲಿಕೆ, ಕಷ್ಟ, ನಷ್ಟ, ಸೋಲು ಇತ್ಯಾದಿ ಜೀವನದ ಘಟನೆಗಳನ್ನು ಎದುರಿಸಲು ಸಿದ್ಧರಾಗಿರಿ.

**11**. T = ಮುಟ್ಟಬಹುದಾದಂತಹ ಗುರಿಗಳಿಗಿರಲಿ. ಅದನ್ನು ಸಾಧಿಸಲು ಪ್ರಯತ್ನ ಮಾಡಿ. ಗುರಿ ಸಾಧನೆಯಿಂದ ಆತ್ಮವಿಶ್ವಾಸ ಹೆಚ್ಚುತ್ತದೆ. ಜೀವನಕ್ಕೊಂದು ಅರ್ಥ ಬರುತ್ತದೆ.

**12**. H = ಆರೋಗ್ಯಕರ ಜೀವನಶೈಲಿ.

i) ಆಹಾರ:ಹೆಚ್ಚು ತಿನ್ನಿ- ಹಣ್ಣುಗಳು, ತರಕಾರಿ, ಬೇಳೇಕಾಳು

ii) ಕಡಿಮೆ ತಿನ್ನಿ- ಕರಿದ, ಎಣ್ಣೆ ಜಿಡ್ಡಿನ ತಿಂಡಿಗಳು, ಮಾಂಸ

iii) ನಿದ್ರೆ-6ರಿಂದ 8 ಗಂಟೆಗಳ ನಿದ್ರೆ ಮಾಡಿ.

iv) ವ್ಯಾಯಾಮ:ನಡಿಗೆ, ಈಜು, ಸೈಕಲ್, ತುಳಿಯುವುದು, ಆಟ

v) ನಿಧಾನ ಗತಿಯ ಜೀವನ

vi) ಆಧ್ಯಾತ್ಮಿಕತೆ

## ನರಿ ಮತ್ತು ಮೊಲ

ಒಂದು ಕಾಡಿನಲ್ಲಿ ನರಿಯೊಂದು ವಾಸವಾಗಿತ್ತು. ಅದು ತುಂಬಾ ಚಾಣಾಕ್ಷವಾಗಿತ್ತು. ಒಮ್ಮೆ ಆ ನರಿಗೆ ಮೀನು ತಿನ್ನುವ ಆಸೆಯಾಯಿತು. ಆದರೆ ಅದಕ್ಕೆ ನೀರಿಗೆ ಇಳಿಯುವುದು ಮಾತ್ರ ಇಷ್ಟವಿರಲಿಲ್ಲ.

ಆ ನರಿಯು ಕಾಡಿನಲ್ಲಿರುವ ಇತರ ಪ್ರಾಣಿಗಳೊಂದಿಗೆ ತನಗೆ ಮೀನು ತಂದುಕೊಡುವಂತೆ ಬಿನ್ನವಿಸಿಕೊಂಡಿತು. ಆದರೆ ಯಾವುದೇ ಪ್ರಾಣಿಗಳು ನರಿಗೆ ಮೀನು ತಂದು ಕೊಡಲು ಒಪ್ಪಲಿಲ್ಲ. ಕೊನೆಗೆ ಆ ನರಿ ಒಂದು ಮೊಲದ ಹತ್ತಿರ ಹೋಗಿ ''ನಾನು ತುಂಬಾ ದಿವಸಗಳಿಂದ ಹಸಿದುಕೊಂಡಿದ್ದೇನೆ. ನನಗೆ ತಿನ್ನಲು ಮೀನು ಬೇಕು'' ಎಂದು ಹೇಳಿತು. ಅದಕ್ಕೆ ಮೊಲವು 'ನಾನು ಮೀನನ್ನು ಎಲ್ಲಿಂದ ತಂದು ಕೊಡಲಿ' ಎಂದು ಕೇಳಿತು. ಆ ನರಿಯು 'ಕಾಡಿನ ಹಿಂದುಗಡೆ ಒಂದು ಕೆರೆ ಇದೆ. ನಾವಿಬ್ಬರೂ ಅಲ್ಲಿಗೆ ಹೋಗಿ ಮೀನನ್ನು ಹಿಡಿಯುವ' ಎಂದು ಹೇಳಿತು. ಮೊಲವು ನರಿಯ ಮಾತನ್ನು ಒಪ್ಪಿಕೊಂಡಿತು. ಬಳಿಕ ನರಿ ಮತ್ತು ಮೊಲವು ಕೆರೆಯತ್ತ ಹೆಜ್ಜೆ ಹಾಕಿದವು.

ಕೆರೆಯ ಬಳಿ ತಲುಪಿದ ಬಳಿಕ ಮೊಲವು 'ನಾವು ಮೀನನ್ನು ಹೇಗೆ ಹಿಡಿಯುವುದು' ಎಂದು ಕೇಳಿತು. 'ಮೀನುಗಳು ಮಿನುಗುವ ವಸ್ತುಗಳನ್ನು ಕಂಡು ಹತ್ತಿರಕ್ಕೆ ಬರುತ್ತವೆ. ನಿನ್ನ ಬಾಲವನ್ನು ನೀರಿಗೆ ಇಳಿಸು. ನಿನ್ನ ಬಾಲವನ್ನು ಮೀನು ಹಿಡಿದ ಬಳಿಕ ನೀನು ಬಾಲವನ್ನು ಮೇಲಕ್ಕೆ ಎಳೆ. ಮೀನು ಮೇಲೆ ಬಂದಾಕ್ಷಣ ನಾನು ಅದನ್ನು ತಿನ್ನುತ್ತೇನೆ' ಎಂದು ನರಿ ಉಪಾಯ ಹೇಳಿತು. ಮೊಲ ಇದಕ್ಕೆ ಒಪ್ಪಿಕೊಂಡಿತು.

ಮೊಲವು ತನ್ನ ಬಾಲವನ್ನು ನೀರಿಗೆ ಇಳಿಸಿ ಕುಳಿತುಕೊಂಡಿತು. ಸ್ವಲ್ಪ ಸಮಯದ ಬಳಿಕ ಏಡಿಯೊಂದು ಮೊಲದ ಬಾಲವನ್ನು ಕಚ್ಚಿ ಹಿಡಿದುಕೊಂಡಿತು. ಇದರಿಂದಾಗಿ ಮೊಲಕ್ಕೆ ತುಂಬಾ ನೋವಾಯಿತು. ನೋವಿನಿಂದ ಅದು ಚೀರಾಡಿತು. ಯಾವುದೋ ದೊಡ್ಡ ಮೀನು ಬಂದಿರಬಹುದು ಎಂದು ನರಿ ಅಂದುಕೊಂಡಿತು. ನರಿಯು ಮೊಲದ ಕಿವಿಗಳನ್ನು ಹಿಡಿದು ಎಳೆಯಿತು.

ನೀರಿನೊಳಗೆ ಏಡಿಯು ಮೊಲದ ಬಾಲವನ್ನು ಹಿಡಿದು ತನ್ನತ್ತ ಎಳೆಯುತ್ತಿದ್ದರೆ, ನೀರಿನ ಹೊರಗೆ ನರಿಯು ಅದರ ಕಿವಿಗಳನ್ನು ಹಿಡಿದು ತನ್ನತ್ತ ಎಳೆಯುತ್ತಿತ್ತು. ಮೊದಲೇ ಮೊಲದ ಕಿವಿಗಳ ಉದ್ದವಾಗಿದ್ದವು. ನರಿಯು ಎಳೆದುದರಿಂದ ಅದು ಇನ್ನಷ್ಟು ಉದ್ದವಾದವು. ನರಿಯು ಮೊಲವನ್ನು ಜೋರಾಗಿ ಎಳೆಯುತ್ತಿದ್ದುದ ರಿಂದ ಮೊಲದ ಬಾಲ ತುಂಡಾಗಿ ಅದು ನೀರಿನಿಂದ ಮೇಲಕ್ಕೆ ಬಂತು. ಇಷ್ಟರಲ್ಲಿ ಮೊಲದ ಕಿವಿಗಳು ತುಂಬಾ ಉದ್ದವಾಗಿದ್ದವು.

ಅಷ್ಟರಲ್ಲಿ ನರಿ 'ನೀನು ಕೆಲಸಕ್ಕೆ ಬಾರದವ' ಎಂದು ಮೊಲವನ್ನು ಹೀಯಾಳಿಸಿ ಅಲ್ಲಿಂದ ಹೊರಟು ಹೋಯಿತು. 'ನರಿಯು ಎಷ್ಟೊಂದು ಕೆಟ್ಟದ್ದು. ಅದಕ್ಕಾಗಿ ತಾನು ಮೀನು ಹಿಡಿಯಲು ತುಂಬಾ ಕಷ್ಟಪಟ್ಟೆದೆ. ಮಾತ್ರವಲ್ಲ ಇದರಿಂದಾಗಿ ತನ್ನ ಬಾಲವೂ ತುಂಡಾಗಿ ಜೊತೆಗೆ ಕಿವಿಯೂ ಇನ್ನೂ ಉದ್ದವಾಗಿದೆ ಎಂದು ಮನದಲ್ಲೇ ಯೋಚಿಸತೊಡಗಿತು. ಇದೇ ಕಾರಣಕ್ಕಾಗಿ ನರಿಯನ್ನು ಚಾಣಾಕ್ಷ ಎಂದು ಕರೆಯಲಾಗುತ್ತದೆ. ಅದು ಪ್ರಾಣಿಗಳಿಗೆ ಹಿಂಸೆಯೂ ನೀಡುತ್ತದೆ ಮತ್ತು ಇತರ ಪ್ರಾಣಿಗಳಿಂದ ಸಹಾಯ ಪಡೆದೂ ಕೃತಘ್ನನಾಗಿರುತ್ತದೆ.

## ಕ್ವಿಝ್ ಟೈಮ್-9: ಇತಿಹಾಸ, ಸಾಹಿತ್ಯ, ಕಲೆ, ವಿಜ್ಞಾನ, ಕ್ರೀಡಾಲೋಕ

1. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ವರ್ಷ ಯಾವುದು?
2. ಟಿಪ್ಪು ಸುಲ್ತಾನ್ ಆಳಿದ ನಗರ ಯಾವುದು?
3. ಹ್ಯೂ ಲಾಫ್ಟಿಂಗ್ ಯಾವ ಬಗೆಯ ಸಾಹಿತ್ಯಕ್ಕೆ ಹೆಸರಾದವನು?
4. 'ಆಟೋಬಯಾಗ್ರಫಿ ಆಫ್ ಆ್ಯನ್ ಅನ್‌ನೋನ್ ಇಂಡಿಯನ್' ಬರೆದ ಲೇಖಕ ಯಾರು?
5. ಅಂತಾರಾಷ್ಟ್ರೀಯ ಬೊಂಬೆಗಳ ಮ್ಯೂಸಿಯಂ ದೆಹಲಿಯಲ್ಲಿ ಎಲ್ಲಿದೆ?
6. ದೆಹಲಿಯ ಜಂತರ್‌ಮಂತರ್‌ನ್ನು ಯಾರು ನಿರ್ಮಿಸಿದರು?
7. ವಿದ್ಯುದ್ದೀಪದಲ್ಲಿ ಬಳಸುವ ಅನಿಲ ಯಾವುದು?
8. ಜೇಮ್ಸ್ ವಾಟ್ ಉಗಿ ಎಂಜಿನ್‌ನ್ನು ಯಾವ ವರ್ಷದಲ್ಲಿ ಕಂಡು ಹಿಡಿದನು?
9. ಭಾರತದ ಅತ್ಯಂತ ಹಳೆಯ ಈಜು ಕ್ಲಬ್ ಯಾವುದು?
10. 1991ರಲ್ಲಿ ಯು.ಎಸ್.ಓಪನ್‌ನ ಪ್ರಥಮ ಕಿರಿಯ ಟೈಟಲ್ ಗೆದ್ದ ಭಾರತೀಯ ಯಾರು?

ಉತ್ತರಗಳು: ಪುಟ ಸಂಖ್ಯೆ- 53ರಲ್ಲಿ

### ಕಿಟ್ಟುವಿನ ವ್ರತ

ಕಿಟ್ಟು ಶೋಕಿಗಾಗಿ ವ್ರತ ಹಿಡಿದಿದ್ದ.
ಕಿಟ್ಟು: ನೋಡು ಸೂರ್ಯ ಅಸ್ತಮಿಸಿದ.
ಪತ್ನಿ: ಇಲ್ಲಾ ರೀ.
ಕಿಟ್ಟು: ಈಗ ನೋಡು.
ಪತ್ನಿ: ಇಲ್ಲಾ ರೀ.
ಕಿಟ್ಟು: ಈ ಸೂರ್ಯ ಆತನೊಂದಿಗೆ ನನ್ನನ್ನು ಮುಳುಗಿಸುತ್ತಾನೆ ಅನಿಸುತ್ತಿದೆ.

## ಹಾಲು ಮಾರುವವಳು



ಒಂದೂರಿನಲ್ಲಿ ಒಬ್ಬಳು ಹಾಲು ಮಾರುವ ಹುಡುಗಿ ಇದ್ದಳು. ಆಕೆ ಹಾಲಿನ ಪಾತ್ರೆಯನ್ನು ತನ್ನ ತಲೆಯ ಮೇಲಿಟ್ಟುಕೊಂಡು ರಸ್ತೆಯಲ್ಲಿ ನಡೆಯುತ್ತಿದ್ದಳು. ಹೀಗೆ ನಡೆಯುತ್ತಾ ಸಾಗುತ್ತಿದ್ದಂತೆ ಆಕೆಯ ಮನದೊಳಗೆ ಅನೇಕ ವಿಚಾರಗಳು ತೇಲಿ ಬಂದವು.

ಈ ಹಾಲನ್ನು ಮಾರಿ ತಾನು ಎರಡು ಕೋಳಿಗಳನ್ನು ಖರೀದಿಸುತ್ತೇನೆ. ಆ ಎರಡು ಕೋಳಿಗಳು ಮೊಟ್ಟೆ ಇಟ್ಟರೆ ಅನೇಕ ಕೋಳಿ ಮರಿಗಳಾಗುತ್ತವೆ. ಆ ಕೋಳಿ ಮರಿಗಳು ದೊಡ್ಡದಾದ ಮೇಲೆ ಅವುಗಳನ್ನು ಮಾರಿ ಸುಂದರವಾದ ರೇಷ್ಮೆ ಸೀರೆಯನ್ನು ಖರೀದಿಸುತ್ತೇನೆ. ಆ ರೇಷ್ಮೆ ಸೀರೆ ಉಟ್ಟ ಬಳಿಕ ತಾನು ಅತೀ ಸುಂದರವಾಗಿ ಕಾಣುತ್ತೇನೆ.

ಹೀಗೆ ಅನೇಕ ಜನರನ್ನು ತಾನು ಆಕರ್ಷಿಸಿಕೊಳ್ಳಬಹುದು. ಒಂದು ವೇಳೆ ಅವರು ತನ್ನನ್ನು ಮದುವೆಯಾಗಲು ಇಚ್ಛಿಸಿದರೆ ತಾನು 'ಇಲ್ಲ' ಎಂಬ ಉತ್ತರ ನೀಡುತ್ತೇನೆ. ಆಕೆ ಕನಸಿನ ಲೋಕದಲ್ಲಿ ವಿಹರಿಸುತ್ತಿದ್ದಂತೆ ಗೋಡೆಯೊಂದಕ್ಕೆ ಢಿಕ್ಕಿಯಾದಳು. ಇದರಿಂದಾಗಿ ಆಕೆಯ ತಲೆಯ ಮೇಲಿದ್ದ ಹಾಲಿನ ಪಾತ್ರೆ ಕೆಳಗೆ ಬಿತ್ತು. ಹಾಲೆಲ್ಲಾ ರಸ್ತೆಗೆ ಚೆಲ್ಲಿ ನಷ್ಟವಾಯಿತು. ಈ ಮೂಲಕ ಕೋಳಿ, ಕೋಳಿ ಮೊಟ್ಟೆ, ರೇಷ್ಮೇ ಸೀರೆಯಂತಹ ಆ ಹುಡುಗಿಯ ಕನಸಿನ ಗೋಪುರ ಕ್ಷಣ ಮಾತ್ರದಲ್ಲಿ ಒಡೆದು ಹೋಯಿತು.

ಗಾಳಿಯಲ್ಲಿ ಗೋಪುರ ಕಟ್ಟುವುದು ಒಳ್ಳೆಯದಲ್ಲ.

## ಸಾಬೂನು ಕೊಳೆಯನ್ನು ಹೇಗೆ ತೆಗೆಯುತ್ತದೆ?

ಕೊಳೆಯಾದ ಬಟ್ಟೆಯನ್ನು ನೀರಿನಲ್ಲಿ ಅದ್ದಿದಾಗ ಅದು ಕೊಳೆಯನ್ನು ಪೂರ್ತಿಯಾಗಿ ತೆಗೆಯದು. ನೀರಿನ ಮೇಲ್ಮೈ ಎಳೆತವು ಈ ಕೆಲಸ ಮಾಡುವಲ್ಲಿ ವಿಫಲಗೊಳಿಸುವುದು.

ನೀರಿನ ಪಾತಳಿಯ ಮೇಲಿರುವ ಅಣಗಳು ಬಟ್ಟೆ ಮತ್ತು ಕೊಳೆಯ ಮಧ್ಯಕ್ಕೆ ಸೇರಲು ಅಸಮರ್ಥವಾಗುವುದು. ನೀರಿನಲ್ಲಿ ಸಾಬೂನು ಹಾಕುವುದರಿಂದ ನೀರಿನ ಮೇಲ್ಮೈ ಎಳೆತ ಕಡಿಮೆಯಾಗಿ ನೀರಿನ ಅಣುಗಳು ಒಂದನ್ನೊಂದು ಆಕರ್ಷಿಸುತ್ತವೆ. ಇದರಿಂದಾಗಿ ನೀರಿನ ಅಣುಗಳು ಕೊಳೆ ಮತ್ತು ಬಟ್ಟೆಯ ತಂತುಗಳ ನಡುವೆ ಹೆಚ್ಚು ವಿಸ್ತರಿಸಲು ಸಾಧ್ಯ. ಸಾಬೂನಿನ ತೆಳ್ಳನೆಯ ಸ್ತರವು ಬಟ್ಟೆಯ ಹಾಗೂ ನೀರಿನ ಮಧ್ಯೆ ಇರುತ್ತದೆ.

ಬಟ್ಟೆಯನ್ನು ಕೈಯಿಂದ, ಕೋಲಿನಿಂದ ಕುಟ್ಟಿದಾಗ ಅದು ಕೊಳೆಯನ್ನು ಬಟ್ಟೆಯಿಂದ ಬೇರ್ಪಡಿಸುವುದಲ್ಲದೆ, ಹೀಗೆ ಬಿಡುಗಡೆಯಾದ ಕೊಳೆಯು ನೀರಿನಲ್ಲಿ ತೇಲುವುದು. ನೀರಿನಲ್ಲಿರುವ ಬುರುಗು ಕೊಳೆ ಬಟ್ಟೆಗೆ ಮತ್ತೆ ಅಂಟಿಕೊಳ್ಳದಂತೆ ನಿಬಂಧಿಸುವುದು. ಎಣ್ಣೆ ಹಾಗೂ ಜಿಡ್ಡಿನ ಪದಾರ್ಥಗಳೊಂದಿಗೆ ರಾಸಾಯನಿಕ ಕ್ರಿಯೆ ನಡೆದು ಸಹ ಕೊಳಕು ಪದಾರ್ಥಗಳು ಹೊರದಬ್ಬಲ್ಪಡುತ್ತವೆ.



**(ಸಂಗ್ರಹ) ಹುದಾ ಫಾತಿಮಾ ಎಚ್.**

# ಜಗತ್ತಿನಲ್ಲಿ ಹಂಚಿದಷ್ಟು ಹೆಚ್ಚಾಗುವ ಏಕೈಕ ವಸ್ತು ಜ್ಞಾನವಾಗಿದೆ.
# ಆ ನಿಮ್ಮ ಜ್ಞಾನವನ್ನು ಹಂಚಬೇಕೇ?

## ಹಾಗಾದರೆ ತೆರೆಯಿರಿ ಮರಳಿ ಬಾ ಶಾಲೆಯನ್ನು
## ಗಳಿಸುವಿರಿ ಅದ್ಭುತ ಫಲಿತಾಂಶವನ್ನು

2010-11 ನೇ ಸಾಲಿನ ಮರಳಿ ಬಾ ಶಾಲೆಯ ಸಾಧನೆಯ ಪಕ್ಷಿನೋಟ

ಒಟ್ಟು ಸಂಸ್ಥೆಗಳು: 41
ಒಟ್ಟು ಕೇಂದ್ರಗಳು: 64
ಶಿಕ್ಷಕರ ಸಂಖ್ಯೆ: 128

ಒಟ್ಟು ವಿದ್ಯಾರ್ಥಿಗಳು: ಪಿ.ಯು.ಸಿ-145, ಎಸ್.ಎಸ್.ಎಲ್.ಸಿ- 645
ಒಟ್ಟು ಫಲಿತಾಂಶ: ಪಿ.ಯು.ಸಿ-73.23%, ಎಸ್.ಎಸ್.ಎಲ್.ಸಿ-33.72%
ಪಿ.ಯು.ಸಿ ಗರಿಷ್ಠ ಅಂಕ: 445 ಶಂಶಾದ್ ಬಾನು, ದೀನೀ ಫ್ರೆಂಡ್ಸ್ ಕಣ್ಣೂರು
ಎಸ್.ಎಸ್.ಎಲ್.ಸಿ ಗರಿಷ್ಠ ಅಂಕ: 494 ತಂಝೀನ ಎನ್.ಕೆ, ಗ್ಲಿಟ್ಟರ್ಸ್ ಕೋಚಿಂಗ್ ಸೆಂಟರ್ ಮೈಸೂರು

ಮರಳಿ ಬಾ ಶಾಲೆಯನ್ನು ತೆರೆದ ಸಂಸ್ಥೆಗಳಿಗೆ, ಸಂಘಟಕರಿಗೆ, ಶಿಕ್ಷಕರಿಗೆ , ದಾನಿಗಳಿಗೆ, ವಿದ್ಯಾರ್ಥಿಗಳಿಗೆ ಹಾಗೂ ಸಹಕರಿಸಿದ ಸರ್ವರಿಗೆ ಹೃದಯಾಂತರಾಳದ ಅಭಿನಂದನೆಗಳು

ನಾನಾ ಕಾರಣಗಳಿಂದ ಅರ್ಧದಲ್ಲೇ ಶಾಲೆ ಬಿಟ್ಟು ಗುಜುರಿ ಹೆಕ್ಕುವ, ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುವ ನಮ್ಮ ಸಹೋದರರಿಗೆ ಹಾಗೂ ಮನೆಯಲ್ಲಿ ಬೀಡಿ ಕಟ್ಟುತ್ತಿರುವ ಅಥವಾ ಸುಮ್ಮನೆ ಟಿ.ವಿ ನೋಡಿಕೊಂಡು ಕಾಲಹರಣ ಮಾಡುವ ನಮ್ಮ ಸಹೋದರಿಯರಿಗೆ ನೇರ ಎಸ್.ಎಸ್.ಎಲ್.ಸಿ/ಪಿ.ಯು.ಸಿ ಪರೀಕ್ಷೆಗೆ ಹಾಜರಾಗುವ ಯೋಜನೆಯೇ ಮರಳಿ ಬಾ ಶಾಲಾ ಕಾರ್ಯಕ್ರಮ. ಈಗಾಗಲೇ ಈ ಯೋಜನೆಯಡಿಯಲ್ಲಿ ಸಾವಿರಾರು ಮಂದಿ ತಮ್ಮ ಪ್ರತಿಭೆಯನ್ನು ನಿರೂಪಿಸಿದ್ದಾರೆ. ಹಲವರು ಉನ್ನತ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ಅಷ್ಟು ಮಾತ್ರವಲ್ಲದೆ ಸಾಮಾಜಿಕವಾಗಿ, ಮಾನಸಿಕವಾಗಿ, ಬೌದ್ಧಿಕವಾಗಿ, ಭಾವನಾತ್ಮಕವಾಗಿ ಬೆಳೆದಿದ್ದಾರೆ. ಇವರಲ್ಲಾದ ಬದಲಾವಣೆ ನಿಜಕ್ಕೂ ಅಚ್ಚರಿ ಮೂಡಿಸುತ್ತಿದೆ. ಆದುದರಿಂದ ನಿಮ್ಮೂರಲ್ಲಿ ಮರಳಿ ಬಾ ಶಾಲೆಯನ್ನು ತೆರೆಯಿರಿ. ನಿಮಗೆ ಬೇಕಾದ ಮಾಹಿತಿ ಮಾರ್ಗದರ್ಶನ ನಾವು ನೀಡುವೆವು.

ಹೆಚ್ಚಿನ ಮಾಹಿತಿ ಮತ್ತು ಮಾರ್ಗದರ್ಶನಕ್ಕಾಗಿ ಸಂಪರ್ಕಿಸಿರಿ

## ಟ್ಯಾಲೆಂಟ್ ರಿಸರ್ಚ್ & ಫೌಂಡೇಶನ್ (ರಿ) ಮಂಗಳೂರು
ವಿಶ್ವಾಸ್ ಕ್ರೌನ್, ಮಿಸ್ಸ ಆಸ್ಪತ್ರೆ ಎದುರು, ಕಂಕನಾಡಿ ಫೋನ್-0824-4267883, 9972283365, 9845554868

**ಕಾಗೆ ಎಷ್ಟೋ ಕಷ್ಟಪಟ್ಟು ಹುಡುಕಾಡಿ ತನಗೆ ಸಿಕ್ಕಿದ ರೊಟ್ಟಿ ಚೂರೊಂದನ್ನು ತಾನೊಂದೇ ತಿನ್ನದೆ ಎಲ್ಲಾ ಕಾಗೆಗಳನ್ನು ಕರೆದು ಹಂಚಿ ತಿನ್ನುತ್ತದೆ. ಮಾನವರಾದ ನಾವು ಯಾಕೆ ನಮ್ಮ ಜ್ಞಾನವನ್ನು ಹಂಚಬಾರದು? ನಾವು ಕಾಗೆಗಿಂತ ಕೀಳಾ? ಚಿಂತಿಸಿ ಸಹೋದರರೇ ಚಿಂತಿಸಿ!**

# ರಮಝಾನ್ ಸಿದ್ಧತೆ

ಫಾತಿಮಾ ನಸ್ರೀನ್
fathimanas09@gmail.com

ರಮಝಾನ್ ತಿಂಗಳು ಸನ್ನಿಹಿತವಾಗಿದೆ. ರಜಬ್-ಶಅಬಾನ್ ತಿಂಗಳ ಪ್ರತ್ಯೇಕ ಪ್ರಾರ್ಥನೆ ಮಾಡಬೇಕಾಗಿರುವ ಸಮಯವಿದು. ಅಂದರೆ ರಮಝಾನ್ ತಿಂಗಳಿಗೆ 2 ತಿಂಗಳು ಮುನ್ನವೇ ಪೂರ್ವಸಿದ್ಧತೆಗಳು ಆರಂಭಗೊಳ್ಳುತ್ತದೆ. ರಮಝಾನ್ ತಿಂಗಳು ಎಂದರೆ ಮುಸ್ಲಿಮ್ ಸಮುದಾಯಕ್ಕೆ ಅತಿಹೆಚ್ಚು ಮಹತ್ವವುಳ್ಳ, ಪವಿತ್ರವೆನಿಸಿರುವ ಅತ್ಯಮೂಲ್ಯ ತಿಂಗಳು. ಈ ತಿಂಗಳಲ್ಲಿ ನಾವು ವಿಶೇಷ ಕರ್ಮಗಳನ್ನು ಮಾಡಬೇಕಾಗಿದೆ. ಪುರುಷರಿಗೆ ಮತ್ತು ಸ್ತ್ರೀಯರಿಗೆ ಇಬ್ಬರಿಗೂ ರಮಝಾನ್ ತಿಂಗಳು ಒಂದೇ ಆಗಿರುತ್ತದೆ. ರಮಝಾನ್ ಎಂಬುದು ಕೇವಲ ಪುರುಷರಿಗೆ ಮಾತ್ರ ವಿಶೇಷ ತಿಂಗಳಲ್ಲ. ಇಡೀ ಮುಸ್ಲಿಮ್ ಸಮುದಾಯಕ್ಕೆ ರಮಝಾನ್ ವಿಶೇಷ ತಿಂಗಳಾಗಿರುತ್ತದೆ. ಆದ್ದರಿಂದ ಈ ವಿಶೇಷ ತಿಂಗಳಿಗೆ ಸಮುದಾಯದ ಅರ್ಧಾಂಗಿಣಿ ಎನಿಸಿರುವ ಮಹಿಳೆಯರು ಕೂಡ ವಿಶೇಷ ಸಿದ್ಧತೆ ಮಾಡಿಕೊಳ್ಳಬೇಕಾಗಿದೆ.



ಸಾಮಾನ್ಯವಾಗಿ ರಮಝಾನ್ ತಿಂಗಳಲ್ಲಿ ಮಹಿಳೆಯರಿಗೆ ವಿಶೇಷ ಜವಾಬ್ಧಾರಿ ಇರುತ್ತದೆ. ಅದು ಅಡುಗೆ ಮನೆಯ ಜವಾಬ್ಧಾರಿ ಎಂದು ಎಲ್ಲರೂ ಅಂದುಕೊಂಡಿದ್ದಾರೆ. ಸ್ಪೆಷಲ್ ತಿಂಡಿತಿನಿಸು, ಬಗೆಬಗೆಯ ಹಲವು ಬಗೆಯ ಅಡುಗೆ ಉಪಚಾರ ಮಾಡುವುದು ಸಾಮಾನ್ಯವಾಗಿ ವಾಡಿಕೆಯಾಗಿಬಿಟ್ಟಿದೆ. ಅಡುಗೆ ಮಾಡಿ ಸುಸ್ತಾದ ಮಹಿಳೆಗೆ 'ಒಮ್ಮೆ ರಮಝಾನ್ ತಿಂಗಳು ಮುಗಿದರೆ ಸಾಕಿತ್ತು' ಎಂದು ಅನಿಸಿದರೆ ಅದರ ಪಾಪ ಖಂಡಿತವಾಗಿ

ಮನೆಯ ಯಜಮಾನನಿಗೆ ತಟ್ಟುತ್ತದೆ. ರಮಝಾನ್‌ನ ಉಪವಾಸ ಇರುವುದು ಹಸಿವಿನಿಂದಿರುವ ಹೊಟ್ಟೆಯನ್ನು ಮುಸ್ಸಂಜೆಯ ನಂತರ ಬೇಕಾಬಿಟ್ಟಿ ತುಂಬಿಸಿಕೊಳ್ಳುವುದಕ್ಕಲ್ಲ. ಪಂಥಕ್ಕಿಳಿದವನಂತೆ ತಿನ್ನುವುದು ನೈಜ ವ್ರತಧಾರಿಯ ಲಕ್ಷಣವಲ್ಲ. ಆದ್ದರಿಂದ ಈ ಬಾರಿಯ ರಮಝಾನ್ ತಿಂಗಳನ್ನು ನೈಜ ಉಪವಾಸಿಗನಾಗಿ ಆಚರಿಸಲು ಈಗಿಂದಲೇ ಯೋಜನೆ ಹಾಕಿಕೊಳ್ಳಬೇಕು ಮತ್ತು ಮಾನಸಿಕವಾಗಿ ಸಿದ್ಧಗೊಳ್ಳಬೇಕು.

ಮುಖ್ಯವಾಗಿ ರಮಝಾನ್‌ನಲ್ಲಿ ಬಳಲಿ ಬೆಂಡಾಗುವುದು ಮಹಿಳೆ. ಈ ವಿಚಾರದಲ್ಲಿ ಸಂಶಯವೇ ಇಲ್ಲ. ಬೆಳಗ್ಗಿನಿಂದ ರಾತ್ರಿ ಮಲಗುವವರೆಗೂ ಮನೆತುಂಬಾ ಕೆಲಸ ಇರುತ್ತದೆ. ಇತರ ದಿನಗಳಲ್ಲಿ ಇರುವಂತೆ ಮನೆ ಕೆಲಸ ಹೇಗೂ ಇದ್ದೇ ಇರುತ್ತದೆ. ರಮಝಾನ್ ತಿಂಗಳಲ್ಲಿ ಹೆಚ್ಚುವರಿಯಾಗಿ ವಿಶೇಷ ಅಡುಗೆ ಕೆಲಸ ಇರುತ್ತದೆ. ಈಗೀಗ ಇದೊಂದು ರಮಝಾನ್‌ನ ಸಂಪ್ರದಾಯವಾದಂತಾಗಿಬಿಟ್ಟಿದೆ. ಮಹಿಳೆಯರೂ ಅಷ್ಟೇ ಇದು ನಾವು ಪಾಲಿಸಲೇಬೇಕಾದ ಜವಾಬ್ದಾರಿ ಎಂದುಕೊಂಡು ಅಡುಗೆ ಮನೆಯಲ್ಲೇ ಹೆಚ್ಚು ಹೊತ್ತು ಕಳೆಯುತ್ತಾರೆ. ಈ ರೀತಿ ಮನೆಯವರಿಗೆ ಬಗೆ ಬಗೆಯ ಹಲವು ವಿಧದ ತಿಂಡಿ ತಿನಿಸುಗಳನ್ನು ತಯಾರಿಸಿ ಕೊಡುವುದು ಕೂಡ ಪುಣ್ಯಕರವಾದ ಕೆಲಸ ಮತ್ತು ಈ ಕೆಲಸವು ಆರಾಧನೆಗೆ ಸಮಾನ ಎಂದುಕೊಂಡವರೂ ಇದ್ದಾರೆ. ಅದೇನೇ ಇರಲಿ, ಮಹಿಳೆಯರು ಪವಿತ್ರ ರಮಝಾನ್ ತಿಂಗಳಲ್ಲಿ ಸಾಕಷ್ಟು ಆರಾಧನಾ ಕರ್ಮಗಳಲ್ಲಿ ನಿರತರಾಗುವಂತೆ ಮಾಡಬೇಕಾದದ್ದು ಪುರುಷರ ಹೊಣೆಗಾರಿಕೆಯಾಗಿದೆ. ಮಹಿಳೆಯರು ಕೂಡ ಈ ಕುರಿತು ಮನೆಯಲ್ಲಿ ಜಾಗೃತಿ ಮೂಡಿಸಬೇಕು.

***ಮಹಿಳೆಯರಿಗೆ ದೀನೀ ವಿಚಾರಗಳು ರಮಝಾನ್‌ಗೆ ಮುಂಚೆಯೇ ಸಿಗುವಂತಾಗಬೇಕು. ಅದಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಿಡಿ, ಆಡಿಯೋ ಕ್ಯಾಸೆಟ್‌ಗಳು, ಪುಸ್ತಕಗಳು ಮಾರುಕಟ್ಟೆಯಲ್ಲಿ ಲಭ್ಯ ಇವೆ. ದುರದೃಷ್ಟವಶಾತ್, ನಮ್ಮ ತಯಾರಿ ಇರುವುದು ಮಗ್ರಿಬ್ ನಮಾಝ್‌ನ ಆದಾನ್ ಟೈಮಿಂಗ್ಸ್‌ನ ಕಾರ್ಡ್ ಸಂಗ್ರಹಿಸುವುದು, ಅಲಾರಮ್ ಖರೀದಿಸುವುದು, ಹೊಸ ಟೋಪಿ ಅಥವಾ ಟವೆಲ್ ಖರೀದಿಸುವುದರಲ್ಲಿ. ಇಷ್ಟಕ್ಕೇ ನಮ್ಮ ತಯಾರಿ ಸೀಮಿತಗೊಳ್ಳಬಾರದು. ರಮಝಾನ್ ತಿಂಗಳಿಗಿಂತ ಮುಂಚೆ ಮತ್ತು ರಮಝಾನ್ ತಿಂಗಳಲ್ಲಿ ದೀನೀ ವಿಚಾರಗಳನ್ನು ಕಲಿಯಲು ಪೂರಕವಾಗ ಪುಸ್ತಕಗಳನ್ನು ಖರೀದಿಸುವುದು, ಕುರ್‌ಆನ್ ಅಧ್ಯಯನ ನಡೆಸುವುದು ಇತ್ಯಾದಿ ಸಿದ್ಧತೆಗಳನ್ನು ಮಾಡಿಟ್ಟುಕೊಳ್ಳಬೇಕಾಗಿದೆ.***

ರಮಝಾನ್ ತಿಂಗಳ ಆಗಮನದ ಸೂಚನೆ ಈಗಾಗಲೇ ಎಲ್ಲ ಮನೆಗಳಿಗೆ ದೊರೆತಿದೆ. ಎಲ್ಲರ ಮನೆಯಲ್ಲೂ ಇನ್ನು ರಮಝಾನ್ 60 ದಿನಗಳಷ್ಟೇ ಬಾಕಿ ಇರುವುದು ಎಂದು ಮಾತನಾಡಿಕೊಂಡಿರಬಹುದು ಎಂದುಕೊಳ್ಳುತ್ತೇನೆ. ಕಳೆದ ವರ್ಷ ನಮ್ಮೊಂದಿಗಿದ್ದವರ ನೆನಪು ಈಗ ಮರುಕಳಿಸುತ್ತಿರಬಹುದು. ರಮಝಾನ್ ತಿಂಗಳಲ್ಲಿ ಪ್ರಮುಖವಾಗಿ ಇಂತಹ ನೆನಪುಗಳು ಕಾಡುವುದು ಸಹಜ. ಅದು ರಮಝಾನ್‌ನ ಝಕಾತ್‌ಗೆಂದು ಮನೆಗೆ ಬರುತ್ತಿದ್ದವರಾಗಿರಬಹುದು, ನಮ್ಮ ನೆರೆಹೊರೆಯವರು ಆಗಿರಬಹುದು ಅಥವಾ ಸಂಬಂಧಿಕರೇ ಆಗಿರಬಹುದು. ಒಂದಲ್ಲ ಒಂದು ಕಾರಣಕ್ಕಾಗಿ ನಮ್ಮಿಂದ ಅಗಲಿ ಹೋದವರು ರಮಝಾನ್ ತಿಂಗಳು ಹತ್ತಿರವಾಗುತ್ತಿದ್ದಂತೆಯೇ ನೆನಪಿಗೆ ಬರುತ್ತಾರೆ. ನೆನಪಾದಾಗಲೆಲ್ಲ ಅವರ ಮಗ್ಫಿರತ್‌ಗಾಗಿ ಪ್ರಾರ್ಥಿಸೋಣ...

ಇನ್ನು ಮಹಿಳೆಯರು ರಮಝಾನ್ ತಯಾರಿ ಮಾಡಿಕೊಳ್ಳಬೇಕಾದದ್ದು ಹೇಗೆ ಎಂಬುದರ ಬಗ್ಗೆ ಅರಿವು ಇರಬೇಕು. ರಮಝಾನ್‌ಗೆ ಕೆಲವು ದಿನಗಳ ಮುಂಚೆ ಮತ್ತು ರಮಝಾನ್ ತಿಂಗಳಿಡೀ ಧಾರ್ಮಿಕ ಪ್ರವಚನ, ಧಾರ್ಮಿಕ ವಿಚಾರಗಳ ಅರಿವು ದೊರೆಯುವುದು ಬಹುತೇಕ ಪುರುಷರಿಗೆ ಮಾತ್ರ. ಮಹಿಳೆಯರು ಇವೆಲ್ಲವುಗಳಿಂದ ವಂಚಿತರಾಗುತ್ತಾರೆ. ಇನ್ನು ಧಾರ್ಮಿಕ ಪ್ರವಚನ ಕೇಳಿದ ಹೆಚ್ಚಿನ ಪುರುಷರು ಯಾರೂ ಮನೆಯಲ್ಲಿರುವ ಮಹಿಳೆಯರಿಗೆ ತಿಳಿಸುವುದೇ ಇಲ್ಲ. ಧಾರ್ಮಿಕ ವಿದ್ವಾಂಸರ ಬೋಧನೆಯ ಕುರಿತು ಮನೆಯಲ್ಲಿ ಚರ್ಚಿಸುವುದೂ ಇಲ್ಲ. ಇನ್ನು ಕೆಲವು ಮನೆಗಳಲ್ಲಿ ಮಹಿಳೆಯರು ವಿಚಾರಿಸಿದರೆ ಮಾತ್ರ ಚರ್ಚೆಯಾಗುತ್ತದೆ.

ಮಹಿಳೆಯರಿಗೆ ದೀನೀ ವಿಚಾರಗಳು ರಮಝಾನ್‌ಗೆ ಮುಂಚೆಯೇ ಸಿಗುವಂತಾಗಬೇಕು. ಅದಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಿಡಿ, ಆಡಿಯೋ ಕ್ಯಾಸೆಟ್‌ಗಳು, ಪುಸ್ತಕಗಳು ಮಾರುಕಟ್ಟೆಯಲ್ಲಿ ಲಭ್ಯ ಇವೆ. ದುರದೃಷ್ಟವಶಾತ್, ನಮ್ಮ ತಯಾರಿ ಇರುವುದು ಮಗ್ರಿಬ್ ನಮಾಝ್‌ನ ಆದಾನ್

**ಈ ಬಾರಿಯ ರಮಝಾನ್ ಸ್ವಾಗತಿಸುವುದಕ್ಕಿಂತ ಮುಂಚೆ ಕಳೆದ ರಮಝಾನ್‌ನಲ್ಲಿ ನಾವೆಷ್ಟು ಆರಾಧನೆಯಲ್ಲಿ ನಮ್ಮನ್ನು ತೊಡಗಿಸಿಕೊಂಡಿದ್ದೇವೆ? ಎಷ್ಟು ಕುರ್‌ಆನ್ ಪಾರಾಯಣ ಮಾಡಿದ್ದೇವೆ? ಎಷ್ಟು ಬಗೆಯ ನಮಾಝ್‌ನ್ನು ನಿರ್ವಹಿಸಿದ್ದೇವೆ? ಎಷ್ಟು ಸಮಾಜಸೇವಾ ಚಟುವಟಿಕೆ ಮಾಡಿದ್ದೇವೆ? ಎಂಬಿತ್ಯಾದಿಯಾಗಿ ಅವಲೋಕನ ನಡೆಸೋಣ.**

ಟೈಮಿಂಗ್ಸ್‌ನ ಕಾರ್ಡ್ ಸಂಗ್ರಹಿಸುವುದು, ಅಲಾರಮ್ ಖರೀದಿಸುವುದು, ಹೊಸ ಟೋಪಿ ಅಥವಾ ಟವೆಲ್ ಖರೀದಿಸುವುದರಲ್ಲಿ. ಇಷ್ಟಕ್ಕೇ ನಮ್ಮ ತಯಾರಿ ಸೀಮಿತಗೊಳ್ಳಬಾರದು. ರಮಝಾನ್ ತಿಂಗಳಿಗಿಂತ ಮುಂಚೆ ಮತ್ತು ರಮಝಾನ್ ತಿಂಗಳಲ್ಲಿ ದೀನೀ ವಿಚಾರಗಳನ್ನು ಕಲಿಯಲು ಪೂರಕವಾಗ ಪುಸ್ತಕಗಳನ್ನು ಖರೀದಿಸುವುದು, ಕುರ್‌ಆನ್ ಅಧ್ಯಯನ ನಡೆಸುವುದು ಇತ್ಯಾದಿ ಸಿದ್ಧತೆಗಳನ್ನು ಮಾಡಿಟ್ಟುಕೊಳ್ಳಬೇಕಾಗಿದೆ.



ವಿಚಿತ್ರವೆಂದರೆ ರಮಝಾನ್ ತಿಂಗಳ ಟೈಮ್‌ಪಾಸ್‌ಗಾಗಿ ಕೇರಮ್‌ಬೋರ್ಡ್, ಲೂಡಾ ಬೋರ್ಡ್ ಖರೀದಿಸಿಟ್ಟುಕೊಳ್ಳುವವರೂ ಇದ್ದಾರೆ. ಅಂಗಡಿ ಬಾಗಿಲುಗಳಲ್ಲಿ ನಿಂತು ಹರಟೆ ಹೊಡೆಯುವುದನ್ನು ಧರ್ಮವು ಕಟುವಾಗಿ ವಿರೋಧಿಸಿದ್ದರೂ ಯುವಕರು ಹೆಚ್ಚಾಗಿ ಅಂಗಡಿ ಮುಂಗಟ್ಟುಗಳ ಮುಂದೆ ಜಮಾವಣೆಗೊಂಡು ಅಲ್ಲೇ ಕೇರಮ್ ಬೋರ್ಡ್ ಆಟವಾಡಿ, ಮಗ್ರಿಬ್ ವೇಳೆಗೆ ಇಫ್ತಾರ್‌ಗೆಂದು ಮಸೀದಿಗೆ ತೆರಳುತ್ತಾರೆ. ಮನೆಯಿಂದ ಬೆಳಗ್ಗೆ ಹೊರಟರೆ ಮತ್ತೆ ಮನೆ ಸೇರುವುದು ಮಗ್ರಿಬ್ ವೇಳೆಗೆ. ಮನೆಯಲ್ಲಿದ್ದರೆ ಟೈಮ್ ಪಾಸ್ ಆಗುವುದಿಲ್ಲ. ಟಿವಿ ನೋಡುವ ಅವಕಾಶ ಇರುವುದಿಲ್ಲ. ಈ ಕಾರಣಕ್ಕಾಗಿ ಟೈಮ್‌ಪಾಸ್‌ಗೆಂದು ಮೊದಲೇ ತಯಾರಿ ಮಾಡಿಟ್ಟುಕೊಂಡಿರುತ್ತಾರೆ. ಇವೆಲ್ಲದರ ಕುರಿತು ತಮ್ಮ ಮಕ್ಕಳಿಗೆ ಹೆತ್ತವರು, ಅದರಲ್ಲೂ ಮಹಿಳೆಯರು ಎಚ್ಚರಿಕೆ ಮೂಡಿಸಬೇಕು. ಯುವಪೀಳಿಗೆ ಅನಿಸ್ಲಾಮಿಕವಾಗಿ ಹೆಜ್ಜೆ ಹಾಕುವುದನ್ನು ತಡೆಯಬೇಕು.

ಇನ್ನು ಮನೆಯಲ್ಲೇ ಉಳಿದುಕೊಳ್ಳುವ ಮಹಿಳೆಯರು ತಮ್ಮ ಅಡುಗೆ ಕೆಲಸಗಳನ್ನು ಸಾಧ್ಯವಾದಷ್ಟು ಚುರುಕುಗೊಳಿಸಬೇಕು ಮತ್ತು ಚುಟುಕುಗೊಳಿಸಬೇಕು. ಎಷ್ಟು ಬೇಕೋ ಅಷ್ಟು ಮಾತ್ರ ಅಡುಗೆ ಮಾಡಿದರೆ ಸಾಲದೇ? ಇದರಿಂದ ರಮಝಾನ್ ವ್ರತಕ್ಕೆ ಏನಾದರೂ ಭಂಗ ಉಂಟಾಗುವುದೇ? ರಮಝಾನ್ ವ್ರತದ ಆಚರಣೆಯು ನಾವು ಮನೆಯಲ್ಲಿ ಮಾಡುವ ಅಡುಗೆ ಬಗೆಯನ್ನು ಅವಲಂಬಿಸಿ ಇರುವುದಿಲ್ಲ. ಆರೋಗ್ಯಕರ ಹಣ್ಣು ಹಂಪಲು ತಿನ್ನುವುದು ಸಹಜ. ಆದರೆ ಈಗ ಹಣ್ಣುಹಂಪಲುಗಳಿಗಿಂತ ಹೆಚ್ಚಾಗಿ ಎಣ್ಣೆಯಲ್ಲಿ ಕರಿದ ತಿಂಡಿ ತಿನಿಸುಗಳೇ ಪ್ರತಿ ಮನೆಗಳಲ್ಲೂ ತಯಾರಿಸಲ್ಪಡುತ್ತಿವೆ. ಪಕ್ಕದ ಮನೆಯಲ್ಲಿ ಹಾಗೆ ಮಾಡುತ್ತಾರೆ ಎಂದು ಆರಂಭವಾದ ತಿಂಡಿ ತಿನಿಸಿನ ಫ್ಯಾಶನ್ ಇಂದು ಎಲ್ಲರ ಮನೆಯಲ್ಲೂ ಸಾಮಾನ್ಯವಾಗಿಬಿಟ್ಟಿದೆ. ಕೇವಲ ಸಮೋಸ ಮಾತ್ರವಲ್ಲ, ಕಟ್ಲೆಟ್, ಬೋಂಡ, ಅಂಬಡೆ, ಚಿಕನ್‌ರೋಲ್... ಹೀಗೆ ನಾನಾ ರೀತಿಯ ತಿಂಡಿಗಳು ಸಂಜೆಯ ವೇಳೆಗೆ ಘಮಘಮಿಸುತ್ತಿರುತ್ತವೆ. ಇದನ್ನೇ ಚುಟುಕುಗೊಳಿಸಿ ಪವಿತ್ರ ರಮಝಾನ್‌ನ ಅಮೂಲ್ಯ ಸಮಯವನ್ನು ಆರಾಧನೆಗಳಿಗೆ ತೊಡಗಿಸಿದರೆ ಒಳ್ಳೆಯದಲ್ಲವೇ?

ಈ ಬಾರಿಯ ರಮಝಾನ್ ಸ್ವಾಗತಿಸುವುದಕ್ಕಿಂತ ಮುಂಚೆ ಕಳೆದ ರಮಝಾನ್‌ನಲ್ಲಿ ನಾವೆಷ್ಟು ಆರಾಧನೆಯಲ್ಲಿ ನಮ್ಮನ್ನು ತೊಡಗಿಸಿಕೊಂಡಿದ್ದೇವೆ? ಎಷ್ಟು ಕುರ್‌ಆನ್ ಪಾರಾಯಣ ಮಾಡಿದ್ದೇವೆ? ಎಷ್ಟು ಬಗೆಯ ನಮಾಝ್‌ನ್ನು ನಿರ್ವಹಿಸಿದ್ದೇವೆ? ಎಷ್ಟು ಸಮಾಜಸೇವಾ ಚಟುವಟಿಕೆ ಮಾಡಿದ್ದೇವೆ? ಎಂಬಿತ್ಯಾದಿಯಾಗಿ ಅವಲೋಕನ ನಡೆಸೋಣ. ಅದರ ಜೊತೆಗೆ ಕಳೆದ ಬಾರಿ ಎಷ್ಟು ಸಮಯವನ್ನು ಅಡುಗೆ ಮನೆಯಲ್ಲಿ ಕಳೆದಿದ್ದೇವೆ? ಎಷ್ಟು ಬಗೆಯ ತಿಂಡಿ ತಿನಿಸುಗಳನ್ನು, ಪಾನೀಯಗಳನ್ನು ತಯಾರಿಸಿದ್ದೇವೆ ಎಂಬುದರ ಕುರಿತಾಗಿಯೂ ಅವಲೋಕನ ನಡೆಸಬೇಕು. ಅವುಗಳ ಪೈಕಿ ನಮ್ಮ ಶಾಶ್ವತ ವಿಜಯಕ್ಕೆ ನೆರವಾಗುವ ಕರ್ಮ ಯಾವುದು ಎಂಬುದನ್ನೂ ಅರಿಯಬೇಕು. ಈ ರೀತಿ ಈ ಬಾರಿಯ ರಮಝಾನ್ ತಿಂಗಳ ಸ್ವಾಗತಕ್ಕೆ ಮಾನಸಿಕವಾಗಿ ನಾವು ಸಿದ್ಧಗೊಳ್ಳಬೇಕಾಗಿದೆ. ಅಲ್ಲಾಹನು ಅದಕ್ಕೆ ಅನುಗ್ರಹಿಸಲಿ. ಆಮೀನ್...

# ದೇವದಾಸಿ ಪದ್ಧತಿ ಇನ್ನೂ ಜೀವಂತ!

● ಚಿತ್ರ- ವರದಿ: ನವಾಝ್ ಅಹ್ಮದ್ ಬಂಟ್ವಾಳ



ದೇವದಾಸಿ ಪದ್ಧತಿಯನ್ನು ಪ್ರತಿಬಿಂಬಿಸುತ್ತಿರುವ ಚಿತ್ರಗಳು.

ದೇವದಾಸಿ ಪದ್ಧತಿ ಎಂದಾಕ್ಷಣ ನಾವು ಅಂದುಕೊಳ್ಳುವುದು ಅದು ಇತಿಹಾಸದ ಯಾವುದೋ ಒಂದು ಕಾಲಘಟ್ಟದಲ್ಲಿ ಚಾಲ್ತಿಯಲ್ಲಿದ್ದ ಒಂದು ಅನಿಷ್ಠ ಪದ್ಧತಿ ಎಂದು. ಮೂಢನಂಬಿಕೆ ಮತ್ತು ಧರ್ಮದ ಸೋಗಿನಲ್ಲಿ ಮಹಿಳೆಯರನ್ನು ಅನಾದಿ ಕಾಲದಿಂದಲೂ ಶೋಷಣೆಗೊಳಪಡಿಸುತ್ತಿದ್ದುದನ್ನು ನಾವು ಇತಿಹಾಸದ ಪುಟಗಳಲ್ಲಿ ಕಂಡಿದ್ದೇವೆ. ಸತಿಸಹಗಮನ ಪದ್ಧತಿ, ದೇವದಾಸಿ ಪದ್ಧತಿ ಅವುಗಳಲ್ಲಿ ಪ್ರಮುಖವಾದದ್ದು. ಇತ್ತೀಚಿನ ದಿನಗಳಲ್ಲಿ ಉತ್ತರಭಾರತದಲ್ಲಿ ಕೇಳಿಬರುತ್ತಿರುವ 'ಮರ್ಯಾದಾ ಹತ್ಯೆ' ಕೂಡ ಹೈಟೆಕ್ ಅನಿಷ್ಠ ಪದ್ಧತಿ ಎನ್ನಬಹುದೇನೋ.

ಅದೇನೇ ಇರಲಿ, ಯಾವತ್ತೋ ಒಂದು ಕಾಲದಲ್ಲಿ ಹುಟ್ಟಿಕೊಂಡ ದೇವದಾಸಿ ಎಂಬ ಅನಿಷ್ಠ ಪದ್ಧತಿಯು ಈಗಲೂ ಕರ್ನಾಟಕ ರಾಜ್ಯದಲ್ಲಿ ಚಾಲ್ತಿಯಲ್ಲಿದೆ ಎಂದರೆ ಅದನ್ನು ನಂಬದೆ ನಿರ್ವಾಹವಿಲ್ಲ. ಪ್ರಮುಖವಾಗಿ ರಾಜ್ಯದ 10 ಜಿಲ್ಲೆಗಳಲ್ಲಿ ದೇವದಾಸಿ ಪದ್ಧತಿಯು ಹೆಚ್ಚಾಗಿ ಚಾಲ್ತಿಯಲ್ಲಿದೆ. ದೇವದಾಸಿ ಪದ್ಧತಿ ಇರುವ ಟಾಪ್-10 ಜಿಲ್ಲೆಗಳಲ್ಲಿ ಕೊಪ್ಪಳ ಜಿಲ್ಲೆಯೂ ಒಂದು. ಈ ಜಿಲ್ಲೆಯಲ್ಲಿ ಸುಮಾರು 4880 ಮಂದಿ ದೇವದಾಸಿಯರಿದ್ದಾರೆ! ಇಲ್ಲಿ 146ರಷ್ಟು ಹಳ್ಳಿಗಳಿದ್ದು ಅವುಗಳ ಪೈಕಿ 130 ಹಳ್ಳಿಗಳಲ್ಲಿ ದೇವದಾಸಿ ಪದ್ಧತಿ ಮಾಮೂಲಾಗಿದೆ. ಹಿರೇಸಿಂದೋಗಿ, ಕವಲೂರು, ಹಲವಂಡಿ, ಬೆಟಗೇರಿ, ಕಾತರಕಿ, ಹುಲಿಗಿ, ಬಿಸರಹಳ್ಳಿ ಮಂತಾದ ಹಳ್ಳಿಗಳಲ್ಲಿ ದೇವದಾಸಿ ಮಹಿಳೆಯರನ್ನು ಹೆಚ್ಚಾಗಿ ಕಾಣಬಹುದು.

ಧಾರ್ಮಿಕ ಆಚರಣೆ ಹಾಗೂ ಮೂಢನಂಬಿಕೆಗಳ ಕಪಿಮುಷ್ಠಿಗೆ ಸಿಲುಕಿರುವ ಮಹಿಳೆಯರು, ತಾವು ಬದುಕುತ್ತಿರುವ ಸಮಾಜ ಹಾಗೂ ಕುಟುಂಬದಿಂದ ದೂರವುಳಿದು ನರಕಸದೃಶ ಅವಮಾನಕರ ಜೀವನ ಸಾಗಿಸುತ್ತಿದ್ದಾರೆ. ಒಂದು ಕಾಲದಲ್ಲಿ ತಾವು ಬದುಕುತ್ತಿದ್ದ ಸಮಾಜ ಮತ್ತು ಕುಟುಂಬದವರ ಗೊಡ್ಡು ಸಂಪ್ರದಾಯ ಮತ್ತು ಹರಕೆಗೆ ಬಲಿಯಾಗಿ ಇದೀಗ ದೇವದಾಸಿಯರಾಗಿರುವ ಮಹಿಳೆಯರ ಬಾಳು ಬೀದಿಪಾಲು.

***■ ದೇವದಾಸಿ ಮಹಿಳೆಯರ ಮಕ್ಕಳು ಸಮಾಜದಿಂದ ಸಾಕಷ್ಟು ಅವಮಾನ, ನಿಂದನೆಗಳನ್ನು ಎದುರಿಸಬೇಕಾಗುತ್ತದೆ. ಶಾಲೆಗೆ ದಾಖಲಾಗುವ ಸಂದರ್ಭದಲ್ಲಿ ತಂದೆಯ ಹೆಸರು ಗೊತ್ತಿಲ್ಲದೆ ಪೇಚಿಗೊಳಗಾಗುವ ಈ ಮಕ್ಕಳು, ಅವಮಾನ ತಾಳಲಾರದೆ ಅರ್ಧದಲ್ಲೇ ಶಾಲೆ ತೊರೆದು ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ.***

***ದೇವದಾಸಿ ಮಹಿಳೆಯರು ಸದ್ಯ ನಡೆಸುತ್ತಿರುವ ಉದ್ಯೋಗವೇನು ಗೊತ್ತೇ? ಕಂಪೆನಿಗಳು ನೀಡುವ ತ್ಯಾಜ್ಯ ಕೂದಲುಗಳನ್ನು ಸ್ವಚ್ಛಗೊಳಿಸಿ (ತೀರ್ಥ ಕ್ಷೇತ್ರಗಳಿಂದ, ಸೆಲೂನ್‌ಗಳಿಂದ) ಅದನ್ನು ಕೃತಕ ಕೂದಲು ತಯಾರಿಸುವ ಕಾರ್ಖಾನೆಗಳಿಗೆ ನೀಡುತ್ತಾರೆ. ಈ ರೀತಿಯಾಗಿ ಕೂದಲು ಸ್ವಚ್ಛಗೊಳಿಸುವ ದೇವದಾಸಿಯರು ಅದಕ್ಕಾಗಿ ಪಡೆಯುವುದು ಚಿಕ್ಕಾಸಿನ ಸಂಬಳವನ್ನು. ಮಾತ್ರವಲ್ಲದೆ, ಕೂದಲು ಶುಚಿಗೊಳಿಸುವ ಈ ಕಾಯಕವು ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ. ■***

---

ಅಂದು ದೇವದಾಸಿಯರಾಗಿ ಕುಟುಂಬ ಜೀವನದಿಂದ ಹೊರಬಿದ್ದ ಹೆಣ್ಣುಮಕ್ಕಳು ಇಂದು ದೊಡ್ಡವರಾಗಿ ಮಕ್ಕಳನ್ನು ಹೆತ್ತಿದ್ದರೂ ಆ ಮಕ್ಕಳಿಗೆ ತಂದೆಯ ಸಂಬಂಧ ಇಲ್ಲ. ದೇವದಾಸಿ ಪದ್ಧತಿಗೆ ಒಳಗಾದ ಮಹಿಳೆಯರು ಇಂದು ತಮ್ಮ ಮಕ್ಕಳನ್ನು ಕೂಡ ದೇವದಾಸಿಯರನ್ನಾಗಿ ಮಾಡುತ್ತಿರುವುದು ವಿಪರ್ಯಾಸ. ಆದರೆ ಕೆಲವು ಮಹಿಳೆಯರು ತಮ್ಮ ಈ ಪಾಡಿಗೆ ಕಾರಣವಾಗಿರುವ ಅನಿಷ್ಠ ಸಂಪ್ರದಾಯದ ವಿರುದ್ಧ ಆಕ್ರೋಶಗೊಂಡಿದ್ದಾರೆ. ಆದರೆ ಇಂತಹ ಪ್ರಜ್ಞೆ ಮೂಡಿರುವುದು ಕೇವಲ ಬೆರಳೆಣಿಕೆಯ ಮಹಿಳೆಯರಲ್ಲಿ ಮಾತ್ರ !

ದುರಂತದ ಸಂಗತಿಯೇನೆಂದರೆ, ಅಂದು ಹರಕೆ ಹೊತ್ತು ತಮ್ಮ ಹೆಣ್ಣುಮಕ್ಕಳನ್ನು ದೇವಾಲಯದ ಎಲ್ಲ ಕೆಲಸ ಕಾರ್ಯಗಳಿಗೆ ಸಮರ್ಪಿಸುವ ಒಂದು ಆಚರಣೆಯಾಗಿತ್ತು ದೇವದಾಸಿ ಪದ್ಧತಿ. ಹೆಣ್ಣುಮಕ್ಕಳು ಲೈಂಗಿಕವಾಗಿ ಮತ್ತು ಮಾನಸಿಕವಾಗಿ ಶೋಷಣೆಗೊಳಗಾಗುತ್ತಿದ್ದರು. ಇಂದು ದೇವದಾಸಿ ಪದ್ಧತಿ ಎಂಬುದು ವೇಶ್ಯಾವಾಟಿಕೆ ಎಂಬರ್ಥದಲ್ಲಿ ಮಾತ್ರ ಚಾಲ್ತಿಯಲ್ಲಿದೆ. ಹೆಚ್ಚಿನ ಮಹಿಳೆಯರು ದೇವದಾಸಿ ಪದ್ಧತಿ ಹೆಸರಿನಲ್ಲಿ ಅನೈತಿಕ ದಂಧೆಯಲ್ಲಿ ತೊಡಗಿದ್ದಾರೆ.

ದೇವದಾಸಿ ಮಹಿಳೆಯರ ಮಕ್ಕಳು ಸಮಾಜದಿಂದ ಸಾಕಷ್ಟು ಅವಮಾನ, ನಿಂದನೆಗಳನ್ನು ಎದುರಿಸಬೇಕಾಗುತ್ತದೆ. ಶಾಲೆಗೆ ದಾಖಲಾಗುವ ಸಂದರ್ಭದಲ್ಲಿ ತಂದೆಯ ಹೆಸರು ಗೊತ್ತಿಲ್ಲದೆ ಪೇಚಿಗೊಳಗಾಗುವ ಈ ಮಕ್ಕಳು, ಅವಮಾನ ತಾಳಲಾರದೆ ಅರ್ಧದಲ್ಲೇ ಶಾಲೆ ತೊರೆದು ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

ದೇವದಾಸಿ ಮಹಿಳೆಯರು ಸದ್ಯ ನಡೆಸುತ್ತಿರುವ ಉದ್ಯೋಗವೇನು ಗೊತ್ತೇ? ಕಂಪೆನಿಗಳು ನೀಡುವ ತ್ಯಾಜ್ಯ ಕೂದಲುಗಳನ್ನು ಸ್ವಚ್ಛಗೊಳಿಸಿ (ತೀರ್ಥ ಕ್ಷೇತ್ರಗಳಿಂದ, ಸೆಲೂನ್‌ಗಳಿಂದ) ಅದನ್ನು ಕೃತಕ ಕೂದಲು ತಯಾರಿಸುವ ಕಾರ್ಖಾನೆಗಳಿಗೆ ನೀಡುತ್ತಾರೆ. ಈ ರೀತಿಯಾಗಿ ಕೂದಲು ಸ್ವಚ್ಛಗೊಳಿಸುವ ದೇವದಾಸಿಯರು ಅದಕ್ಕಾಗಿ ಪಡೆಯುವುದು ಚಿಕ್ಕಾಸಿನ ಸಂಬಳವನ್ನು. ಮಾತ್ರವಲ್ಲದೆ, ಕೂದಲು ಶುಚಿಗೊಳಿಸುವ ಈ ಕಾಯಕವು ಆರೋಗ್ಯದ ಮೇಲೂ ಕೆಟ್ಟ ಪರಿಣಾಮ ಬೀರುತ್ತಿದೆ.

ದೇವದಾಸಿ ಪದ್ಧತಿಯನ್ನು ಸರಕಾರವು ಅನಿಷ್ಠವೆಂದು ಘೋಷಿಸಿದೆ. ಮಾತ್ರವಲ್ಲ, ಮಹಿಳೆಯರು ಈ ಸಂಪ್ರದಾಯದಿಂದ ಹೊರಬರಲು ಹಲವಾರು ಕಾರ್ಯಕ್ರಮ, ಯೋಜನೆಗಳನ್ನು ಹಾಕಿಕೊಂಡಿದೆ. 40 ವರ್ಷ ಮೇಲ್ಪಟ್ಟ ದೇವದಾಸಿ ಮಹಿಳೆಯರಿಗೆ ರೂಪಾಯಿ 400 ಮಾಸಾಶನವನ್ನು ಸರಕಾರ ನೀಡುತ್ತಿದೆ. ಆದರೆ ಈ ಮಾಸಾಶನ ಪಡೆದುಕೊಳ್ಳಲು ಅಗತ್ಯ ದಾಖಲೆಗಳನ್ನು ಹೇಗೆ ಒದಗಿಸಬೇಕು ಎಂಬುದೇ ದೇವದಾಸಿ ಮಹಿಳೆಯರಿಗೆ ಗೊತ್ತಿಲ್ಲ. ಈ ಹಿನ್ನೆಲೆಯಲ್ಲಿ ಹೆಚ್ಚಿನ ದೇವದಾಸಿ ಮಹಿಳೆಯರು ಈ ಯೋಜನೆಯ ಫಲಾನುಭವಿಗಳಾಗಿಲ್ಲ. ಇಷ್ಟು ಮಾತ್ರವಲ್ಲದೆ, ದೇವದಾಸಿ ಮಹಿಳೆಯರ ಜೀವನೋಪಾಯಕ್ಕಾಗಿ ಕೃಷಿಯೋಗ್ಯ ಭೂಮಿಯನ್ನೂ ಸರಕಾರ ವಿತರಿಸಿದೆ.

ಹಿಂದಿನ ಕಾಲದಲ್ಲಿ ಮನೆಯಲ್ಲಿ ಯಾರಿಗಾದರೂ ರೋಗ ಬಾಧಿಸಿದರೆ, ಮನೆಯಲ್ಲಿ ಒಬ್ಬಳೇ ಹೆಣ್ಣುಮಗು ಹುಟ್ಟಿದರೆ ಹಾಗೂ ಇತರ ಮೂಢನಂಬಿಕೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಅದರ ಪರಿಹಾರಕ್ಕಾಗಿ ಹೆಣ್ಣುಮಕ್ಕಳು ಎಲ್ಲ ಸುಖಸಂತೋಷಗಳನ್ನು ಬಲಿಕೊಟ್ಟು ಒಟ್ಟು ಸಮಾಜದ ಪ್ರಕ್ರಿಯೆಯಿಂದಲೇ ದೂರವುಳಿದು ದೇವದಾಸಿಯರಾಗಿ ಬಾಳಬೇಕಾಗಿತ್ತು. ಆದರೆ ಆಧುನಿಕ ಕಾಲಘಟ್ಟದಲ್ಲೂ ದೇವದಾಸಿ ಪದ್ಧತಿ ಜೀವಂತವಾಗಿದೆ ಎಂದರೆ ಅದು ನಮ್ಮ ನಾಗರಿಕ ಸಮಾಜಕ್ಕೆ ಒಂದು ಸವಾಲು. ಆದರೆ ಸವಾಲನ್ನು ಮೆಟ್ಟಿನಿಲ್ಲುವ ಮಾನವೀಯ ಕಾಳಜಿ ಪ್ರತಿಯೊಬ್ಬರಿಗೂ ಇರಬೇಕು. ದೇವದಾಸಿ ಮಹಿಳೆಯರ ಬೇಡಿಕೆಯು ಇದೇ ಆಗಿದೆ- ''ನಾವಂತೂ ಹಿರಿಯರು ಮಾಡಿದ ತಪ್ಪಿಗಾಗಿ ಸಾಕಷ್ಟು ನೋವನ್ನು ಅನುಭವಿಸಿದ್ದೇವೆ. ನಮ್ಮ ಮುಂದಿನ ಪೀಳಿಗೆಗೆ ಇದು ಮುಂದುವರಿಯಬಾರದು. ಇದು ನಮ್ಮೊಂದಿಗೆ ಕೊನೆಗೊಳ್ಳಲಿ''.

# ಕಟ್ಟಡ ಕಾರ್ಮಿಕರಿಗೆ ಸರಕಾರಿ ಸೌಲಭ್ಯಗಳು

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಕಾರ್ಮಿಕರಿಗೆ ವಿವಿಧ ರೀತಿಯ ಹಣಕಾಸಿನ ಸೌಲಭ್ಯಗಳು ದೊರೆಯುತ್ತದೆ. ಇದರ ಫಲಾನುಭವಿ ಎಂದು ನೋಂದಾಯಿತರಾಗಲು ಕಟ್ಟಡ ಕಾರ್ಮಿಕರು ಕಾರ್ಮಿಕ ಅಧಿಕಾರಿ ಅಥವಾ ಹಿರಿಯ/ ಕಾರ್ಮಿಕ ನಿರೀಕ್ಷಕರ ಬಳಿ ನಮೂನೆ-5 ಮತ್ತು 6ನ್ನು ತುಂಬಿ ಸಲ್ಲಿಸಬೇಕು. ನೋಂದಾಯಿತರಾದವರಿಗೆ ಗುರುತಿನ ಚೀಟಿಯನ್ನು ನೀಡಲಾಗುತ್ತಿದೆ.

ಕಟ್ಟಡ ಕಾರ್ಮಿಕರ ನೋಂದಣಿಗೆ ಇರಬೇಕಾದ ಅರ್ಹತೆಗಳು:

1.ಕಟ್ಟಡ ಕಾರ್ಮಿಕರು ನೋಂದಣಿ ಪೂರ್ವದಲ್ಲಿ 12 ತಿಂಗಳ ಅವಧಿಯಲ್ಲಿ 90 ದಿನ ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡಿರಬೇಕು. ಅವರು 18-60 ವಯೋಮಿತಿಯೊಳಗೆ ಇರಬೇಕು.

2.ನಮೂನೆ-5ರಲ್ಲಿ ಭರ್ತಿ ಮಾಡಿ, ರೂ. 25 ನೋಂದಣಿ ಶುಲ್ಕ, ವಯಸ್ಸಿನ ದೃಢೀಕರಣ, ಉದ್ಯೋಗ ಮಾಡುತ್ತಿರುವ ಕುರಿತು ದೃಢೀಕರಣ ಪತ್ರ, ಮೂರು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಮತ್ತು ನಾಮ ನಿರ್ದೇಶನದ ಸಲುವಾಗಿ ನಮೂನೆ 6ರಲ್ಲಿ ಅರ್ಜಿಯನ್ನು ತುಂಬಿ ನೋಂದಣಿ ಅಧಿಕಾರಿ (ಕಾರ್ಮಿಕ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು ಮತ್ತು ಕಾರ್ಮಿಕ ನಿರೀಕ್ಷಕುಗಳನ್ನು ಈ ಕೆಲಸದ ಸಲುವಾಗಿ ನೋಂದಣಿ ಅಧಿಕಾರಿ ಎಂದು ಅಧಿಸೂಚನೆ ಹೊರಡಿಸಲಾಗಿದೆ.) ಅವರ ಸಮ್ಮುಖದಲ್ಲಿ ಸಲ್ಲಿಸಬೇಕಾಗುತ್ತದೆ.

3.ನೋಂದಣಿ ಅಧಿಕಾರಿ (ನಿಯಮ 20 ಅರ್ಜಿಯನ್ನು ನೋಂದಾಯಿಸಿಕೊಂಡು ಅರ್ಜಿದಾರ ಪಲಾನುಭವಿ ನಮೂನೆ-8ರಲ್ಲಿ ಗುರುತಿನ ಚೀಟಿಯನ್ನು ನೀಡುತ್ತಾರೆ.


SUHANA TRAVELS

SHIFTED TO NEW LOCATION
FIND YOUR ALL TRAVEL REQUIREMENTS UNDER ONE ROOF

OUR SERVICES:

•DOMESTIC AND INTERNATIONAL AIR-TICKETING •VISA STAMPING
•PASSPORT •EMIGRATION •RECRUITMENT •CERTIFICATE ATTESTATOIN

CONTACT ANY ISTHIQDHAM OFFICE IN ALL OVER SAUDI ARABIA

OUR FREE SERVICES:

SAUDI AIR-TICKET RE-CONFIRMATION
RE-ENTRY VISA DATE CHECKING

CONTACT

HEAD OFFICE:
Shop no.25 printing house
2nd floor, behind handloom house
28 D, Police Court Lane,
Fort, Mumbai - 400 001
E-mail: suhanatravel@mail.com
Tel : 0091 22 22692680
Telefax: 0091 22 22692690
Mobile : 091 9820945999

MANGALORE OFFICE
No: 5, Ground Floor
Shivali Arcade, Falnir Tower
opp: B.P Petrole Pump, Falnir
Mangalore - 575002
Tel: 0091 824 2442020. (4lines)
Telefax: 00918244277690
Mobile: 0091 9448253825
Email:suhanamglr@yahoo.co.in

FOR OUR WAKALA



ಸುದ್ದಿಯ ವಸ್ತುನಿಷ್ಠ ವಿಶ್ಲೇಷಣೆಗೆ

ಸತ್ಯ ಸುದ್ದಿಯ

ಪ್ರಸ್ತುತ

ಪಾಕ್ಷಿಕ

10-23-1009(1), Media House, Ansari Road, Bunder, Mangalore-575001 Tel : 0824-2410454, Fax : 0824-2410454

ಪ್ರಚಾರ ಸಪ್ತಾಹ

12 ರಿಂದ 18 ಜೂನ್ 2011

ವಾರ್ಷಿಕ ರೂ.288/- ಅರ್ಧವಾರ್ಷಿಕ ರೂ.144/-

ಚಂದಾದಾರರಾಗಲು ಇದು ಸುವರ್ಣಾವಕಾಶ

ಚಂದಾದಾರರಾಗಲು ನಮ್ಮ ಪ್ರತಿನಿಧಿಗಳನ್ನು ಇಂದೇ ಸಂಪರ್ಕಿಸಿರಿ

ಅವಧಿ ಮುಗಿಯುವ ಚಂದಾ ನವೀಕರಣಗೊಳಿಸಲು ಇದು ಉತ್ತಮ ಅವಕಾಶ


ಫಲಾನುಭವಿಗಳು ಪ್ರತಿ ತಿಂಗಳು ರೂ. 10 ಚಂದಾಹಣವನ್ನು ನೋಂದಣಿ ಅಧಿಕಾರಿಗಳಲ್ಲಿ ಪಾವತಿ ಮಾಡಬೇಕಾಗುತ್ತದೆ.

4.ಒಂದು ವರ್ಷದವರೆಗೆ ಸತತವಾಗಿ ಚಂದಾ ಹಣವನ್ನು ಪಾವತಿ ಮಾಡದಿದ್ದಲ್ಲಿ ಫಲಾನುಭಲವಿತ್ವ ರದ್ದುಗೊಳ್ಳುತ್ತದೆ. ಬಾಕಿ ಉಳಿಸಿಕೊಂಡಿರುವ ಚಂದಾ ಹಣದ ಜೊತೆ ಬಾಕಿ ಅವಧಿಗೆ ತಿಂಗಳಿಗೆ ಎರಡು ರೂ. ದಂಡ ಪಾವತಿ ಮಾಡಿ ಮಂಡಳಿಯ ಕಾರ್ಯದರ್ಶಿ ಅಥವಾ ಅವರಿದಂ ಅಧಿಕಾರ ಪಡೆದ ಅಧಿಕಾರಿಯ ಪೂರ್ವಾನುಮತಿ ಪಡೆದು, ನಿಂತು ಹೋದ ಸದಸ್ಯತ್ವವನ್ನು ಪುನಃ ಪ್ರಾರಂಭಿಸಬಹುದಾಗಿರುತ್ತದೆ. ಇದು ಎರಡು ಬಾರಿ ಮಾತ್ರ ಸಾಧ್ಯವಾಗುತ್ತದೆ.

**ಹೆಚ್ಚಿನ ಮಾಹಿತಿಗಾಗಿ ಈ ವಿಳಾಸವನ್ನು ಸಂಪರ್ಕಿಸಬಹುದು.**
**ಇಂಫರ್ಮೇಶನ್ ಆ್ಯಂಡ್ ಎಂಪವರ್‌ಮೆಂಟ್ ಸೆಂಟರ್**
**ಎರಡನೆ ಮಹಡಿ, ವೆಸ್‌ಕೋಸ್ಟ್ ಕಟ್ಟಡ**
**ನೆಲ್ಲಿಕಾಯಿ ರಸ್ತೆ, ಮಂಗಳೂರು- 575001**
**ದೂ.ಸಂ.: 0824-4263827**
**ಮೊ.: 9141939492**

## ನಿಗೂಢತೆ

ಜೀವನವೊಂದು ಸಂಕೀರ್ಣ
ಇಲ್ಲಿ ಹಲವು ಪ್ರಶ್ನೆಗಳು ನಿಗೂಢ
ಉತ್ತರ ಕಂಡುಕೊಳ್ಳಲೆತ್ನಿಸಬಾರದು ಇಲ್ಲಿ
ಉತ್ತರ ದೊರೆಯುವಷ್ಟರಲ್ಲಿ
ಪ್ರಶ್ನೆಗಳೇ ಬದಲಾಗಿರಬಹುದು

## ಕಣ್ಣೀರು

ಆತ್ಮೀಯರಿಂದ ದೂರವಾದಾಗ
ಕಣ್ಣೀರು ಬಾರದು
ಅವರಿಂದ ದೂರವಿರಲು
ಸಾಧ್ಯವಿಲ್ಲವೆಂದಾಗ
ಕಣ್ಣೀರು ಜಾರಿ ಬೀಳುವುದು

# ಅಗಲಿದ ಸಹೋದರ ಸಿರಾಜ್‌ನ ನೆನಪಿನಲ್ಲಿ...

■ ಎ.ಎಂ.ಅಥಾವುಲ್ಲಾ ಜೋಕಟ್ಟೆ

'ಜಾತ್ಯಾಸ್ಯಂ ಮರಣಂ ಧ್ರುವಂ'- ಹುಟ್ಟಿದ ಪ್ರತಿಯೊಂದು ಜೀವಿಯೂ ಮರಣದ ಸವಿ ಉಣ್ಣಲೇಬೇಕು. ಹೊತ್ತಿ ಉರಿಯುವ ದೀಪ ನಂದಿ ಹೋಗುವುದು, ಅರಳಿದ ಹೂವು ಬಾಡುವುದು ಸಹಜ.

ಇದು ಇತ್ತೀಚೆಗೆ ನಮ್ಮನ್ನಗಲಿದ ಸಹೋದರ ಸಿರಾಜ್ ಅವರ ಅಕಾಲಿಕ ಮರಣ ಸಂಭವಿಸಿದಾಗ ಮನಸ್ಸಿನಲ್ಲೇ ನಾವೆಲ್ಲ ಸಮಾಧಾನಿಸಿಕೊಂಡ ಬಗೆಯಾಗಿತ್ತು.



ಅಣಕು ಕಾರ್ಯಾಚರಣೆಯ ವೇಳೆ ಸಿರಾಜ್ ಕಾಟಿಪಳ್ಳ.

ಸದಾ ಸ್ನೇಹಿತರ ನಡುವೆ ಪಾದರಸದಂತೆ ಓಡಾಡಿಕೊಂಡು ಕ್ರಿಯಾಶೀಲನಾಗಿದ್ದ ಸಿರಾಜ್ ಇತ್ತೀಚೆಗಷ್ಟೇ ಐಎಸ್‌ಪಿಆರ್‌ಎಲ್ ಕಂಪೆನಿಯಲ್ಲಿ ಇಲೆಕ್ಟ್ರೀಶಿಯನ್ ಆಗಿ ಉದ್ಯೋಗಕ್ಕೆ ಸೇರಿಕೊಂಡಿದ್ದ. ಎಂಆರ್‌ಪಿಎಲ್- ಒಎಂಪಿಎಲ್- ಒಎನ್‌ಜಿಸಿ ಕಂಪೆನಿಗಳ ಅಧೀನದಲ್ಲಿದ್ದ ಸಹ ಕಂಪೆನಿಗಳ ಇಲೆಕ್ಟ್ರೀಶಿಯನ್ ಕೆಲಸ ಕಾರ್ಯಗಳನ್ನೂ ಸಣ್ಣ ಮಟ್ಟಗೆ ಗುತ್ತಿಗೆ ಪಡೆದು ಕಾರ್ಯನಿರ್ವಹಿಸುತ್ತಿದ್ದ ಸಿರಾಜ್, ದಣಿವಿಲ್ಲದೆ ದುಡಿಯುತ್ತಿದ್ದ. ಆತ ಬದುಕಿನಲ್ಲಿ ಸಾಧಿಸಬೇಕೆಂದಿದ್ದ ಅದೆಷ್ಟೋ ಕನಸುಗಳಿದ್ದವು. ವೃದ್ಧ ತಂದೆ ತಾಯಿಯ ಪಾಲನೆಯ ಜವಾಬ್ದಾರಿ ಹೊತ್ತುಕೊಂಡಿದ್ದ ಕಿರಿಮಗ ಸಾದಿಕ್‌ನ ಕನಸುಗಳು ಮೇ 26ರಂದು ಸಂಜೆ 6ರ ಹೊತ್ತಿಗೆ ಪೆರ್ಮುದೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ ನುಚ್ಚುನೂರಾದವು.

2011, ಮೇ 26ರಂದು ಡ್ಯೂಟಿ ಮುಗಿಸಿ ಹೊರಡಲನುವಾದಾಗ ಕಂಪೆನಿಯ ಸೀನಿಯರ್ ಇಂಜಿನಿಯರ್ ಕೊರಿಯದ ಸ್ವಾಂಗ್ ಕರೆಗೆ ಓಗೊಟ್ಟು ತೈಲ ಸಂಗ್ರಹಣಾ ಘಟಕಕ್ಕೆ ಸಮೀಪಿಸುವಾಗಲೇ ಅಲ್ಲೊಂದು ಭೀಕರ ಸ್ಫೋಟ ಸಂಭವಿಸಿತು. ಈ ಭೀಕರ ಸ್ಫೋಟಕ್ಕೆ ಮೂರು ಜೀವಗಳು ಬಲಿಯಾದವು. ಹಲವರು ಗಾಯಗೊಂಡರು. ಮೃತಪಟ್ಟವರ ಪೈಕಿ ಸ್ಥಳೀಯ ಉದ್ಯೋಗಿ ಸಿರಾಜ್ ಕೂಡ ಒಬ್ಬನಾಗಿದ್ದ.

ವಿದ್ಯಾರ್ಥಿ ಜೀವನದಲ್ಲೇ ಪ್ರತಿಭಾನ್ವಿತನಾಗಿದ್ದ ಸಿರಾಜ್, ಸಮಾಜಸೇವೆಯಲ್ಲಿ ಸದಾ ಚುರುಕಾಗಿರುತ್ತಿದ್ದ. ಸದಾ ಸಮಾಜಮುಖಿಯಾಗಿ ಚಿಂತಿಸುತ್ತಿದ್ದ ಸಿರಾಜ್‌ಗೆ ಯುವ ಪ್ರಾಯದಲ್ಲೇ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಕಾರ್ಯವೈಖರಿ ಕಂಡು ಆಕರ್ಷಿತನಾಗಿದ್ದ. ಸಮುದಾಯಸೇವೆಗೆ ಸರ್ವಸನ್ನದ್ದರಾಗಿ ಸೇವೆ ಸಲ್ಲಿಸುತ್ತಿದ್ದ ಪಾಪ್ಯುಲರ್ ಫ್ರಂಟ್ ಕಾರ್ಯಕರ್ತರು ಇವನಿಗೆ ಆತ್ಮೀಯ ಸ್ನೇಹಿತರಾದರು. ಮಾತ್ರವಲ್ಲ, ಕೆಲವೇ ಸಮಯದಲ್ಲಿ ಸಿರಾಜ್ ಸಂಘಟನೆಗೆ ಸದಸ್ಯನಾಗಿ ಸೇರ್ಪಡೆಗೊಂಡರು.

ಎಲ್ಲರೊಂದಿಗೆ ಬೆರೆತು ಜೀವಿಸುವ ಸ್ವಭಾವ ಹೊಂದಿದ್ದ

*ತಂದೆ ಬಿ.ಎ.ಖಾದರ್ ಅವರು ಜೋಕಟ್ಟೆ ವಲಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದು, ಹಿರಿಯ ಕಾಂಗ್ರೆಸಿಗರು. ಮಗನ ತ್ಯಾಗೋಜ್ವಲ ಬದುಕಿಗೆ, ಜೀವನಕ್ಕೆ ಸದಾ ಹಾರೈಸುತ್ತಿದ್ದರು. ಯುವಜನಾಂಗ ಅನೈತಿಕತೆಯ ದಾರಿಹಿಡಿದು ವ್ಯತಿಚಲಿಸುತ್ತಿರುವಾಗ ತನ್ನ ಮಗ ನಡೆಯುತ್ತಿರುವ ಸತ್ಪಥದ ಹಾದಿಯನ್ನು ಕಂಡು ಅವರು ಹೆಮ್ಮೆಪಡುತ್ತಿದ್ದರು. ಸಿರಾಜ್ ಅಂಗೀಕರಿಸಿದ ಸಂಘಟನೆ, ಕಾರ್ಯವೈಖರಿ, ಧೋರಣೆಯ ಬಗ್ಗೆ ತಂದೆ ಮಗನ ಮಧ್ಯೆ ಆರೋಗ್ಯಕರ ಚರ್ಚೆ ನಡೆಯುತ್ತಿತ್ತು. ಸಿರಾಜ್‌ನ ದೃಢನಿಲುವು, ಸಾಮುದಾಯಿಕ ಪ್ರಜ್ಞೆಯನ್ನು ಕಂಡು ಖಾದರ್ ಅವರು ಒಳಗೊಳಗೆ ಸಂತೋಷ ಪಡುತ್ತಿದ್ದರು.*

ಸಿರಾಜ್, ಯಾವುದೇ ಒಂದು ವಿಚಾರವನ್ನು ಸ್ಥೂಲವಾಗಿ ಚರ್ಚಿಸಿ, ತರ್ಕಿಸಿ ನಿರ್ಧಾರ ಪ್ರಕಟಿಸುತ್ತಿದ್ದ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಕಾಟಿಪಳ್ಳ ಘಟಕದ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಿರಾಜ್, ಮೇ 26ರಂದು ಕೆಲಸ ಮುಗಿಸಿ ನೇರವಾಗಿ ಸಂಘಟನೆಯ ಮಾಸಿಕ ಸಭೆಗೆ ತೆರಳಲು ಅಣಿಯಾಗಿದ್ದ. ಈ ಬಗ್ಗೆ ತನ್ನ ಇತರ ಸದಸ್ಯರಿಗೆ ಮೊಬೈಲ್ ಕರೆಯನ್ನೂ ನೀಡಿದ್ದ. ಇತರ ಸದಸ್ಯರು ಕ್ಲಪ್ತ ಸಮಯಕ್ಕೆ ಬಂದು ಸಿರಾಜ್‌ನ ನಿರೀಕ್ಷೆಯಲ್ಲಿದ್ದರು... ಆದರೆ ವಿಧಿ ನಿರ್ಣಯ ಬೇರೆಯೇ ಆಗಿತ್ತು.

ಮೂಲತಃ ಜೋಕಟ್ಟೆ ನಿವಾಸಿಯಾಗಿರುವ ಸಿರಾಜ್, ಸಂಘಟನೆಯ ಹಲವು ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸಿ ಉತ್ತಮ ಸಂಘಟಕ ಎನಿಸಿಕೊಂಡಿದ್ದರು. ಸುಮಾರು 7 ವರ್ಷಗಳ ಕಾಲ ಸಂಘಟನೆಯಲ್ಲಿ ಸೇವೆ ಸಲ್ಲಿಸಿರುವ ಸಿರಾಜ್, ತನ್ನ ಕ್ರಿಯಾಶೀಲತೆ, ಚುರುಕಿನ ಓಡಾಟ, ಜೀವನ ಶೈಲಿ, ಎಲ್ಲರೊಂದಿಗೆ ಬೆರೆಯುವ ಸ್ವಭಾವದಿಂದಾಗಿ ಸುತ್ತಮುತ್ತಲಿನವರ ಪ್ರೀತಿಗೆ ಪಾತ್ರನಾಗಿದ್ದ.

ತಂದೆ ಬಿ.ಎ.ಖಾದರ್ ಅವರು ಜೋಕಟ್ಟೆ ವಲಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದು, ಹಿರಿಯ ಕಾಂಗ್ರೆಸಿಗರು. ಮಗನ ತ್ಯಾಗೋಜ್ವಲ ಬದುಕಿಗೆ, ಜೀವನಕ್ಕೆ ಸದಾ ಹಾರೈಸುತ್ತಿದ್ದರು. ಯುವಜನಾಂಗ ಅನೈತಿಕತೆಯ ದಾರಿಹಿಡಿದು ವ್ಯತಿಚಲಿಸುತ್ತಿರುವಾಗ ತನ್ನ ಮಗ ನಡೆಯುತ್ತಿರುವ ಸತ್ಪಥದ ಹಾದಿಯನ್ನು ಕಂಡು ಅವರು ಹೆಮ್ಮೆಪಡುತ್ತಿದ್ದರು. ಸಿರಾಜ್ ಅಂಗೀಕರಿಸಿದ ಸಂಘಟನೆ, ಕಾರ್ಯವೈಖರಿ, ಧೋರಣೆಯ ಬಗ್ಗೆ ತಂದೆ ಮಗನ ಮಧ್ಯೆ ಆರೋಗ್ಯಕರ ಚರ್ಚೆ ನಡೆಯುತ್ತಿತ್ತು. ಸಿರಾಜ್‌ನ ದೃಢನಿಲುವು, ಸಾಮುದಾಯಿಕ ಪ್ರಜ್ಞೆಯನ್ನು ಕಂಡು ಖಾದರ್ ಅವರು ಒಳಗೊಳಗೆ ಸಂತೋಷ ಪಡುತ್ತಿದ್ದರು.

ಸಮುದಾಯ ಸೇವೆಗೆ ಮುಡಿಪಾಗಿಟ್ಟ ಸಿರಾಜ್‌ನ ಹಾದಿಯ ಬಗ್ಗೆ ಅಣ್ಣಂದಿರಾದ ಶಂಸುದ್ದೀನ್, ಅಸ್ಫರ್, ನಿಸಾರ್ ಹಾಗೂ ಸಹೋದರಿಯರಾದ ಮುಮ್ತಾಝ್, ರಝಿಯಾ ಇವರ್‍ಯಾರೂ ತರ್ಕಿಸಿದವರಲ್ಲ. ಸಂಘಟನೆಯ ಜವಾಬ್ದಾರಿಯನ್ನು ಕ್ರಿಯಾಶೀಲನಾಗಿ ನಿರ್ವಹಿಸುವುದರೊಂದಿಗೆ ಮನೆಯಲ್ಲಿ ಪೋಲಿಯೋ ಪೀಡಿತರಾಗಿ ಬಳಲುತ್ತಿರುವ ತಾಯಿ, ಇತ್ತೀಚೆಗಷ್ಟೇ ಪಾರ್ಶ್ವವಾಯುಗೆ ತುತ್ತಾದ ತಂದೆ ಇವರ ಸೇವೆಯನ್ನು ಚಾಚೂತಪ್ಪದೆ ನಿರ್ವಹಿಸುತ್ತಿದ್ದ ಸೌಭಾಗ್ಯವಂತ ಮಾದರಿ ಮಗನಾಗಿದ್ದನು ಸಿರಾಜ್. ''ಬೆಳಗ್ಗಿನ ನಮಾಝ್ ಮುಗಿಸಿ ಮನೆ ಅಂಗಳವನ್ನು ಶುಚಿಗೊಳಿಸುವುದು, ಉಪಹಾರ ತಯಾರಿಸುವುದರಲ್ಲಿ ತಾಯಿಗೆ ನೆರವಾಗುವುದು, ಪಾರ್ಶ್ವವಾಯು ಪೀಡಿತ ತಂದೆಗೆ ಎಣ್ಣೆ ಹಚ್ಚುವುದು ನಾವು ದಿನನಿತ್ಯ ನೋಡುತ್ತಿದ್ದ ದೃಶ್ಯ'' ಎಂದು ಸಮೀಪದ ಮನೆಯ ಸೈದಾಲಿ ಕಾಕರ ಪತ್ನಿ ಸಕೀನಾ ಹೇಳುತ್ತಾರೆ.

''ನನ್ನ ಇತರ ಮಕ್ಕಳಿಗಿಂತ ಅತಿ ಹೆಚ್ಚು ಪ್ರೀತಿ ಪಾತ್ರನಾದ ಮಗನಾಗಿದ್ದ ಮಾತ್ರವಲ್ಲ, ಅವನು ನನ್ನ ಸ್ನೇಹಿತನಂತಿದ್ದ. ಹಲವಾರು ವಿಚಾರಗಳ ಬಗ್ಗೆ ನಮ್ಮ ನಡುವೆ ಚರ್ಚೆ ನಡೆಯುತ್ತಿತ್ತು. ದುರಂತವು ನನ್ನ ಜೀವನದ ಸ್ಫೂರ್ತಿಯನ್ನು ಕಸಿದುಕೊಂಡಿದೆ'' ಎಂದು ಬಿ.ಎ.ಖಾದರ್‌ರವರು ಮನದಾಳದ ಮಾತುಗಳನ್ನು ಆಡುವಾಗ ಅವರಿಗೆ ಅರಿವಿಲ್ಲದೆಯೇ ಕಣ್ಣಂಚಿನಿಂದ ನೀರು ತೊಟ್ಟಿಕ್ಕುತ್ತಿತ್ತು.

ಆತ್ಮೀಯ ಮಿತ್ರನಾಗಿ, ಸಹೋದರತ್ವದಡಿಯಲ್ಲಿ ಮುಡಿಪಾಗಿಟ್ಟ ಜೀವನದಲ್ಲಿ ನಮ್ಮೊಂದಿಗೆ ಸಾಗಿ ಬಾಳಿ ಬದುಕಬೇಕಾಗಿದ್ದ ಸಿರಾಜ್ ಇಂದು ನಮ್ಮಿಂದ ದೂರವಾಗಿದ್ದಾರೆ. ಇದು ಅನಿವಾರ್ಯ ವಿರಹ. ಇಹಲೋಕ ತ್ಯಜಿಸುವ ಮುನ್ನ ಸಿರಾಜ್ ಇತರರಿಗೂ ಇದೇ ಹಾದಿಯಲ್ಲಿ ಮುಂದುವರಿಯಲು ಪ್ರೇರಣೆ ನೀಡಿದ್ದಾನೆ. ಫೀ ಸಬೀಲಿನ ಹಾದಿಯಲ್ಲಿ ಬದುಕಿ ನಮ್ಮನ್ನಗಲಿದ ಸಿರಾಜ್‌ಗೆ ಅಲ್ಲಾಹನು ಜನ್ನತುಲ್ ಫಿರ್ದೌಸನ್ನು ಕರುಣಿಸಲಿ. ಆಮೀನ್.

★★★

# ಸೌಜನ್ಯಕ್ಕಾದರೂ ಅವರು ಮನೆ ಕಡೆ ಬರಲೇ ಇಲ್ಲ: ಖಾದರ್

''ನಾನು 35 ವರ್ಷಗಳ ಕಾಲ ಕಾಂಗ್ರೆಸ್‌ಗಾಗಿ ದುಡಿದಿದ್ದೇನೆ. ಈಗ ಕಾಂಗ್ರೆಸ್‌ನ ಜೋಕಟ್ಟೆ ವಲಯದ ಕಾರ್ಯದರ್ಶಿಯಾಗಿದ್ದೇನೆ. ಆದರೆ ನನ್ನ ಪುತ್ರ ಮೃತನಾದ ಸಂದರ್ಭದಲ್ಲಿ ಕಾಂಗ್ರೆಸ್‌ನ ಯಾವ ನಾಯಕನೂ ನನ್ನ ನೆರವಿಗೆ ಬಂದಿಲ್ಲ, ನಮ್ಮ ಮನೆಗೆ ಭೇಟಿ ನೀಡಿಲ್ಲ. ಸೌಜನ್ಯಕ್ಕಾದರೂ ಅವರಿಗೆ ಮನೆಗೆ ಬರಬಹುದಿತ್ತು. ಜಿಲ್ಲಾಡಳಿತವೂ ಇತ್ತ ಕಡೆ ತಲೆಹಾಕಿ ನೋಡಲಿಲ್ಲ.'' ಇದು ಮೊನ್ನೆ ಐಎಸ್‌ಪಿಆರ್‌ಎಲ್‌ನ ತೈಲ ಸಂಗ್ರಹಾಗಾರದ ಕಾಮಗಾರಿಯ ವೇಳೆ ನಡೆದ ಸ್ಫೋಟದಲ್ಲಿ ಮೃತರಾದ ಸಿರಾಜ್ ಕಾಟಿಪಳ್ಳರವರ ತಂದೆ ಬಿ.ಅಬ್ದುಲ್ ಖಾದರ್‌ರವರ ಆಕ್ರೋಶಭರಿತ ಮಾತುಗಳು.

'ಪ್ರಸ್ತುತ ಪಾಕ್ಷಿಕ' ಪತ್ರಿಕೆಯ ಪ್ರತಿನಿಧಿಗಳು ಜೂನ್ 7ರಂದು ಅಬ್ದುಲ್ ಖಾದರ್‌ರನ್ನು ಸಂದರ್ಶಿಸಿದಾಗ ಅವರು ತಮ್ಮ ಮನದಾಳದ ನೋವುಗಳನ್ನು ಹೊರಗೆಡಹಿದರು.

ಮೂಲತ: ಜೋಕಟ್ಟೆಯವರಾದ ಖಾದರ್ ಈಗ ಕಾಟಿಪಳ್ಳದಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದಾರೆ. ಖಾದರ್-ನಫೀಸಾ ದಂಪತಿಗೆ ನಾಲ್ವರು ಪುತ್ರರು ಹಾಗೂ ಇಬ್ಬರು ಪುತ್ರಿಯರು. ಇವರಲ್ಲಿ ಸಿರಾಜ್ ಕೊನೆಯ ಪುತ್ರನಾಗಿದ್ದರು. ಖಾದರ್ ಕಿಡ್ನಿ ವೈಫಲ್ಯ, ಹೃದ್ರೋಗ ಹಾಗೂ ಪಾರ್ಶ್ವ ವಾಯುವಿನಿಂದ ಬಳಲುತ್ತಿದ್ದಾರೆ. ನಫೀಸಾ ಮೊಣಕಾಲು ನೋವಿನಿಂದ ನಡೆದಾಡದ ಸ್ಥಿತಿಯಲ್ಲಿದ್ದಾರೆ.

ಸಿರಾಜ್ ಬಾಲ್ಯದಿಂದಲೇ ಉತ್ತಮ ನಡತೆಯನ್ನು ಮೈಗೂಡಿಸಿಕೊಂಡವನಾಗಿದ್ದ. ಕುಟುಂಬವು ಆತನ ಮೇಲೆ ಹಲವು ನಿರೀಕ್ಷೆಗಳನ್ನಿಟ್ಟಿತ್ತು. ಆದರೆ ಅವರ ಅನಿರೀಕ್ಷಿತ ಅಗಲುವಿಕೆಯು ಕುಟುಂಬದ ಬಲವನ್ನೇ ಕುಂದಿಸಿದೆ. ಖಾದರ್‌ರೊಂದಿಗೆ ನಡೆಸಿದ ಸಂದರ್ಶನ ಹೀಗಿದೆ:

**ಪ್ರಸ್ತುತ: ಸಿರಾಜ್‌ರ ವಿದ್ಯಾಭ್ಯಾಸದ ಬಗ್ಗೆ ಹೇಳುವಿರಾ?**

ಖಾದರ್: ಸಿರಾಜ್ ನಮ್ಮ ಕುಟುಂಬದಲ್ಲಿ ಪ್ರತಿಭಾವಂತನಾಗಿದ್ದ. ಆತ ಎಲೆಕ್ಟ್ರೀಶಿಯನ್, ಫಯರ್ ಆ್ಯಂಡ್ ಸೇಫ್ಟಿ ಹಾಗೂ ಕಂಪ್ಯೂಟರ್ ಕೋರ್ಸ್‌ಗಳನ್ನು ಕಲಿತಿದ್ದ. ಎರಡು ವರ್ಷಗಳ ಕಾಲ ವಿದೇಶದಲ್ಲಿ ದುಡಿದು ಬಳಿಕ ಊರಿಗೆ ಮರಳಿದ್ದ ಈತ, ಇಲ್ಲೇ ಕಂಪೆನಿಯೊಂದರಲ್ಲಿ ಉದ್ಯೋಗಕ್ಕೆ ಸೇರಿದ್ದ.



ಬಿ.ಅಬ್ದುಲ್ ಖಾದರ್

**ಪ್ರಸ್ತುತ: ಸಿರಾಜ್‌ನ ದೈನಂದಿನ ಚಟುವಟಿಕೆ ಹೇಗಿತ್ತು?**

ಖಾದರ್: ಸಿರಾಜ್ ನಮ್ಮ ಕುಟುಂಬದಲ್ಲೇ ವಿಶೇಷ ವ್ಯಕ್ತಿಯಾಗಿದ್ದ. ಆತ ಪ್ರತಿನಿತ್ಯ ಬೆಳಗ್ಗೆ ಅಝಾನ್‌ಗೆ 10 ನಿಮಿಷ ಮೊದಲೇ ಏಳುತ್ತಿದ್ದ. ಮಸೀದಿಯಲ್ಲಿ ಬೆಳಗಿನ ನಮಾಝ್ ನಿರ್ವಹಿಸಿ ಕೆಲಸಕ್ಕೆ ತೆರಳುತ್ತಿದ್ದ. ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯ ತನಕ ಡ್ಯೂಟಿ. 8 ಗಂಟೆ ಕಂಪೆನಿ ಸಮಯವಾದರೆ, 3 ಗಂಟೆ ಓವರ್ ಟೈಮ್ ಆಗಿ ಕೆಲಸ ಮಾಡುತ್ತಿದ್ದ. ಇದರಲ್ಲಿ ಒಂದು ಗಂಟೆ ವಿರಾಮವಿರುತ್ತಿತ್ತು. ಪ್ರತಿ ದಿನವೂ ವ್ಯಾಯಾಮ ಮಾಡುವುದು ಆತನ ಹವ್ಯಾಸವಾಗಿತ್ತು. ಇದರಿಂದಾಗಿ ಆತ ಆರೋಗ್ಯವಂತನಾಗಿದ್ದ. ಇವೆಲ್ಲದರೆಡೆಯಲ್ಲೂ ಆತ ಸಾಮಾಜಿಕ ಸಂಘಟನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಕುಟುಂಬಸ್ಥರಿಗೆ ಮಾತ್ರವಲ್ಲದೆ ಸ್ನೇಹಿತರಿಗೆ, ಊರವರಿಗೆ ಮತ್ತು ಸಹೋದ್ಯೋಗಿಗಳಿಗೆ ಸಿರಾಜ್ ಅಚ್ಚುಮೆಚ್ಚಿನವನಾಗಿದ್ದ.

**ಪ್ರಸ್ತುತ: ಮಗನಲ್ಲಿ ಏನು ನಿರೀಕ್ಷೆ ಇಟ್ಟುಕೊಂಡಿದ್ದಿರಿ?**

ಖಾದರ್: ನನ್ನ ಮಕ್ಕಳಲ್ಲಿ ಸಿರಾಜ್‌ನ ಮೇಲೆ ನನಗೆ ಹೆಚ್ಚಿನ ನಂಬಿಕೆಯಿತ್ತು. ನಮಗೆ ಸ್ವಂತ ಮನೆಯೊಂದನ್ನು ಕಟ್ಟಿಸುತ್ತಾನೆಂಬ

ಪೂರ್ಣ ಭರವಸೆ ಅವನ ಮೇಲಿತ್ತು. ಅದನ್ನು ಕುಟುಂಬದ ಇತರ ಸದಸ್ಯರೊಂದಿಗೂ ಆಡಿಕೊಳ್ಳುತ್ತಿದ್ದೆ. ಅದಕ್ಕಾಗಿ ಆತ ಕಠಿಣ ಪರಿಶ್ರಮವನ್ನೂ ಪಡುತ್ತಿದ್ದ. ಕಂಪೆನಿಯಲ್ಲಿ ಓವರ್ ಟೈಂ ಕೆಲಸಗಳನ್ನು ಮಾಡುತ್ತಿದ್ದ. ಆದರೆ ವಿಧಿಯ ಲೀಲೆ ಬೇರೆಯೇ ಆಗಿತ್ತು.

**ಪ್ರಸ್ತುತ: ಈಗ ಕೆಲಸ ಮಾಡುತ್ತಿದ್ದ ಕಂಪೆನಿಯ ಬಗ್ಗೆ ಆತನಿಗೆ ತೃಪ್ತಿಯಿತ್ತೇ?**

ಖಾದರ್: ಖಂಡಿತವಾಗಿಯೂ ಇತ್ತು. ತನ್ನ ಕೆಲಸದ ಬಗ್ಗೆ ಆತ ಇದುವರೆಗೆ ಒಮ್ಮೆಯೂ ನಿರಾಶೆಯನ್ನಾಗಲೀ, ಬೇಸರವನ್ನಾಗಲೀ ವ್ಯಕ್ತಪಡಿಸಿರಲಿಲ್ಲ.

**ಪ್ರಸ್ತುತ: ಕೆಲಸದ ವೇಳೆ ಕಂಪೆನಿ ಭದ್ರತಾ ಸಲಕರಣೆಗಳನ್ನು ನೀಡಿತ್ತೇ?**

ಖಾದರ್: ಕೆಲಸ ಮಾಡುವ ವೇಳೆ ಧರಿಸಲು ಸೇಫ್ಟಿ ಮಾಸ್ಕ್, ಹೆಲ್ಮೆಟ್‌ಗಳನ್ನು ಕಂಪೆನಿ ನೀಡಿದೆಯೆಂದು ಆತ ತಿಳಿಸಿದ್ದ.

**ಪ್ರಸ್ತುತ: ಈ ಉದ್ಯೋಗದಿಂದ ಅವರಿಗೆ ಅನಾರೋಗ್ಯ ಬಾಧಿಸಿತ್ತೇ?**

ಖಾದರ್: ಇಲ್ಲ. ಆರೋಗ್ಯದ ವಿಷಯದಲ್ಲಿ ಆತನಿಗೆ ಯಾವುದೇ ತೊಂದರೆಯಿರಲಿಲ್ಲ.

**ಪ್ರಸ್ತುತ: ಘಟನೆ ನಡೆದ ಬಳಿಕ ಸ್ಥಳೀಯ ಜನ ಪ್ರತಿನಿಧಿಗಳು ನಿಮ್ಮ ಮನೆಗೆ ಭೇಟಿ ನೀಡಿದ್ದಾರೆಯೇ?**

ಖಾದರ್: ಘಟನೆ ನಡೆದ ಬಳಿಕ ಇಂದಿನವರೆಗೆ ಯಾವುದೇ ಜನ ಪ್ರತಿನಿಧಿಗಳಾಗಲೀ, ಜಿಲ್ಲಾಡಳಿತವಾಗಲೀ ನಮ್ಮ ಮನೆಗೆ ಭೇಟಿ ನೀಡಲಿಲ್ಲ. ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್.ಬಿ.ಅಬೂಬಕರ್ ಇಲ್ಲೇ ಸಮೀಪದಲ್ಲೇ ಇದ್ದಾರೆ. ಘಟನೆ ನಡೆದ ಸಂದರ್ಭದಲ್ಲಿ ಅವರಿಗೆ ಕರೆ ಮಾಡಿ ನೆರವು ಕೇಳಿದೆವು. ಆದರೆ ಮತ್ತೊಮ್ಮೆ ಕರೆ ಮಾಡಿದಾಗ ಅವರ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಅಲ್ಪಸಂಖ್ಯಾತ ಸಮುದಾಯದ ಬಗ್ಗೆ ಅರಿವೇ ಇಲ್ಲದವನೊಬ್ಬನನ್ನು ಅಲ್ಪಸಂಖ್ಯಾತ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನನ್ನಾಗಿ ಮಾಡಲಾಗಿದೆ. ಇದು ಯಾವ ಪುರುಷಾರ್ಥಕ್ಕಾಗಿ? ಇದರ ಜೊತೆಗೆ ಮುಲ್ಕಿ-ಮೂಡಬಿದ್ರೆ ಕ್ಷೇತ್ರದ ಶಾಸಕ ಅಭಯ ಚಂದ್ರ ಜೈನ್‌ರಿಂದ ಕೂಡ ಯಾವುದೇ ನೆರವು ದೊರೆಯಲಿಲ್ಲ.

ನಾನು 35 ವರ್ಷಗಳ ಕಾಲ ಕಾಂಗ್ರೆಸ್ ಪಕ್ಷದಲ್ಲಿ ದುಡಿದಿದ್ದೇನೆ. ಕಾಂಗ್ರೆಸ್‌ನ ಜೋಕಟ್ಟೆ ವಲಯದ ಕಾರ್ಯದರ್ಶಿಯಾಗಿದ್ದೇನೆ. ಆದರೆ ಪುತ್ರ ಮೃತನಾದ ಸಂದರ್ಭದಲ್ಲಿ ಕಾಂಗ್ರೆಸ್‌ನ ಯಾವ ನಾಯಕನೂ ನನ್ನ ನೆರವಿಗೆ ಬಂದಿಲ್ಲ ಅಥವಾ ನಮ್ಮ ಮನೆಗೆ ಭೇಟಿ ನೀಡಿಲ್ಲ. ಕಾಂಗ್ರೆಸ್ ನಾಯಕ ಮೊಯ್ದಿನ್ ಬಾವ ಇಲ್ಲೇ ಸಮೀಪದಲ್ಲಿದ್ದರೂ ನಮ್ಮ ಕಷ್ಟ-ಸುಖ ಅರಿಯುವ ಮನಸು ಮಾಡಲಿಲ್ಲ.

**ಪ್ರಸ್ತುತ: ಯಾವುದಾದರೂ ಸಂಘಟನೆಗಳು ನಿಮ್ಮ ನೆರವಿಗೆ ಬಂದಿವೆಯೇ?**

ಖಾದರ್: ನಮಗೆ ಸಂಪೂರ್ಣವಾಗಿ ನೆರವಾದವರೆಂದರೆ ಎಸ್‌ಡಿಪಿಐ, ಪಾಪ್ಯುಲರ್ ಫ್ರಂಟ್‌ನ ಕಾರ್ಯಕರ್ತರು ಮತ್ತು ಊರವರು. ಮಗ ಮೃತನಾದ ಸುದ್ದಿಯನ್ನು ಮೊದಲು ತಲುಪಿಸಿದವರು ಎಸ್‌ಡಿಪಿಐ ಕಾರ್ಯಕರ್ತರು. ಮರಣೋತ್ತರ ಪರೀಕ್ಷೆ ಹಾಗೂ ಎಲ್ಲಾ ವಿಧಿ ವಿಧಾನಗಳು ಮುಗಿದು ಮಯ್ಯತ್ತನ್ನು ಮನೆಗೆ ತಲುಪಿಸುವವರೆಗೆ ಎಲ್ಲಾ ಕಾರ್ಯಗಳನ್ನೂ ಅವರೇ ನೆರವೇರಿಸಿದ್ದರು. ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಜಲೀಲ್ ಕೃಷ್ಣಾಪುರ, ಇತರ ನಾಯಕರಾದ ಅಬೂಬಕರ್ ಕುಳಾಯಿ, ಶುಐಬ್ ಸುರತ್ಕಲ್, ಝೈನುದ್ದೀನ್ ಈ ಬಾರಿಯ ತಾಲೂಕು ಪಂಚಾಯತ್‌ನಲ್ಲಿ ಸ್ಪರ್ಧಿಸಿದ್ದ ಎಸ್‌ಡಿಪಿಐ ಅಭ್ಯರ್ಥಿ ನಝೀರ್ ಕಿನ್ನಿಪದವು ಹಾಗೂ ಇನ್ನು ಕೆಲವರು ಬಹಳ ಪರಿಶ್ರಮಪಟ್ಟಿದ್ದರು. ಅವರು ಮಾಡಿದ ಸಹಾಯವನ್ನು ಮರೆಯುವುದು ಅಸಾಧ್ಯ. ಅವರ ಪರಿಶ್ರಮದಲ್ಲಿ ಯಾವುದೇ ಸ್ವಾರ್ಥ ಕಂಡು ಬರಲಿಲ್ಲ.

**ಪ್ರಸ್ತುತ: ನಿಮಗೆ ಪರಿಹಾರ ದೊರಕಿದೆಯೇ?**

ಖಾದರ್: 7 ಲಕ್ಷ ರೂ. ಪರಿಹಾರವನ್ನು ಕಂಪೆನಿ ಪಾಸು ಮಾಡಿದೆ. ಕೆಲವು ದೃಢೀಕರಣ ಪತ್ರಗಳನ್ನು ಸಲ್ಲಿಸಿದ ಬಳಿಕ ಪರಿಹಾರ ಕೈ ತಲುಪುವ ಭರವಸೆ ಇದೆ.

**ಪ್ರಸ್ತುತ: ಕಂಪೆನಿಯ ಬಗ್ಗೆ ನಿಮ್ಮ ಅಭಿಪ್ರಾಯ?**

ಖಾದರ್: ಘಟನೆಯ ನಂತರ ಪರಿಹಾರ ಹಾಗೂ ಇನ್ನಿತರ ವಿಷಯಗಳಲ್ಲಿ ಕಂಪೆನಿ ಉತ್ತಮ ರೀತಿಯಲ್ಲಿ ವ್ಯವಹರಿಸಿದೆ. ಈ ಬಗ್ಗೆ ನಮಗೆ ಅಸಮಾಧಾನವಿಲ್ಲ.

ಆದರೆ ಘಟನೆ ನಡೆದ ದಿನ ಕಂಪೆನಿ ನಮಗೆ ಮಾಹಿತಿಯನ್ನು ನೀಡಿರದಿರುವುದು ಮಾತ್ರ ಖೇದಕರ. ಮಗನನ್ನು 8 ಗಂಟೆಯವರೆಗೂ ಕಾಣದಾದಾಗ ನಾವು ಕಂಪೆನಿಗೆ ಫೋನ್ ಮಾಡಿದೆವು. ಆದರೆ ಆ ಕಡೆಯಿಂದ ಫೋನ್ ಎತ್ತಿದ ವ್ಯಕ್ತಿ 'ಸಿರಾಜ್‌ನ ಬಗ್ಗೆ ತಿಳಿದಿಲ್ಲ. ನಾವು ನೈಟ್ ಶಿಫ್ಟ್‌ನವರು' ಎಂದು ಪ್ರತಿಕ್ರಿಯಿಸಿದ್ದರು. ಈ ಸ್ಫೋಟದ ಸದ್ದಿನಿಂದ ಇಡೀ ಬಜ್ಪೆ ಪರಿಸರವೇ ನಡುಗಿರುವಾಗ ಅದೇ ಕಂಪೆನಿಯಲ್ಲಿ ಕೆಲಸ

ಮಾಡುವವರಿಗೆ ತಿಳಿಯದಾಗುವುದು ಅಸಾಧ್ಯದ ಮಾತಾಗಿದೆ.

ಇನ್ನೊಂದು ವಿಷಯವೆಂದರೆ ಸ್ಫೋಟವು ಹೇಗೆ ನಡೆಯಿತು ಎಂಬ ಬಗ್ಗೆ ಕಂಪೆನಿ ನಮಗೆ ಸರಿಯಾದ ವರದಿ ನೀಡಬೇಕಾಗಿದೆ. ಕಂಪೆನಿಯವರು 'ಸ್ಫೋಟದ ಬಗ್ಗೆ ನಮಗೇ ಸರಿಯಾಗಿ ಮಾಹಿತಿಯಿಲ್ಲ, ಇದು ಆಕಸ್ಮಿಕ ಘಟನೆಯಾಗಿದೆ' ಎನ್ನುತ್ತಿದ್ದಾರೆ.

ಸ್ಫೋಟಗೊಳ್ಳದ ಸ್ಫೋಟಕಗಳನ್ನು ನಿಷ್ಕ್ರಿಯಗೊಳಿಸುವುದು ನನ್ನ ಮಗನ ಕೆಲಸದ ವ್ಯಾಪ್ತಿಗೆ ಬರುವುದಿಲ್ಲ. ಅದಕ್ಕಾಗಿ ಬೇರೆಯೇ ಕಾರ್ಮಿಕರಾಗಿದ್ದಾರೆ. ಅವರಲ್ಲಿ ಯಾವೊಬ್ಬ ಕಾರ್ಮಿಕನಿಗೂ ಯಾವುದೇ ಅಪಾಯ ಸಂಭವಿಸಿಲ್ಲ. ಆದುದರಿಂದ ಈ ಸ್ಫೋಟದ ಬಗ್ಗೆ ಸರಿಯಾದ ತನಿಖೆ ನಡೆಸಿ ಕಂಪೆನಿ ನಮಗೆ ಉತ್ತರಿಸಬೇಕೆಂಬುದು ನಮ್ಮ ಕುಟುಂಬದ ಆಗ್ರಹವಾಗಿದೆ.

**ಪಿಯುಸಿ ಪ್ರತಿಭಾನ್ವಿತ**



ಮಂಗಳೂರಿನ ಸಂತ ಅಲೋಶಿಯಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಮುಹಮ್ಮದ್ ಝೂಹಿದ್ ಸಿದ್ದೀಕಿ ಪಿಯುಸಿ ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಶೇ.84.33 ಫಲಿತಾಂಶ ದಾಖಲಿಸಿದ್ದಾರೆ.

ಒಟ್ಟು 506 ಅಂಕ ಪಡೆದಿರುವ ಇವರು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಇವರು ಮೌಲಾನಾ ತೌಹೀದುರ್ರಹ್ಮಾನ್ ಮತ್ತು ಫರೀದಾ ಅಸ್ಸಾದಿ ದಂಪತಿಯ ಪುತ್ರ.

# ಜಿದ್ದಾ: ಐಎಫ್‌ಎಫ್‌ನಿಂದ ಕ್ರೀಡಾಕೂಟ





1.ಕ್ರೀಡಾಕೂಟದಲ್ಲಿ ಆಯೋಜಿಸಲಾಗಿದ್ದ ಓಟದ ಸ್ಪರ್ಧೆಯ ಒಂದು ನೋಟ. 2. ಕ್ರೀಡಾ ವಿಜೇತರು.

ಜಿದ್ದಾ (ಸೌದಿ ಅರೇಬಿಯಾ): ಇಂಡಿಯಾ ಫ್ರೆಟರ್ನಿಟಿ ಫೋರಂ(ಐಎಫ್‌ಎಫ್) ಕರ್ನಾಟಕ ಚಾಪ್ಟರ್ 'ಗ್ರೌಂಡ್ ಚಲೋ ಸ್ಪೋರ್ಟ್ಸ್ ಮೀಟ್-2011' ಎಂಬ ಬ್ಯಾನರ್‌ನಡಿಯಲ್ಲಿ ಕ್ರೀಡಾಕೂಟವನ್ನು ಜೂನ್ 3ರಂದು ಇಲ್ಲಿನ ಬದ್ರ್ ಬೇಕರಿಯ ಬಳಿ ಇರುವ ಅಬ್ದುಲ್ ಅಝೀಝ್ ಮೈದಾನದಲ್ಲಿ ಆಯೋಜಿಸಿತ್ತು.

ಮಕ್ಕಾ ಮತ್ತು ಜಿದ್ದಾದಲ್ಲಿರುವ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳ ಕ್ರೀಡಾಪಟುಗಳು ಈ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದರು.

ಕ್ರೀಡಾಕೂಟವು ಹಗ್ಗ ಜಗ್ಗಾಟ, 4 100 ರಿಲೇ, 100 ಮೀ. 200 ಮೀ. 400 ಮೀ. ಮತ್ತು 1500 ಮೀ. ಓಟದ ಸ್ಪರ್ಧೆಗಳನ್ನೊಳಗೊಂಡಿತ್ತು.

ದೊಡ್ಡ ಪ್ರೇಕ್ಷಕ ವರ್ಗವು ಈ ಕ್ರೀಡಾಕೂಟಕ್ಕೆ ಸಾಕ್ಷಿಯಾಯಿತು. ಐಎಫ್‌ಎಫ್ ಜಿದ್ದಾ ಸಂಯೋಜಕ ಕೇರಳದ ಅಶ್ರಫ್ ಮುರಯವೂರ್ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಈ ಬಳಿಕ ಮಾತನಾಡಿದ ಅವರು, ಕ್ರೀಡೆ, ವ್ಯಾಯಾಮದ ಮಹತ್ವವನ್ನು ವಿವರಿಸಿದರು.

ಪಾಂಡ ಹೈಪರ್ ಮಾರ್ಕೆಟ್‌ನ ಮ್ಯಾನೇಜರ್ ರಹ್ಮಾನ್ ಓಮರ್, ಐಎಫ್‌ಎಫ್ ಕ್ರೀಡಾ ಸಂಯೋಜಕ ಶಂಸುದ್ದೀನ್ ಕೇರಳ ಕ್ರೀಡಾ ವಿಜೇತರಿಗೆ ಬಹುಮಾನ ವಿತರಿಸಿದರು.

ಮುದಸ್ಸರ್ ಅಕ್ಕರಂಗಡಿ ಸ್ವಾಗತಿಸಿ, ಹುಸೈನ್ ಜೋಕಟ್ಟೆ ವಂದಿಸಿದರು. ನದೀಮ್ ಹಳೆಯಂಗಡಿ ಕಾರ್ಯಕ್ರಮ ನಿರೂಪಿಸಿದರು.

## ■ರಾಜಸ್ಥಾನ: ಕ್ಯಾಂಪಸ್ ಫ್ರಂಟ್ ವಿದ್ಯಾರ್ಥಿ ಸಮಾವೇಶ

ಕೋಟ (ರಾಜಸ್ಥಾನ): ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ವಿದ್ಯಾರ್ಥಿ ಸಮಾವೇಶವು ಇತ್ತೀಚೆಗೆ ರಾಜಸ್ಥಾನದ ಕೋಟದಲ್ಲಿ ನಡೆಯಿತು.

ರಾಜ್ಯದ ಹಲವು ಜಿಲ್ಲೆಗಳಿಂದ 70ಕ್ಕೂ ಅಧಿಕ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ರಾಜಸ್ಥಾನ ರಾಜ್ಯಾಧ್ಯಕ್ಷ ಆಸಿಫ್ ಮಿರ್ಝಾ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಕ್ಯಾಂಪಸ್ ಫ್ರಂಟ್ ರಾಜ್ಯಾಧ್ಯಕ್ಷ ಅನೀಸುಜ್ಜಮಾನ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಬ್ದುಲ್ ರವೂಫ್ ಮತ್ತು ಇತರರು ಉಪಸ್ಥಿತರಿದ್ದರು.

## ■ಚೆನ್ನರಾಯಪಟ್ಟಣ: 'ಬಾ ಶಾಲೆಗೆ' ಕಾರ್ಯಕ್ರಮ



ಚೆನ್ನರಾಯಪಟ್ಟಣ: 'ಬಾ ಶಾಲೆಗೆ' ರಾಷ್ಟ್ರೀಯ ಅಭಿಯಾನದ ವತಿಯಿಂದ ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಇತ್ತೀಚೆಗೆ ಇಲ್ಲಿನ ಶಾದಿ ಮಹಲ್‌ನಲ್ಲಿ ಕೇರಿಯರ್ ಗೈಡೆನ್ಸ್ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ 60 ಶೇಕಡಕ್ಕೂ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಯಿತು.

ಕ್ಯಾಂಪಸ್ ಫ್ರಂಟ್ ಹಾಸನ ಜಿಲ್ಲಾಧ್ಯಕ್ಷ ಶಜೀಲ್, ಸರಕಾರಿ ಉರ್ದು ಶಾಲಾ ಶಿಕ್ಷಕಿ ಆವಿಯಾರುಝ್ ಅಹ್ಮದ್, ಶಿಕ್ಷಣಾಧಿಕಾರಿ ಮತೀನ್, ಕ್ಯಾಂಪಸ್ ಫ್ರಂಟ್ ರಾಜ್ಯ ಸಮಿತಿ ಸದಸ್ಯ ಝುಬೀ ಅಹ್ಮದ್, ಎಸ್‌ಡಿಪಿಐ ಪ್ರಧಾನ ಕಾರ್ಯದರ್ಶಿ ಸೂಫಿ ಇಬ್ರಾಹೀಂ, ಪಾಪ್ಯುಲರ್ ಫ್ರಂಟ್ ಜಿಲ್ಲಾ ಸಮಿತಿ ಸದಸ್ಯ ಫರೀದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಲಈಕ್ ಸ್ವಾಗತಿಸಿ, ರಹ್ಮತುಲ್ಲಾ ವಂದಿಸಿದರು ಮತ್ತು ನಾಸಿರ್ ಹಾಗೂ ಉಮರ್ ಕಾರ್ಯಕ್ರಮ ನಿರೂಪಿಸಿದರು.

## ■ರಾಮನಗರದಲ್ಲಿ ಕೆರಿಯರ್ ಗೈಡೆನ್ಸ್



ರಾಮನಗರ: ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ, ರಾಮನಗರ ಜಿಲ್ಲಾ ಘಟಕದ ವತಿಯಿಂದ ಇತ್ತೀಚೆಗೆ ಅಲ್ ಅಮೀನ್ ಹೈಸ್ಕೂಲ್ ಆ್ಯಂಡ್ ಪಿಯು ಕಾಲೇಜ್‌ನಲ್ಲಿ ಕೇರಿಯರ್ ಗೈಡೆನ್ಸ್ ಕಾರ್ಯಕ್ರಮ ನಡೆಯಿತು.

ಕ್ಯಾಂಪಸ್ ಫ್ರಂಟ್ ಮಾಜಿ ರಾಷ್ಟ್ರೀಯ ಸಮಿತಿ ಸದಸ್ಯ ಮತೀನುದ್ದೀನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಲ್‌ಅಮೀನ್ ಶಾಲೆಯ ಕಾರ್ಯದರ್ಶಿ ಮೇಜರ್ ಫರೀದ್ ಸಾಬ್ ಇಸ್ಲಾಮ್‌ನಲ್ಲಿ ವಿದ್ಯಾಭ್ಯಾಸದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಕ್ಯಾಂಪಸ್ ಫ್ರಂಟ್ ರಾಜ್ಯ ಸಮಿತಿ ಸದಸ್ಯ ಸಲಾಹುದ್ದೀನ್, ಅಬ್ರಾರ್ ಪಾಶ ಕಾರ್ಯಕ್ರಮದಲ್ಲಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಸಯ್ಯದ್ ಮತೀನ್ ಸ್ವಾಗತಿಸಿ ಜಂಟಿ ಕಾರ್ಯದರ್ಶಿ ಶಬಾರುಝ್ ವಂದಿಸಿದರು.

## ■ಕೋಲಾರ: ವಿದ್ಯಾರ್ಥಿಗಳಿಗೆ ಮಾಹಿತಿ ಶಿಬಿರ

ಕೋಲಾರ: ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾದ ವತಿಯಿಂದ ಇತ್ತೀಚೆಗೆ ಕೋಲಾರದಲ್ಲಿ ಕೇರಿಯರ್ ಗೈಡೆನ್ಸ್ ಕಾರ್ಯಕ್ರಮ ನಡೆಯಿತು.

ಕ್ಯಾಂಪಸ್ ಫ್ರಂಟ್ ರಾಜ್ಯ ಉಪಾಧ್ಯಕ್ಷ ಶಮೀರ್ ಪಾಶ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಷ್ಟ್ರೀಯ ಕೋಶಾಧಿಕಾರಿ ಅಬ್ದುಲ್ ರಹ್ಮಾನ್ ಪಿಯುಸಿ ವಿದ್ಯಾಭ್ಯಾಸದ ಬಗ್ಗೆ ಹಾಗೂ ನವೀದ್ ಪಾಶ ಐಟಿಐ ಮತ್ತು ಡಿಪ್ಲೊಮಾ ಕೋರ್ಸುಗಳ ಬಗ್ಗೆ ಹಾಗೂ ಕೋಲಾರ ಜಿಲ್ಲಾಧ್ಯಕ್ಷ ಮುಹಮ್ಮದ್ ಇಮ್ರಾನ್ ವೃತ್ತಿಪರ ಕೋರ್ಸುಗಳ ಬಗ್ಗೆ ಮಾಹಿತಿ ನೀಡಿದರು.

## ■ ಇ.ಅಬೂಬಕ್ಕರ್‌ರಿಗೆ ಮೈಸೂರು ಜಿಲ್ಲಾ ನಾಯಕರಿಂದ ಅಭಿನಂದನೆ



ಮೈಸೂರು: ಇತ್ತೀಚೆಗೆ ಬೆಂಗಳೂರಿನ ಹೊಂಬೇಗೌಡ ಮೈದಾನದಲ್ಲಿ ನೂತನವಾಗಿ ಆಯ್ಕೆಯಾದ ಎಸ್‌ಡಿಪಿಐ ರಾಷ್ಟ್ರೀಯ ನಾಯಕರಿಗೆ ನಡೆದ ಅಭಿನಂದನಾ ಸಭೆಯಲ್ಲಿ ಎಸ್‌ಡಿಪಿಐ ಮೈಸೂರು ಜಿಲ್ಲಾ ಘಟಕವು ಪಕ್ಷದ ಅಧ್ಯಕ್ಷ ಇ.ಅಬೂಬಕ್ಕರ್‌ರಿಗೆ ಟಿಪ್ಪು ಪೇಟ ಮತ್ತು ಖಡ್ಗವನ್ನು ನೀಡಿ ಅಭಿನಂದಿಸಿತು.

ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾಧ್ಯಕ್ಷ ಫೈರೋಝ್, ಸಿ.ಆರ್.ಅಸೆಂಬ್ಲಿ ಅಧ್ಯಕ್ಷ ತಬ್ರೇಝ್ ಸೇಠ್ ಹಾಗೂ ಇತರ ಜಿಲ್ಲಾ ನಾಯಕರು ಉಪಸ್ಥಿತರಿದ್ದರು.

## ■ ಬಂಟ್ವಾಳ: ಎಸ್‌ಡಿಪಿಐನಿಂದ ಪುಸ್ತಕ ವಿತರಣೆ



ಬಂಟ್ವಾಳ: ಸೋಶಿಯಲ್ ಡೆಮೊಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ಇಲ್ಲಿನ ಮೈಂದಾಲದಲ್ಲಿ ಬಡ ವಿದ್ಯಾರ್ಥಿಗಳಿಗೆ ಇತ್ತೀಚೆಗೆ ಪುಸ್ತಕ ಹಾಗೂ ಫೀಸ್ ವಿತರಣೆ ಮಾಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್.ಡಿ.ಪಿ.ಐ ದ.ಕ ಜಿಲ್ಲಾಧ್ಯಕ್ಷ ಅಬ್ದುಲ್ ಜಲೀಲ್.ಕೆ ವಹಿಸಿದ್ದರು. ಮುಖ್ಯ ಬಾಷಣಕಾರರಾಗಿ ಎಸ್.ಡಿ.ಪಿ.ಐ ದ.ಕ ಕಾರ್ಯದರ್ಶಿಗಳಾದ ಸಲೀಂ ಗುರುವಾಯನಕೆರೆ ಆಗಮಿಸಿದ್ದರು.

ಮುಖ್ಯ ಅಥಿತಿಗಳಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ನಾವೂರು ಇದರ ವೈಧ್ಯಾಧಿಕಾರಿ ಡಾ। ಜೀವನ್ ಶೆಟ್ಟಿ, ಎಸ್.ಡಿ.ಪಿ.ಐ ಬಂಟ್ವಾಳ ವಿಧಾನಸಭಾ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಇಸ್ಮಾಯಿಲ್ ಆಲಡ್ಕ, ಸುದಾ ಬೀಡಿ ಮಾಲಕ ಉಮರಬ್ಬ, ಎಸ್.ಡಿ.ಪಿ.ಐ ಬಂಟ್ವಾಳ ಪುರಸಭೆ ಪ್ರಧಾನ ಕಾರ್ಯದರ್ಶಿ ಯೂಸುಫ್ ಆಲಡ್ಕ, ಎಸ್.ಡಿ.ಪಿ.ಐ ಮೈಂದಾಲ ಘಟಕಾಧ್ಯಕ್ಷ ಅಬ್ದುಲ್ ಜಬ್ಬಾರ್ ಮೈಂದಾಲ ಆಗಮಿಸಿದ್ದರು.

ಸುಮಾರು 162 ಮಕ್ಕಳಿಗೆ ಪುಸ್ತಕ ಮತ್ತು 8 ಮಕ್ಕಳಿಗೆ ಸ್ಕಾಲರ್‌ಶಿಪ್ ವಿತರಿಸಲಾಯಿತು. ಶರೀಫ್ ಪೆರ್ಲ ಸ್ವಾಗತಿಸಿ, ಫಹಾದ್ ವಂದಿಸಿದರು ಮತ್ತು ಶರೀಫ್ ಅಗ್ರಹಾರ ಕಾರ್ಯಕ್ರಮ ನಿರೂಪಿಸಿದರು.

## ■ ಮೈಸೂರಿನಲ್ಲಿ ಸದಸ್ಯತ್ವ ಅಭಿಯಾನ ಕಾರ್ಯಕ್ರಮ



ಮೈಸೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ನರಸಿಂಹರಾಜ ಅಸೆಂಬ್ಲಿ ವತಿಯಿಂದ ಇತ್ತೀಚೆಗೆ ಇಲ್ಲಿನ ಹಲೀಮ್ ನಗರದಲ್ಲಿ ಸದಸ್ಯತ್ವ ಅಭಿಯಾನ ಕಾರ್ಯಕ್ರಮವನ್ನು ನಡೆಸಲಾಯಿತು.

ಸುಮಾರು 400 ಮಂದಿ ಈ ಕಾರ್ಯಕ್ರಮದಲ್ಲಿ ಪಕ್ಷವನ್ನು ಸೇರಿದರು. ಬೀಡಿ ಮಜ್ದೂರ್ ಯೂನಿಯನ್‌ನ ಅಧ್ಯಕ್ಷ ಕೆ.ಟಿ.ಶೌಕತ್, ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಫೈರೋಝ್, ಜಿಲ್ಲಾ ಕಾರ್ಯದರ್ಶಿ ಮತೀನ್ ಬೇಗ್, ಕೋಶಾಧಿಕಾರಿ ಫಝುಲುಲ್ಲಾ, ಜಿಲ್ಲಾ ಸಮಿತಿ ಸದಸ್ಯ ಅಕ್ರಮ್ ಶರೀಫ್, ಎನ್.ಆರ್.ಅಸೆಂಬ್ಲಿ ಉಪಾಧ್ಯಕ್ಷ ಮುಹಮ್ಮದ್ ರಿಯಾಝ್, 44ನೆ ವಾರ್ಡ್ ಅಧ್ಯಕ್ಷ ಶಮೀರ್ ಅಹ್ಮದ್, ಸಮಾಜ ಸೇವಕ ಇಜಾಝ್ ಅಹ್ಮದ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ■ ಶಿವಮೊಗ್ಗದಲ್ಲಿ ವಿದ್ಯಾರ್ಥಿಗಳಿಗೆ ಸನ್ಮಾನ



ಶಿವಮೊಗ್ಗ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಶಿವಮೊಗ್ಗ ಜಿಲ್ಲಾ ಸಮಿತಿ ವತಿಯಿಂದ ಸ್ಕೂಲ್ ಚಲೋ ಅಭಿಯಾನದ ಪ್ರಯುಕ್ತ ಉಚಿತ ಪುಸ್ತಕ ವಿತರಣೆ ಮತ್ತು ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭವನ್ನು ಇತ್ತೀಚಿಗೆ ನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಹನ್ನಾನ್ ಮಾತನಾಡಿ, ಪಕ್ಷದ ವತಿಯಿಂದ 17 ರಾಜ್ಯಗಳಲ್ಲಿ ಸ್ಕೂಲ್ ಚಲೋ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು ಪಕ್ಷವು ಪ್ರಯತ್ನಿಸುತ್ತಿದೆ. ಶಿಕ್ಷಣ ರಂಗವನ್ನು ಸಾರ್ವತ್ರಿಕಗೊಳಿಸಲು ಮತ್ತು ಅದರ ಗುಣಮಟ್ಟವನ್ನು ಹೆಚ್ಚಿಸುವ ಅಗತ್ಯವಿದೆ ಎಂದರು.

ಸಮುದಾಯವನ್ನು ಶಿಕ್ಷಣದಿಂದ ಶ್ರೀಮಂತಗೊಳಿಸುವುದು ಕಾಲದ ಅತೀ ಅಗತ್ಯ ಬೇಡಿಕೆಯಾಗಿದೆ ಎಂದು ಹೇಳಿದ ಅವರು, ಎಸ್‌ಡಿಪಿಐ ಬಡ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹಿಸುತ್ತಿದೆ ಎಂದರು.

ಎಸ್‌ಡಿಪಿಐ ರಾಜ್ಯ ಕಾರ್ಯದರ್ಶಿ ಶೇಖ್ ಸಿರಾಜ್, ಜಿಲ್ಲಾಧ್ಯಕ್ಷ ಬಾಲ ಸುಬ್ರಹ್ಮಣ್ಯಂ, ಕಾರ್ಯದರ್ಶಿ ಶೇಖ್ ಮಜೀದ್, ಸ್ವಾತಂತ್ರ್ಯ ಹೋರಾಟಗಾರ ರಂಗರಾಜ್, ಮಾಜಿ ಸೈನಿಕ ಸಾಲರ್ ಅಹ್ಮದ್, ಶ್ರೀನಿವಾಸ್ ಮೊದಲಾದವರು ಉಪಸ್ಥಿತರಿದ್ದರು.

## ■ ಶಿಕ್ಷಣ ನೈತಿಕ ಮೌಲ್ಯಗಳನ್ನು ಕಲಿಸುತ್ತದೆ: ಜಲೀಲ್ ಕೃಷ್ಣಾಪುರ

ಮಂಗಳೂರು: ವಿದ್ಯಾವಂತನಾದವನು ಜೀವನದಲ್ಲಿ ಯಶಸ್ಸು ಸಾಧಿಸಬಹುದು. ಶಿಕ್ಷಣದಿಂದ ಕೇವಲ ಉದ್ಯೋಗ ಪಡೆಯುವುದು ಮಾತ್ರ ಅಲ್ಲ. ಓರ್ವನು ತನ್ನ ಕುಟುಂಬ, ಸಮಾಜದೊಂದಿಗೆ ಹೇಗೆ ವರ್ತಿಸಬೇಕು ಎನ್ನುವ ನೈತಿಕ ಮೌಲ್ಯಗಳನ್ನು ಕೂಡ ಅದು ಕಲಿಸುತ್ತದೆ ಎಂದು ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ದ.ಕ.ಜಿಲ್ಲಾಧ್ಯಕ್ಷ ಜಲೀಲ್ ಕೃಷ್ಣಾಪುರ ಹೇಳಿದ್ದಾರೆ.

ಅವರು ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಹಳೆಯಂಗಡಿ ಗ್ರಾಮ ಸಮಿತಿ ವತಿಯಿಂದ ರವಿವಾರ ಇಂದಿರಾನಗರದ ಬಾಲವನದಲ್ಲಿ ಆಯೋಜಿಸಲಾಗಿದ್ದ ಉಚಿತ ಪುಸ್ತಕ ವಿತರಣಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು.




ಎಸ್‌ಡಿಪಿಐ ಮುಲ್ಕಿ-ಮೂಡಬಿದ್ರೆ ವಿಧಾನಸಭಾ ಕ್ಷೇತ್ರದ ಅಧ್ಯಕ ಇಸ್ಮಾಯೀಲ್ ಇಂಜಿನಿಯರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಬೊಳ್ಳೂರು ಜುಮಾ ಮಸೀದಿ ಖತೀಬರಾದ ಅಲ್‌ಹಾಜ್ ಅಝ್ಹರ್ ಫೈಝಿ ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಎಸ್‌ಡಿಪಿಐ ಮೂಲ್ಕಿ-ಮೂಡಬಿದ್ರೆ ವಿಧಾನಸಭಾ ಕ್ಷೇತ್ರದ ಕಾರ್ಯದರ್ಶಿ ಶರೀಫ್ ಮುಲ್ಕಿ, ಸಾಹುಲ್ ಹಮೀದ್ ಕದಿಕೆ ಉಪಸ್ಥಿತರಿದ್ದರು.

ಈ ಸಂದರ್ಭ ವಿವಿಧ ಶಾಲೆಯ ಒಟ್ಟು 134 ಮಂದಿ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸಲಾಯಿತು. ಸಹೀರ್ ಸ್ವಾಗತಿಸಿ, ಹಾರಿಸ್ ಇಂದಿರಾ ನಗರ ಕಾರ್ಯಕ್ರಮ ನಿರೂಪಿಸಿದರು. ಇಕ್ಬಾಲ್ ವಂದಿಸಿದರು.

## ■ ಬೆಳ್ಳಾರೆಯಲ್ಲಿ ಶ್ರಮಾದಾನ

ಬೆಳ್ಳಾರೆ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಬೆಳ್ಳಾರೆ ವಲಯದ ವತಿಯಿಂದ ಸುಬ್ರಹ್ಮಣ್ಯ ರಸ್ತೆಯ ಗೌರಿ ಹೊಳೆ ಎಂಬಲ್ಲಿ ರಸ್ತೆಗಳಲ್ಲಿದ್ದ ಹೊಂಡವನ್ನು ಮುಚ್ಚುವ ಶ್ರಮಾದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಎಸ್‌ಡಿಪಿಐ ಸುಳ್ಯ ವಿಧಾನಸಭೆಯ ಪ್ರ.ಕಾಯದರ್ಶಿ ಮಜೀದ್ ಬೆಳ್ಳಾರೆ ಶ್ರಮಾದಾನದ ನೇತೃತ್ವ ವಹಿಸಿದ್ದರು. ಇಕ್ಬಾಲ್ ಬೆಳ್ಳಾರೆ, ಫೈಝುಲ್ ಬೆಳ್ಳಾರೆ, ಝುಕರಿಯಾ, ಶಾಹಿದ್, ಬಶೀರ್ ಕೆ.ಎ, ಮುಹಮ್ಮದ್ ಎಂ., ಇಸ್ಮಾಯೀಲ್, ಶಾಫಿ ಟಿ, ಹನೀಫ್ ಎಂ, ತಾಜುದ್ದೀನ್, ಶರೀಫ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ■ ಉಪ್ಪಿನಂಗಡಿ: ಪಾಪ್ಯುಲರ್ ಫ್ರಂಟ್‌ನಿಂದ ಪುಸ್ತಕ ವಿತರಣೆ, ಪ್ರತಿಭಾ ಪುರಸ್ಕಾರ



**ಉಪ್ಪಿನಂಗಡಿ, ಜೂ. 5:** ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಹಮ್ಮಿಕೊಂಡಿರುವ ಸ್ಕೂಲ್ ಚಲೋ ಅಭಿಯಾನದ ಅಂಗವಾಗಿ ಬಡಮಕ್ಕಳಿಗೆ ಪುಸ್ತಕ ವಿತರಣೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮವು ಜೂನ್ 5ರಂದು ಉಪ್ಪಿನಂಗಡಿಯ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ನಡೆಯಿತು.

ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದ ಉಪ್ಪಿನಂಗಡಿ ಸರಕಾರಿ ಪದವಿ ಪೂರ್ವ ಕಾಲೇಜಿನ ಹಿರಿಯ ಶಿಕ್ಷಕ ಎಚ್.ಎಸ್.ಕರುಣಾಕರ ಮಾತನಾಡಿ, ಅಲ್ಪಸಂಖ್ಯಾತ ಸಮುದಾಯವು ಶೈಕ್ಷಣಿಕವಾಗಿ ಪ್ರಗತಿ ಹೊಂದಿದರೆ ಮಾತ್ರ ಸಮುದಾಯವು ಸರ್ವಾಂಗೀಣ ಪ್ರಗತಿ ಹೊಂದಲು ಸಾಧ್ಯ. ಸಂಘಸಂಸ್ಥೆಗಳು ಈ ನಿಟ್ಟಿನಲ್ಲಿ ಹೆಚ್ಚು ಕಾರ್ಯೋನ್ಮುಖವಾಗಬೇಕಾಗಿದೆ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ನೀಡಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಉಪ್ಪಿನಂಗಡಿ ಘಟಕದ ಅಧ್ಯಕ್ಷ ಮುಸ್ತಫಾ ಲತೀಫಿ ವಹಿಸಿದ್ದರು. ವೇದಿಕೆಯಲ್ಲಿ ಪಾಪ್ಯುಲರ್ ಫ್ರಂಟ್ ಜಿಲ್ಲಾ ಸಮಿತಿ ಸದಸ್ಯ ಅಬ್ದುರ್ರಝಾಕ್ ಸೀಮಾ, ಸಮಾಜ ಪರಿವರ್ತನೆ ಚಳವಳಿಗಾರ ಪಿ.ಡೀಯಕ್ಕ, ಬಜತ್ತೂರು ಗ್ರಾಮ ಪಂಚಾಯತ್‌ನ ಮಾಜಿ ಸದಸ್ಯೆ ಪ್ರೆಸಿಲ್ಲಾ ಡಿಸೋಜ, ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾದ ರಾಜ್ಯ ಕಾರ್ಯದರ್ಶಿ ತುಫೈಲ್ ಮುಂತಾದವರು ಉಪಸ್ಥಿತರಿದ್ದರು. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ವಲಯ ಸಮಿತಿ ಸದಸ್ಯ ಜುನೈದ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ವಲಯ ಸಮಿತಿ ಸದಸ್ಯ ಅಯ್ಯೂಬ್ ಅಗ್ನಾಡಿ ಸ್ವಾಗತಿಸಿದರು. ರಫೀಕ್ ಕೊಡಿಪ್ಪಾಡಿ ಕಾರ್ಯಕ್ರಮ ನಿರೂಪಿಸಿ, ಮುಸ್ತಫಾ ಪೆರ್ನೆ ಧನ್ಯವಾದ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಉಪ್ಪಿನಂಗಡಿ ಪರಿಸರದ 120 ಮಕ್ಕಳಿಗೆ ಉಚಿತ ಪುಸ್ತಕಗಳನ್ನು ವಿತರಿಸಲಾಯಿತು. ಕಳೆದ ಏಳನೇ ತರಗತಿ, ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಾದ ಅಮೀರಾ ಸಂಶಾದ್ (ಏಳು), ಮುಹಮ್ಮದ್ ಇಶ್ರತ್ (ಎಸ್ಸೆಸ್ಸೆಲ್ಸಿ), ಹಬೀಬಾ (ಎಸ್ಸೆಸ್ಸೆಲ್ಸಿ), ಪ್ರದೀಪ್ ಶೆಟ್ಟಿ (ಪಿಯುಸಿ), ಹಮೀದಾ (ಪಿಯುಸಿ) ಇವರಿಗೆ 'ಪಾಪ್ಯುಲರ್ ಫ್ರಂಟ್ ಟ್ಯಾಲೆಂಟ್ ಅವಾರ್ಡ್-2011' ನೀಡಿ ಸನ್ಮಾನಿಸಲಾಯಿತು.

## ■ ಮೈಸೂರಿನಲ್ಲಿ 'ಇಸ್ಲಾಮನ್ನು ಅರಿಯಿರಿ' ಕಾರ್ಯಕ್ರಮ

ಮೈಸೂರು: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ವತಿಯಿಂದ ಇತ್ತೀಚೆಗೆ ಇಲ್ಲಿನ ಉದಯಗಿರಿಯ ಸೈಬಾನ್ ಫಂಕ್ಷನ್ ಹಾಲ್‌ನಲ್ಲಿ 'ಇಸ್ಲಾಮನ್ನು ಅರಿಯಿರಿ' ಎಂಬ ವಿಷಯದ ಮೇಲೆ ಸಾರ್ವಜನಿಕ ಮಾಹಿತಿ ಸಭೆಯನ್ನು ಆಯೋಜಿಸಲಾಯಿತು.

ಮಹಿಳೆಯರನ್ನೊಳಗೊಂಡಂತೆ ಕಾರ್ಯಕ್ರಮದಲ್ಲಿ 500ಕ್ಕೂ ಅಧಿಕ ಜನರು ಪಾಲ್ಗೊಂಡಿದ್ದರು.

ಹಾಫಿಝ್ ಕಲೀಮ್, ಹಾಫಿಝ್ ಸಮೀವುಲ್ಲಾ ಮತ್ತು ಆಝುಂ ಪಾಶ ಕಾರ್ಯಕ್ರಮದಲ್ಲಿ ತರಗತಿ ನೀಡಿದರು.

## ■ ಸಿಡಿಲು ಬಡಿದು ಮನೆಗೆ ಹಾನಿ: ಬಡ ಕುಟುಂಬಕ್ಕೆ ಪಾಪ್ಯುಲರ್ ಫ್ರಂಟ್ ನೆರವು

ಬೆಳ್ಳಾರೆ: ಸಿಡಿಲು ಬಡಿತಕ್ಕೆ ಮನೆ ಹಾನಿಗೊಂಡ ನೆಟ್ಟಾರಿನ ಅಬ್ದುಲ್ ರಹಿಮಾನ್ ಕುಟುಂಬಕ್ಕೆ ಪಾಪ್ಯುಲರ್ ಫ್ರಂಟ್ ಬೆಳ್ಳಾರೆ ವಲಯ ತುರ್ತು ಪರಿಹಾರವನ್ನು ನೀಡಿದೆ. ಪಾಪ್ಯುಲರ್ ಫ್ರಂಟ್ ಬೆಳ್ಳಾರೆ ವಲಯಾಧ್ಯಕ್ಷ ಅಶ್ರಫ್ ಮಾಸ್ತಿಕಟ್ಟೆ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಎಸ್‌ಡಿಪಿಐ ಸುಳ್ಯ ವಿಧಾನಸಭೆಯ ಪ್ರಧಾನ ಕಾರ್ಯದರ್ಶಿ ಮಜೀದ್ ಬೆಳ್ಳಾರೆ, ಕಾರ್ಯದರ್ಶಿ ಇಕ್ಬಾಲ್ ಬೆಳ್ಳಾರೆ, ಸಮಿತಿ ಸದಸ್ಯ ಬಶೀರ್ ಕೆ.ಎ, ಅಬ್ಬಾಸ್ ಯು., ಶಾಹಿದ್ ಎಂ ಮತ್ತು ಗ್ರಾಮ ಪಂಚಾಯತ್ ಸದಸ್ಯ ಕಲಂದರ್ ನವಾಝ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ■ಬೆಳ್ಳಾರೆ: 'ಸ್ಕೂಲ್ ಚಲೋ' ಕಾರ್ಯಕ್ರಮ



ಬೆಳ್ಳಾರೆ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ರಾಷ್ಟ್ರೀಯ ಮಟ್ಟದ ಸ್ಕೂಲ್ ಚಲೊ ಅಭಿಯಾನದ ವತಿಯಿಂದ ಇತ್ತೀಚೆಗೆ ಬೆಳ್ಳಾರೆಯ ಮದ್ರಸಾ ಹಾಲ್‌ನಲ್ಲಿ ಪುಸ್ತಕ ವಿತರಣೆ ಹಾಗೂ ಟ್ಯಾಲೆಂಟ್ ಅವಾರ್ಡ್ ಕಾರ್ಯಕ್ರಮ ನಡೆಯಿತು.

ಎಸ್‌ಡಿಪಿಐಯ ಸುಳ್ಯ ವಿಧಾನ ಸಭಾಧ್ಯಕ್ಷ ಅಬ್ದುಲ್ ಕಲಾಂ ಕೆ. ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಬೆಳ್ಳಾರೆ ಹಿದಾಯತುಲ್ ಇಸ್ಲಾಂ ಮದರಸದ ಸದರ್ ಮುಅಲ್ಲಿಮ್ ಸಿದ್ದೀಕ್ ದಾರಿಮಿ, ಜನಪರ ಕಾರ್ಯಕ್ರಮಕ್ಕೆ ಪಾಪ್ಯುಲರ್ ಫ್ರಂಟ್‌ನೊಂದಿಗೆ ಕೈಜೋಡಿಸುವಂತೆ ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ಲತೀಫ್ ಕೆ.ಎ ಶಿಕ್ಷಣದ ಮಹತ್ವದ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕ ವಿತರಿಸಲಾಯಿತು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸ್ಥಳೀಯವಾಗಿ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡುವ ಮುಹಮ್ಮದ್ ಮಾಸ್ಟರ್‌ರನ್ನು ಸನ್ಮಾನಿಸಲಾಯಿತು.

ಪಾಪ್ಯುಲರ್ ಫ್ರಂಟ್ ಸುಳ್ಯ ಡಿವಿಶನ್ ಅಧ್ಯಕ್ಷ ಮುಸ್ತಫಾ ಪೈಚಾರ, ಕ್ಯಾಂಪಸ್ ಫ್ರಂಟ್ ರಾಜ್ಯ ಕಾರ್ಯದರ್ಶಿ ತುಫೈಲ್, ಎಸ್‌ಡಿಪಿಐ ಸುಳ್ಯ ವಿಧಾನಸಭೆಯ ಪ್ರಧಾನ ಕಾರ್ಯದರ್ಶಿ ಮಜೀದ್ ಬೆಳ್ಳಾರೆ, ಬೆಳ್ಳಾರೆ ಗ್ರಾಮಪಂಚಾಯತ್ ಸದಸ್ಯ ಖಲಂದರ್ ನವಾಝ್, ಎಸ್‌ಡಿಪಿಐ ಸುಳ್ಯ ತಾಲೂಕು ಸಮಿತಿ ಸದಸ್ಯ ಕೆ.ಮಮ್ಮಾಲಿ, ಪಾಪ್ಯುಲರ್ ಫ್ರಂಟ್ ಬೆಳ್ಳಾರೆ ವಲಯ ಪ್ರಧಾನ ಕಾರ್ಯದರ್ಶಿ ಇಕ್ಬಾಲ್ ಬೆಳ್ಳಾರೆ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇಕ್ಬಾಲ್ ಬೆಳ್ಳಾರೆ ಸ್ವಾಗತಿಸಿ, ಫೈರುಲ್ ಟಿ.ಎ ವಂದಿಸಿದರು. ಬಶೀರ್ ಕೆ.ಎ ಕಾರ್ಯಕ್ರಮ ನಿರೂಪಿಸಿದರು.

## ■ಸುಳ್ಳು ವರದಿ: ಪಾಪ್ಯುಲರ್ ಫ್ರಂಟ್ ಖಂಡನೆ

ಹೊಸದಿಲ್ಲಿ: ಪ್ಯಾರಿಸ್‌ನಲ್ಲಿ ಒಬ್ಬ ಭಾರತೀಯ ವ್ಯಕ್ತಿಯ ಬಂಧನ ಹಾಗೂ ಇಡೀ ಪ್ರಕರಣವನ್ನು ಪಾಪ್ಯುಲರ್ ಫ್ರಂಟ್‌ಗೆ ಜೋಡಿಸಿ ಸಿಎನ್‌ಎನ್-ಐಬಿಎನ್ ನ್ಯೂಸ್ ಚಾನೆಲ್ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಕಟವಾದ ಸುಳ್ಳು ವರದಿಯನ್ನು ಪಾಪ್ಯುಲರ್ ಫ್ರಂಟ್ ತೀವ್ರವಾಗಿ ಖಂಡಿಸಿದೆ.

ಪ್ಯಾರಿಸ್‌ನ ಅಧಿಕಾರಿಗಳು ಈ ಬಂಧನದ ಬಗ್ಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲದಿದ್ದರೂ, ಚಾನೆಲ್ ಮೂಲಗಳನ್ನು ಉಲ್ಲೇಖಿಸಿ ಸಂಘಟನೆಯ ಬಗ್ಗೆ ಸುಳ್ಳು ವರದಿಯನ್ನು ಪ್ರಕಟಿಸಿದೆ ಎಂದು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕೆ.ಎಂ.ಶರೀಫ್ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ■ಬೆಂಗ್ರೆ: ಎಸ್‌ಡಿಪಿಐಯಿಂದ ಪುಸ್ತಕ ವಿತರಣೆ



ಮಂಗಳೂರು: ಎಸ್‌ಡಿಪಿಐ ವತಿಯಿಂದ ಇತ್ತೀಚೆಗೆ ಇಲ್ಲಿನ ಬೆಂಗ್ರೆಯಲ್ಲಿ ಬಡ ಮಕ್ಕಳಿಗೆ ಶಾಲಾ ಪುಸ್ತಕ ಹಾಗೂ ಬ್ಯಾಗ್‌ಗಳನ್ನು ವಿತರಿಸಲಾಯಿತು.

ಝಮೀಲ್ ಬೆಂಗ್ರೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ನಾಸಿರ್, ಮಂಗಳೂರು ಸೆಂಟ್ರಲ್ ಕಮಿಟಿ ಸದಸ್ಯ ಇಬ್ರಾಹೀಂ, ಎಸ್‌ಡಿಪಿಐ ಬೆಂಗ್ರೆ ಬ್ರಾಂಚ್ ಅಧ್ಯಕ್ಷ ಇಮ್ರಾನ್, ಬೋಳಾರ ಬ್ರಾಂಚ್ ಅಧ್ಯಕ್ಷ ಕೈಫ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅನ್ಸಾರ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

### ಕ್ವಿಝ್ ಟೈಮ್-9ರ ಉತ್ತರಗಳು

| | |
|---|---|
| 1.ಕ್ರಿ.ಶ.14ನೇ ಶತಮಾನ | 6.ಸವಾಯಿ ಜಯಸಿಂಹ |
| 2.ಮೈಸೂರು | 7.ಆರ್ಗಾನ್ ಮತ್ತು ಸಾರಜನಕ |
| 3.ಮಕ್ಕಳ ಸಾಹಿತ್ಯ | 8.1765 |
| 4.ನೀರದ್ ಸಿ.ಚೌದರ್ | 9.ಕಲ್ಕತ್ತಾ ಈಜು ಕ್ಲಬ್ |
| 5.ನೆಹರೂ ಹೌಸ್ | 10.ಲಿಯಾಂಡರ್ ಪೇಸ್ |

## ■ತಬೂಕ್: ಐಎಫ್‌ಎಫ್‌ನಿಂದ ಕ್ರೀಡಾಕೂಟ

ತಬೂಕ್: ಇಂಡಿಯಾ ಫ್ರೆಟರ್ನಿಟಿ ಫಾರವ್, ತಬೂಕ್ ವತಿಯಿಂದ ಇತ್ತೀಚೆಗೆ ಇಲ್ಲಿನ ಇಶ್ತರಾಹ್ ಅಲ್ ಸರ್ವ್ಥ್‌ನಲ್ಲಿ ಕ್ರೀಡಾಕೂಟವೊಂದನ್ನು ಆಯೋಜಿಸಲಾಗಿತ್ತು.

ಭಾರತದ ವಿವಿಧ ರಾಜ್ಯಗಳ ಕ್ರೀಡಾಪಟುಗಳ ಕೂಟದಲ್ಲಿ ಪಾಲ್ಗೊಂಡಿದ್ದರು. ತಬೂಕ್‌ನ ಯುವ ಉದ್ಯಮಿ ಹಂಝಾ ಮಂಜೇರಿ ಕೂಟವನ್ನು ಉದ್ಘಾಟಿಸಿದರು.

ಹಿರಿಯರಿಗೆ ಮತ್ತು ಕಿರಿಯರಿಗಾಗಿ ಫುಟ್ಬಾಲ್, ಓಟ, ಮ್ಯೂಸಿಕ್ ಚಯರ್, ಹಗ್ಗಜಗ್ಗಾಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಕೂಟದ ಸಮಾರೋಪ ಸಮಾರಂಭವನ್ನು ತಬೂಕ್ ನಗರ ಶಾಖೆಯ ಅಧ್ಯಕ್ಷ ಸಲೀವ್ ಮುಹವ್ಮದ್ ಕಡಂಬು ಉದ್ಘಾಟಿಸಿದರು. ಐಎಫ್‌ಎಫ್ ತಬೂಕ್‌ನ ದಿಲ್ಲಿ ವಿಭಾಗದ ಅಧ್ಯಕ್ಷ ಡಾ। ನಸ್ರುಲ್ಲಾ ಬಿಹಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅಬ್ದುಲ್ ಶೇಖ್ ಫರ್ವೇಝ್ ಪವಿತ್ರ ಕುರ್‌ಆನ್ ಪಠಿಸಿದರು.

ಐಎಫ್‌ಎಫ್ ಜಿದ್ದಾ ಸಂಯೋಜಕ ಹಸೈನಾರ್ ದಾರಿಮಿ, ಸಿಸಿಡಬ್ಲ್ಯುಎ ಅಧ್ಯಕ್ಷ ಡಾ। ಶಭಿ ಥೋಮಸ್ ಮತ್ತು ಕೆಎಂಸಿಸಿ ಸದಸ್ಯ ಬಶೀರ್ ಕುಟ್ಟೈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ತಬೂಕ್ ಆ್ಯಕ್ಸೆಸ್ ಗೈಡೆನ್ಸ್ ಸೆಂಟರ್‌ನ ಅಧ್ಯಕ್ಷ ಅಲಿ ಪನೇರಿ ಸ್ವಾಗತಿಸಿ, ಕಾರ್ಯದರ್ಶಿ ಅಬ್ದುಲ್ ಮಜೀದ್ ಕನ್ನಂಗಾರ್ ವಂದಿಸಿದರು ಮತ್ತು ಇಸ್ಮಾಯೀಲ್ ಇನೋಲಿ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದ ಅಂಗವಾಗಿ ಮಹಿಳೆಯರಿಗಾಗಿ ಮಕ್ಕಳ ವಿದ್ಯಾಭ್ಯಾಸ ಹಾಗೂ ಆರೋಗ್ಯದ ಬಗ್ಗೆ ಮಾಹಿತಿ ಶಿಬಿರಗಳನ್ನು ಏರ್ಪಡಿಸಲಾಗಿತ್ತು. ನಂತರ ನಡೆದ ಸಮಾರೋಪ ಸಮಾರಂಭವು ಸಫ್ವಾನರ ಕಿರಾಅತ್‌ನೊಂದಿಗೆ ಆರಂಭವಾಯಿತು. ಸಭೆಯಅಧ್ಯಕ್ಷ ತೆಯನ್ನು ಐಎಫ್‌ಎಫ್ ಮಹಿಳಾ ವಿಭಾಗದ ಗೌರವಾಧ್ಯಕ್ಷೆ ಜೆಸೀಲ ಶೌಕತ್ ವಹಿಸಿದ್ದರು. ಐಎಫ್‌ಎಫ್ ತಬೂಕ್ ಮಹಿಳಾ ವಿಭಾಗದ ಅಧ್ಯಕ್ಷೆ ನದೀರಾ ಮುಜೀಬುರ್ರಹ್ಮಾನ್ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ತಬೂಕ್ ಕಿಂಗ್ ಫಾಹದ್ ಆಸ್ಪತ್ರೆಯ ದಂತ ವೈದ್ಯೆ ಡಾ. ಶಮಾ ರಹ್ಮಾನ್ ಮತ್ತು ತಬೂಕ್ ಇಂಟರ್‌ನ್ಯಾಶನಲ್ ಶಾಲೆಯ ಅಧ್ಯಾಪಕಿ ವಿನು ಶೋಭಿ ಥೋಮಸ್ ಆಗಮಿಸಿದ್ದರು.

ಐಎಫ್‌ಎಫ್ ತಬೂಕ್ ಮಹಿಳಾ ವಿಭಾಗದ ಕಾರ್ಯದರ್ಶಿ ನಝ್ರುತ್ ಅಬ್ದುಲ್ ಮಜೀದ್ ಕಣ್ಣಂಗಾರ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಅಂತಿಮವಾಗಿ ಕ್ರೀಡಾಕೂಟದಲ್ಲಿ ಮಹಿಳಾ ವಿಭಾಗದಲ್ಲಿ ವಿಜೇತರಾದವರಿಗೆ ಹಾಜಿರ ಜಮಾಲ್ ಸುಳ್ಯ, ಝೀನತ್ ಮುನೀರ್ ಮೂಡಬಿದ್ರೆ ಮತ್ತು ಶಂಶಾದ್ ಅಶ್ರಫ್ ಬಹುಮಾನ ವಿತರಿಸಿದರು. ಅದೇ ರೀತಿ ಜೂನಿಯರ್ ಮತ್ತು ಸೀನಿಯರ್ ವಿಭಾಗಗಳಲ್ಲಿ ವಿಜೇತರಿಗೆ ಐಎಫ್‌ಎಫ್ ತಬೂಕ್ ಟೌನ್ ಬ್ರ್ಯಾಂಚ್ ಕಾರ್ಯದರ್ಶಿ ರಶೀದ್ ಮತ್ತು ಐಎಫ್‌ಎಫ್ ತಬೂಕ್ ಟೌನ್ ಬ್ರ್ಯಾಂಚ್ ಜಂಟಿ ಕಾರ್ಯದರ್ಶಿ ಮುನೀರ್ ಮೂಡಬಿದ್ರೆ ಬಹುಮಾನ ವಿತರಿಸಿದರು.

ಭಾರತದ ವಿವಿಧ ರಾಜ್ಯಗಳ ಜನರನ್ನೊಳಗೊಂಡ ಈ ಕಾರ್ಯಕ್ರಮವು ತಬೂಕಿನ ಇತಿಹಾಸದಲ್ಲೇ ಪ್ರಥಮ ಬಾರಿಯಾಗಿದೆ.

## ■ಕತಾರ್: ಐಎಫ್‌ಎಫ್‌ನಿಂದ ಕ್ರೀಡಾಕೂಟ



ಕ್ರೀಡಾಕೂಟದಲ್ಲಿ ಆಯೋಜಿಸಲಾಗಿದ್ದ ಗ್ರಾಮೀಣ ಕ್ರೀಡೆಯೊಂದರ ದೃಶ್ಯ.

ಕತಾರ್: 'ಹೆಲ್ತಿ ಲೈಫ್, ಹೆಲ್ತಿ ನೇಶನ್' ಬ್ಯಾನರ್‌ನಡಿಯಲ್ಲಿ ಇಂಡಿಯಾ ಫ್ರೆಟರ್ನಿಟಿ ಫಾರವ್, ಕರ್ನಾಟಕ ಘಟಕದ ವತಿಯಿಂದ ಇತ್ತೀಚೆಗೆ ಇಲ್ಲಿ ಕ್ರೀಡಾಕೂಟವೊಂದನ್ನು ನಡೆಸಲಾಯಿತು.

ಕ್ರೀಡಾಕೂಟದ ಅಂಗವಾಗಿ ಮಡಕೆ ಒಡೆಯುವ ಸ್ಪರ್ಧೆ, ಓಟ, ತ್ರೀ ಲೆಗ್ ರೇಸ್, ಕಬಡ್ಡಿ, ಕ್ವಿಝ್ ಹಾಗೂ ಹಲವು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಮಹಿಳೆಯರಿಗೆ ಹಾಗೂ ಮಕ್ಕಳಿಗೂ ಕೆಲವು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಐಎಫ್‌ಎಫ್ ಪ್ರಧಾನ ಕಾರ್ಯದರ್ಶಿ ಮುಹಮ್ಮದ್ ರಶೀದ್ ವಿಜೇತರಿಗೆ ಪ್ರಶಸ್ತಿ ಹಂಚಿದರು ಮತ್ತು ಎಲ್ಲಾ ಸ್ಪರ್ಧಿಗಳನ್ನು ಅಭಿನಂದಿಸಿದರು.

ಕ್ರಿಡಾಕೂಟದ ನಿರ್ದೇಶಕ ಶಮ್ಸುದ್ದೀನ್ ಸ್ವಾಗತಿಸಿದರು.

## ■ಅಂಗರಗುಂಡಿ: ಎಸ್‌ಡಿಪಿಐಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ



ಮಂಗಳೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ವತಿಯಿಂದ ಇಲ್ಲಿನ ಅಂಗರಗುಂಡಿಯ ಅಡ್ಕ ಕಮ್ಯುನಿಟಿ ಹಾಲ್‌ನಲ್ಲಿ ಇತ್ತೀಚೆಗೆ ಪುಸ್ತಕ ವಿತರಣಾ ಕಾರ್ಯಕ್ರಮ ನಡೆಯಿತು.

ಸುಮಾರು 47 ಬಡ ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮದಲ್ಲಿ ಪುಸ್ತಕ ವಿತರಣೆ ಮಾಡಲಾಯಿತು. ಡಿಸ್ಟಿಂಕ್ಷನ್‌ನೊಂದಿಗೆ ಪಾಸಾದ ವಿದ್ಯಾರ್ಥಿಗಳನ್ನು ಇಲ್ಲಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಬಡ ವ್ಯಕ್ತಿಯೊಬ್ಬರಿಗೆ ಮನೆ ಕಟ್ಟುವುದಕ್ಕಾಗಿ ಎಸ್‌ಡಿಪಿಐ ಆರ್ಥಿಕ ನೆರವು ನೀಡಿತು.

ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಜಲೀಲ್ ಕೃಷ್ಣಾಪುರ, ಕಾರ್ಯದರ್ಶಿ ಸಲೀಂ ಗುರುವಾಯನಕೆರೆ, ಜೋಕಟ್ಟೆ ಗ್ರಾಮ ಪಂಚಾಯತ್ ಅಧ್ಯಕ್ಷ ಶೇಕುಞ್ಞಿ, ಅಂಗರಗುಂಡಿ ಮುಹ್ಯುದ್ದೀನ್ ಜುಮ್ಮಾ ಮಸ್ಜಿದ್‌ನ ಅಧ್ಯಕ್ಷ ಇ.ಕೆ.ಇಬ್ರಾಹೀಂ, ಅಂಗರಗುಂಡಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಪಿ.ಟಿ.ಗೌಡ, ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಹೈದರ್, ಸಮಾಜ ಸೇವಕ ಇಲ್ಯಾಸ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ■ಉಚಿತ ಪುಸ್ತಕ ವಿತರಣೆ

ಬೆಳ್ತಂಗಡಿ: ಸೋಶಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ ಮದ್ದಡ್ಕ ವಲಯದ ವತಿಯಿಂದ ಮೇ 29ರಂದು ಬಡ ಮಕ್ಕಳಿಗೆ ಪುಸ್ತಕ ವಿತರಣೆ ಕಾರ್ಯಕ್ರಮವನ್ನು ನಡೆಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್‌ಡಿಪಿಐ ಬೆಳ್ತಂಗಡಿ ವಿಧಾನಸಭಾಧ್ಯಕ್ಷ ಅಕ್ಬರ್ ಬೆಳ್ತಂಗಡಿ ವಹಿಸಿದ್ದರು. ಕುವೆಟ್ಟು ಗ್ರಾಮ ಪಂಚಾಯತ್ ಸದಸ್ಯ ಅಲ್ಫೋನ್ಸ್ ಫ್ರಾಂಕೊ, ಎಸ್‌ಡಿಪಿಐ ಮದ್ದಡ್ಕ ವಲಯಾಧ್ಯಕ್ಷರಾದ ಯೂನುಸ್ ಅಮೀನ್ ಹಾಗೂ ಪ್ರಧಾನ ಕಾರ್ಯದರ್ಶಿ ಮಹಮ್ಮದ್‌ಸ್ವಾಲಿಹ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅಸ್ಲಾಂ ಮದ್ದಡ್ಕ ಸ್ವಾಗತಿಸಿ, ಸಾದಿಕ್ ಸಾಗರ್ ವಂದಿಸಿದರು, ನೌಷದ್ ನಿರೂಪಿಸಿದರು.

## ■ಪಿಂಚಣಿ ಸರ್ಟಿಫಿಕೇಟ್ ವಿತರಣೆ

ಮೈಸೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ವತಿಯಿಂದ ಇತ್ತೀಚೆಗೆ ಮೈಸೂರಿನ ಚಾಮರಾಜ ಅಸೆಂಬ್ಲಿ ಕಚೇರಿಯಲ್ಲಿ ಕಾರ್ಯಕ್ರಮವೊಂದನ್ನು ಆಯೋಜಿಸಲಾಗಿದ್ದು, ಇಲ್ಲಿ ವೃದ್ಧರಿಗೆ ಮತ್ತು ವಿಧವೆಯರಿಗೆ ಪಿಂಚಣಿ ಮಂಜೂರು ಸರ್ಟಿಫಿಕೇಟ್‌ಗಳನ್ನು ವಿತರಿಸಲಾಯಿತು.

ಪ್ರದೇಶದಲ್ಲಿರುವ ವಿಧವೆಯರು ಮತ್ತು ವೃದ್ಧರನ್ನು ಗುರುತಿಸಿದ ಪಕ್ಷದ ಕೇಡರ್‌ಗಳು, ಅವರಿಗೆ ಸಂಬಂಧಿಸಿದ ಸರಕಾರಿ ಕಚೇರಿಯಿಂದ ಪಿಂಚಣಿ ಸರ್ಟಿಫಿಕೇಟ್‌ಗಳು ದೊರೆಯಲು ಬೇಕಾದ ವ್ಯವಸ್ಥೆಯನ್ನು ಮಾಡಿದರು.

ಜಿಲ್ಲಾಧ್ಯಕ್ಷ ಫೈರೋಝ್, ಕಾರ್ಯದರ್ಶಿ ಮತೀನ್ ಬೇಗ್, ಚಾಮರಾಜ ಅಸೆಂಬ್ಲಿ ಅಧ್ಯಕ್ಷ ತಬ್ರೇಝ್ ಸೇಟ್, 39ನೆ ವಾರ್ಡ್ ಸಮಿತಿ ಅಧ್ಯಕ್ಷ ಇಕ್ಬಾಲ್ ಪಾಶ, ಟಿ.ಆರ್.ಅಸೆಂಬ್ಲಿ ಅಧ್ಯಕ್ಷ ಅಲ್ತಾಫ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ■ಕಾವೂರು: 'ಸ್ಕೂಲ್ ಚಲೋ' ಕಾರ್ಯಕ್ರಮ



ಮಂಗಳೂರು: ಎಸ್‌ಡಿಪಿಐ ವತಿಯಿಂದ ಇತ್ತೀಚೆಗೆ ಇಲ್ಲಿನ ಕಾವೂರಿನ ಶಾಂತಿನಗರದ ಫ್ರೀಡಂ ಕಚೇರಿಯಲ್ಲಿ ಪುಸ್ತಕ ವಿತರಣಾ ಕಾರ್ಯಕ್ರಮ ನಡೆಯಿತು.

ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಬ್ದುಲ್ ಜಲೀಲ್ ಕೆ., ಪಾಪ್ಯುಲರ್ ಫ್ರಂಟ್ ನಾಯಕ ರಿಯಾಝ್ ಫರಂಗಿಪೇಟೆ, ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಅಶೋಕ್ ಸ್ಟ್ಯಾನಿ ಡಿ ಸೋಜ, ಕೂಳೂರು ಚರ್ಚ್‌ನ ಉಪಾಧ್ಯಕ್ಷ ಕ್ಲೆವೆರ್ ಡಿ ಸೋಜಾ, ಎಸ್‌ಡಿಪಿಐ ನಾಯಕ ಅಬೂಬಕ್ಕರ್ ಕುಳಾಯಿ, ಶಾಂತಿನಗರ ಬ್ರಾಂಚ್ ಅಧ್ಯಕ್ಷ ಅಬ್ದುಲ್ ಜಬ್ಬಾರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅಶ್ರಫ್ ಕಾವೂರು ಸ್ವಾಗತಿಸಿ, ಇಬ್ರಾಹೀಂ ತ್ವಾಹಾ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಸುಮಾರು 90 ವಿದ್ಯಾರ್ಥಿಗಳಿಗೆ ಕಾರ್ಯಕ್ರಮದಲ್ಲಿ ಪುಸ್ತಕ ವಿತರಿಸಲಾಯಿತು.

# 9 ವರ್ಷ ಜೈಲಿನಲ್ಲಿ ಕಳೆದ ನ್ಯಾಯವಾದಿಗಳು!

## ಇದು ಮೋದಿ ಆಡಳಿತದ ವೈಖರಿ

ಗುಜರಾತ್ ಗಲಭೆಯ ವೇಳೆ ಮೋದಿ ಆಡಳಿತ ಯಾವ ರೀತಿಯಲ್ಲಿ ತನ್ನ ಅಧಿಕಾರವನ್ನು ದುರ್ಬಳಕೆ ಮಾಡಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಅಲ್ಪಸಂಖ್ಯಾತ ವಕೀಲರನ್ನೂ ಅದು ಸುಮ್ಮನೆ ಬಿಟ್ಟಿರಲಿಲ್ಲ.

ಮುಹಮ್ಮದ್ ಹುಸೈನ್ ಕಲೋಟ ಮತ್ತು ರುಲ್ ಮುಹಮ್ಮದ್ ಹಾತಿಲಾ ಎಂಬಿಬ್ಬರು ವಕೀಲರನ್ನು ಪ್ರಭುತ್ವವು ಗೋಧ್ರಾ ರೈಲು ದುರಂತದ ಪ್ರಕರಣದಲ್ಲಿ ಆರೋಪಿಗಳಾಗಿ ಸಾಬರ್ಮತಿ ಸೆಂಟ್ರಲ್ ಜೈಲಿಗೆ ತಳ್ಳಿತು. ಒಂದೊಮ್ಮೆ ತಮ್ಮ ಕಕ್ಷಿದಾರರಾಗಿದ್ದವರೊಂದಿಗೆ ಈ ವಕೀಲರು ಜೈಲನ್ನು ಹಂಚಿಕೊಳ್ಳಬೇಕಾಗಿತ್ತು. 9 ವರ್ಷಗಳ ದೀರ್ಘ ಅವಧಿಯನ್ನು ಜೈಲಿನಲ್ಲಿ ಕಳೆದಿರುವ ಈ ವಕೀಲರು ಈಗ ಬಿಡುಗಡೆಗೊಂಡು ಹೊರಬಂದಿದ್ದು, ತಮ್ಮ ಕಪ್ಪು ಕೋಟನ್ನು ಮತ್ತೆ ತೊಟ್ಟು ಕೋರ್ಟ್‌ನ ಕಲಾಪಗಳಲ್ಲಿ ಪಾಲ್ಗೊಳ್ಳಲು ಆರಂಭಿಸಿದ್ದಾರೆ. ಅವರೀಗ ಕ್ರಿಮಿನಲ್ ಕೇಸುಗಳನ್ನು ವಾದಿಸುತ್ತಿದ್ದಾರೆ. 'ಭಯೋತ್ಪಾದಕರು ಮತ್ತು ಕ್ರಿಮಿನಲ್‌ಗಳು' ಎಂಬ ಹಣೆಪಟ್ಟಿಯಿಂದ ಮುಕ್ತರಾಗುವತ್ತ ಅವರು ಸಾಗುತ್ತಿದ್ದಾರೆ.

ಫೆಬ್ರವರಿ 27, 2002ರಂದು ಗೋಧ್ರಾ ಹತ್ಯಾಕಾಂಡದಲ್ಲಿ ಭಾಗಿಯಾಗಿದ್ದಾರೆಂದು ಆರೋಪಿಸಿ ಮಧ್ಯ ಗುಜರಾತ್‌ನ ಗೋಧ್ರಾ ನಗರದ ಇಬ್ಬರು ಅಡ್ವೊಕೇಟ್‌ಗಳಾದ ಮುಹಮ್ಮದ್ ಹುಸೈನ್ ಕಲೋಟಾ ಮತ್ತು ರುಲ್ ಮುಹಮ್ಮದ್ ಹಾತಿಲಾರನ್ನು ಬಂಧಿಸಲಾಗಿತ್ತು. ಅವರ ವಿರುದ್ಧದ ಆರೋಪಕ್ಕೆ ಪುರಾವೆಯಿಲ್ಲ ಎಂದು ವಿಶೇಷ ನ್ಯಾಯಾಲಯವು ಅವರನ್ನು ಇತ್ತೀಚೆಗೆ ಬಿಡುಗಡೆಗೊಳಿಸಿದೆ. 9 ವರ್ಷಗಳನ್ನು ಕಂಬಿಗಳ ಹಿಂದೆ ಕಳೆದಿರುವ ಈ ನ್ಯಾಯವಾದಿಗಳು ತಮ್ಮ ವೃತ್ತಿಯಲ್ಲಿ ಮತ್ತೆ ತಮ್ಮ ಜೀವನವನ್ನು ಕಟ್ಟಲು ಮುಂದಾಗಿದ್ದಾರೆ ಮತ್ತು ತಮ್ಮ ವೃತ್ತಿಯಲ್ಲಿ ದೃಢತೆಯನ್ನು ಮರಳಿ ಪಡೆಯುತ್ತಿದ್ದಾರೆ.

ಆದರೆ ವೃತ್ತಿಯನ್ನು ಪುನರಾರಂಭಿಸುವುದು ಅವರಿಗೆ ಅಷ್ಟೇನೂ ಸುಲಭವಾಗಿರಲಿಲ್ಲ. ಹಳೆಯ ಕಕ್ಷಿಗಳು ಮತ್ತೆ ಅವರತ್ತ ಬರಲು ಹಿಂದೇಟು ಹಾಕುತ್ತಿದ್ದರು.

ಕಲೋಟಾ ಹೇಳುವಂತೆ, 'ಒಂಬತ್ತು ವರ್ಷಗಳು ಕಳೆದಿದೆ, ನಮ್ಮನ್ನು ಕ್ರಿಮಿನಲ್‌ಗಳಾಗಿ ಪರಿಗಣಿಸಲಾಗಿತ್ತು. ನಾವು ಯಾರಿಗಾಗಿ ಹೋರಾಟ ಮಾಡಿದ್ದೆವೋ, ಅದೇ ಜನರು ನಮ್ಮನ್ನು ಅನುಮಾನದ ಕಣ್ಣಿನಲ್ಲಿ ನೋಡುತ್ತಿದ್ದಾರೆ'. ದಿನಗಳೆದಂತೆ ಜನರು ತಮ್ಮನ್ನು ಅರಿಯಬಹುದು ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

***ಫೆಬ್ರವರಿ 27, 2002ರಂದು ಗೋಧ್ರಾ ಹತ್ಯಾಕಾಂಡದಲ್ಲಿ ಭಾಗಿಯಾಗಿದ್ದಾರೆಂದು ಆರೋಪಿಸಿ ಮಧ್ಯ ಗುಜರಾತ್‌ನ ಗೋಧ್ರಾ ನಗರದ ಇಬ್ಬರು ಅಡ್ವೊಕೇಟ್‌ಗಳಾದ ಮುಹಮ್ಮದ್ ಹುಸೈನ್ ಕಲೋಟಾ ಮತ್ತು ರುಲ್ ಮುಹಮ್ಮದ್ ಹಾತಿಲಾರನ್ನು ಬಂಧಿಸಲಾಗಿತ್ತು. ಅವರ ವಿರುದ್ಧದ ಆರೋಪಕ್ಕೆ ಪುರಾವೆಯಿಲ್ಲ ಎಂದು ವಿಶೇಷ ನ್ಯಾಯಾಲಯವು ಅವರನ್ನು ಇತ್ತೀಚೆಗೆ ಬಿಡುಗಡೆಗೊಳಿಸಿದೆ.***

ಕಲೋಟರ ಮಾತನ್ನು ಒಪ್ಪಿಕೊಂಡ ಹಾತಿಲ, ''ನಾವು 9 ವರ್ಷಗಳನ್ನು ಜೈಲಿನಲ್ಲಿ ಕಳೆದಿದ್ದೇವೆ. ನಮ್ಮೊಂದಿಗೆ ಸಮಕಾಲೀನರಾಗಿದ್ದ ನ್ಯಾಯವಾದಿಗಳು ಜೀವನದಲ್ಲಿ ಮುನ್ನಡೆದಿದ್ದಾರೆ. ವಾಸ್ತವದಲ್ಲಿ ನಾವು ನಮಗಾದ ಗಾಯದಿಂದ ಚೇತರಿಸಿಕೊಳ್ಳಬೇಕಾಗಿದೆ. ನಮ್ಮ ಹಿಂದಿನ ಅನುಭವವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತಿಲ್ಲ' ಎಂದಿದ್ದಾರೆ.

ಈ ಇಬ್ಬರು ನ್ಯಾಯವಾದಿಗಳಲ್ಲಿ ಕಲೋಟಾ ಹಿರಿಯರಾಗಿದ್ದಾರೆ. ಅವರನ್ನು ಹಿಂದಿನಿಂದಲೇ ಅರಿತಿರುವ ಯಾಸ್ಮೀನ್ ಶೇಕ್ ಹೇಳುವಂತೆ, ''ನ್ಯಾಯವಾದಿ ಹಾಗೂ ರಾಜಕೀಯವಾಗಿ ಆತನು ಕ್ರಿಯಾಶೀಲನಾಗಿದ್ದುದರಿಂದ 9 ವರ್ಷಗಳ ಹಿಂದೆ ಆತ ಗೌರವಿಸಲ್ಪಡುತ್ತಿದ್ದನು. ಆತನು ಪರಿಣಾಮಕಾರಿಯಾಗಿ ಕೋರ್ಟ್ ರೂಮ್‌ನಲ್ಲಿ ವಾದಿಸುವುದನ್ನು ಜನರು ನಿರೀಕ್ಷಿಸುತ್ತಾರೆ''.

ಇಬ್ಬರು ಕ್ರಿಮಿನಲ್ ನ್ಯಾಯವಾದಿಗಳನ್ನು ಪ್ರಭುತ್ವವು ಯಾವ ರೀತಿಯಲ್ಲಿ ತಮ್ಮ ವೃತ್ತಿಯಿಂದ ತಡೆಯಿತು ಎಂಬುದಕ್ಕೆ ಇದು ದೃಷ್ಟಾಂತವಾಗಿದೆ. 9 ವರ್ಷಗಳ ನಂತರ ನ್ಯಾಯಾಲಯವು ಇವರನ್ನು ದೋಷ ಮುಕ್ತಿಗೊಳಿಸಿದರೂ, ಕಳೆದು ಹೋಗಿರುವ ಸಮಯ, ಗೌರವಗಳನ್ನು ಅವರಿಗೆ ಹಿಂದಿರುಗಿಸಲು ನ್ಯಾಯಾಲಯಕ್ಕೆ ಸಾಧ್ಯವೇ? ತಪ್ಪು ಪ್ರಕರಣ ದಾಖಲಿಸಿ ಅವರನ್ನು ಜೈಲಿಗಟ್ಟಿದ ಅಧಿಕಾರಿಗಳಿಗೆ ಶಿಕ್ಷೆ ಸಾಧ್ಯವೇ? ಇದು ಕೇವಲ ಇಬ್ಬರು ವಕೀಲರ ಕತೆಯಲ್ಲ. ನಮ್ಮ ದೇಶದಲ್ಲಿ ಹಲವು ವಿದ್ಯಾವಂತ ಮುಸ್ಲಿಮ್ ಯುವಕರನ್ನು ಈ ರೀತಿ ಕ್ರಿಮಿನಲ್/ಭಯೋತ್ಪಾದನೆಯ ಆರೋಪದ ಮೇಲೆ ಜೈಲಿಗಟ್ಟಲಾಗಿದೆ. ಮುಸ್ಲಿಮರಾಗಿ ಹುಟ್ಟಿದ್ದೇ ಅವರು ಮಾಡಿದ ತಪ್ಪಾಗಿತ್ತು.

## ■ ಭ್ರಷ್ಟ ಸಿಪಿಐ (ಎಂ) ನಾಯಕರಿಗೆ ಗ್ರಾಮಸ್ಥರಿಂದ ಥಳಿತ, ಮೆರವಣಿಗೆ

ಬುರ್ದ್ವಾನ್ (ಪ.ಬಂ): ಭ್ರಷ್ಟಾಚಾರದಲ್ಲಿ ಭಾಗಿಯಾದ ಎಂಟು ಮಂದಿ ಸಿಪಿಐ-ಎಂ ನಾಯಕರನ್ನು ಗ್ರಾಮಸ್ಥರು ಸೊಂಟಕ್ಕೆ ಹಗ್ಗ ಬಿಗಿದು ಮೆರವಣಿಗೆ ನಡೆಸಿದ ಘಟನೆ ಇಲ್ಲಿನ ಸರ್ಯೆಗಢದಲ್ಲಿ ಜೂನ್ 4ರಂದು ನಡೆದಿದೆ.

ಸಿಪಿಐ-ಎಂನ ಸ್ಥಳೀಯ ಸಮಿತಿ ಸದಸ್ಯರಾದ ಅಚಿಂದ ಮೊಂಡಾಲ್, ಶ್ರೀಕಾಂತ್ ಘೋಶ್, ಗ್ರಾಮ ಪಂಚಾಯತ್‌ನ ಮಾಜಿ ಕಾರ್ಯದರ್ಶಿ ಜಹಾರ್ ಘೋಶ್, ಗ್ರಾಮ ಪಂಚಾಯತ್ ಸದಸ್ಯರಾದ ಅಶ್ವಿನಿ ಮೊಂಡಾಲ್, ಸುಕುಮಾರ್ ಪ್ರಮಾಣಿಕ್ ಮತ್ತು ಕಾರ್ತಿಕ್ ಮೊಂಡಾಲ್ ಹಾಗೂ ಕಾರ್ಯದರ್ಶಿ ಸುನೀಲ್ ಮುಲ್ಲಿಕ್ ಗ್ರಾಮಸ್ಥರ ಸಭೆ ನಡೆಯುತ್ತಿದ್ದ ಈ ಸಂದರ್ಭದಲ್ಲಿ ಘಟನೆ ನಡೆದಿದೆ ಎನ್ನಲಾಗಿದೆ.

ಎರಡು ವಾರಗಳ ಹಿಂದೆ ಅಭಿವೃದ್ಧಿ ನಿಧಿಯಲ್ಲಿನ 6 ಲಕ್ಷ ರೂ. ಹೇಗೆ ಖರ್ಚಾಗಿದೆ ಎಂಬುದಾಗಿ ವಿವರಣೆ ನೀಡಬೇಕೆಂದು ಬೇಡಿಕೆಯಿಟ್ಟಿದ್ದರು. ಸಿಪಿಐ-ಎಂ ನಾಯಕರು ಶನಿವಾರದಂದು (ಜೂನ್ 4) ವಿವರಣೆ ನೀಡಲಾಗುವುದೆಂದು ಹೇಳಿದ್ದರು.

ಶನಿವಾರದಂದು ಸಭೆಯಲ್ಲಿದ್ದ ಕೆಲವರು ತಕ್ಷಣವೇ ಮಾರ್ಕ್ಸಿಸ್ಟ್ ನಾಯಕರ ಮೇಲೆ ಮುಗಿಬಿದ್ದರು ಮತ್ತು ಅವರ ಸೊಂಟಕ್ಕೆ ಹಗ್ಗದಿಂದ ಬಿಗಿದು, ಅವರನ್ನು ಮನಬಂದಂತೆ ಥಳಿಸುತ್ತಾ ಮೆರವಣಿಗೆ ನಡೆಸಿದರು. ಬಿಡುಗಡೆಗೊಳಿಸುವುದಕ್ಕೆ ಮೊದಲು ಆ ನಾಯಕರಿಂದ ತಪ್ಪೊಪ್ಪಿಗೆ ಪತ್ರಕ್ಕೆ ಸಹಿ ಪಡೆಯಲಾಗಿತ್ತು ಎಂದು ಜಮಾಲ್ ಹೇಳಿದ್ದಾರೆ.

## ■ ಪೋಷಕಾಂಶದ ಕೊರತೆಯಿಂದ ಮಕ್ಕಳ ಸಾವು: ಸುಪ್ರೀಂ ಕಳವಳ



ನವ ದೆಹಲಿ: ಲಕ್ಷಗಟ್ಟಲೆ ಟನ್‌ಗಳಷ್ಟು ದೇಶದ ಗೋದಾಮುಗಳಲ್ಲಿ ಕೊಳೆಯುತ್ತಿರುವ ಸಂದರ್ಭದಲ್ಲಿ ದೇಶದ ವಿವಿಧೆಡೆ ಪ್ರತೀ 2500 ಮಕ್ಕಳು ಆಹಾರದ ಕೊರತೆಯಿಂದ ಸಾವನ್ನಪ್ಪುತ್ತಿರುವುದು ದುರಂತವಾಗಿದೆ ಎಂದು ಸುಪ್ರೀಂ ಕೋರ್ಟ್ ಈ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ಇಂತಹ ದಿಗಿಲುಂಟುಮಾಡುವಂತಹ ಅಂಕಿ ಅಂಶವು ಸುಪ್ರೀಂ ಕೋರ್ಟ್‌ನ ಮುಂದೆ ಮೊದಲ ಬಾರಿಗೆ ತರಲಾಗಿದೆ. ಪ್ರತೀ ವರ್ಷ ಒಟ್ಟು 17.8 ಲಕ್ಷ ಮಕ್ಕಳ ಸಾವನ್ನು ಹೋಲಿಸುವಾಗ ಪ್ರತೀ ವರ್ಷ ಸುಮಾರು 8.8 ಲಕ್ಷ ಮಕ್ಕಳು ಆಹಾರದ ಕೊರತೆಯಿಂದ ಸಾವನ್ನಪ್ಪುತ್ತಾರೆ ಎಂದು ಪಿಯುಸಿಎಲ್‌ನ ಅರ್ಜಿದಾರನ ವಕೀಲ ಕಾಲಿನ್ ಗೋನ್ಸಾಲ್ವೆಸ್ ಕೋರ್ಟ್‌ನಲ್ಲಿ ಹೇಳಿದ್ದಾರೆ.

## ■ ಉತ್ತಮ ಸಮಾಜ ನಿರ್ಮಾಣಕ್ಕೆ ಉತ್ತಮ ಕುಟುಂಬಗಳ ಅಗತ್ಯ: ಅಕ್ಬರ್ ಅಲಿ



ಮಂಗಳೂರು: 'ಇಸ್ಲಾಮನ್ನು ಅರಿಯಿರಿ' ಎಂಬ ರಾಷ್ಟ್ರೀಯ ಅಭಿಯಾನದ ಅಂಗವಾಗಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ವತಿಯಿಂದ ಇತ್ತೀಚೆಗೆ ಇಲ್ಲಿನ ಜಮಿಯ್ಯತುಲ್ ಫಲಾಹ್ ಹಾಲ್‌ನಲ್ಲಿ ಸಾರ್ವಜನಿಕ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಗಿತ್ತು

'ಕುಟುಂಬ ಪುನರ್ ನಿರ್ಮಾಣ' ಎಂಬ ವಿಷಯದ ಮೇಲೆ ಮಾತನಾಡಿದ ಅಕ್ಬರ್ ಅಲಿ, ಯಾರಾದರೂ ತಮ್ಮ ಮನೆಗಳಲ್ಲಿ ಉತ್ತಮ ವಾತಾವರಣವಿರಬೇಕೆಂದು ಭಾವಿಸುವುದಾದರೆ ಅವರ ಕುಟುಂಬಸ್ಥರ ನಡುವೆ ಉತ್ತಮ ನಂಬಿಕೆ, ವಿಶ್ವಾಸವಿರಬೇಕಾಗಿದೆ. ಉತ್ತಮ ಕುಟುಂಬಗಳಿಂದ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದರು.

ತನ್ನ ನೆರೆಯವನು ಹಸಿದಿರುವಾಗ ತಾನು ಹೊಟ್ಟೆ ತುಂಬಾ ಉಂಡು ಮಲಗುವವನು ನಮ್ಮವನಲ್ಲ ಎಂದು ಪ್ರವಾದಿ (ಸ.ಅ) ಹೇಳಿದ್ದಾರೆ ಎಂದು ಅವರು ಹೇಳಿದರು.

ಇಬ್ರಾಹೀಂ ಖಲೀಲ್ ಮಾತನಾಡಿ, ನಮ್ಮ ದೇಶದಲ್ಲಿ 25 ಕೋಟಿಗೂ ಅಧಿಕ ಮುಸ್ಲಿಮರಿದ್ದಾರೆ. ಆದರೆ ಕ್ಷುಲ್ಲಕ ವಿಷಯಗಳಿಗೆ ಸಂಬಂಧಿಸಿದಂತೆ ಅವರು ಹಲವು ವಿಭಾಗಗಳಾಗಿ ಹಂಚಿ ಹೋಗಿದ್ದಾರೆ. ಅವರು ಒಗ್ಗಟ್ಟಾದರೆ ಸಮುದಾಯದ ವಿಧಿಯನ್ನೇ ಬದಲಾಯಿಸಬಹುದಾಗಿದೆ. ಸಮುದಾಯದ ಅಭಿವೃದ್ಧಿಯ ವಿಷಯದಲ್ಲಿ ಮುಸ್ಲಿಮರು ಒಂದೇ ನಾಯಕತ್ವದಡಿಯಲ್ಲಿ ಒಟ್ಟು ಸೇರಬೇಕಾಗಿದೆ ಎಂದು ಅವರು ಕರೆಯಿತ್ತರು.

# ಮುಸ್ಲಿಮರಲ್ಲಿ ಭಿನ್ನತೆ ಸೃಷ್ಟಿಸಲು ಯತ್ನ:

## 'ಯಶಸ್ವಿ ಇಸ್ಲಾಮೀ ಜೀವನ' ಕಾರ್ಯಕ್ರಮದಲ್ಲಿ ಆತೂರು ತಂಙಳ್

ಬೆಳ್ತಂಗಡಿ: 'ಇಸ್ಲಾಮನ್ನು ಅರಿಯಿರಿ' ರಾಷ್ಟ್ರೀಯ ಅಭಿಯಾನದ ಅಂಗವಾಗಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಬೆಳ್ತಂಗಡಿ ವಲಯದ ವತಿಯಿಂದ ಇತ್ತೀಚೆಗೆ ಉಜಿರೆಯ ಹಳೆಪೇಟೆ ಮಸೀದಿ ಬಳಿ 'ಯಶಸ್ವೀ ಇಸ್ಲಾಮಿ ಜೀವನ' ಎಂಬ ಸಾರ್ವಜನಿಕ ಸಂದೇಶ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸೆಯ್ಯದ್ ಇಬ್ರಾಹೀಂ ಅಲ್ ಹಾದಿ ತಂಙಳ್ ಆತೂರು, ಮುಸ್ಲಿಮರ ನಡುವೆ ಭಿನ್ನತೆ ಸೃಷ್ಟಿಸಲು ಯತ್ನಿಸುತ್ತಿರುವ ಕೆಲವು ವರ್ಗಗಳಿಂದಾಗಿ ಮುಸ್ಲಿಮ್ ಸಮುದಾಯ ಮುಜುಗರಕ್ಕೀಡಾಗುತ್ತಿದೆ. ಮುಸ್ಲಿಮರ ನೇತಾರರೆಂದು ಕರೆಸಿಕೊಳ್ಳುವವರೇ ಇದರಲ್ಲಿ ಭಾಗಿಯಾಗುತ್ತಿರುವುದು ಖೇದಕರ ಎಂದರು.

ಮುಸ್ಲಿಮ್ ನಾಮಧಾರಿ ವ್ಯಕ್ತಿಗಳಿಂದಾಗಿ ಸಮಾಜಕ್ಕೆ ಕೆಟ್ಟ ಹೆಸರು ಬರುತ್ತಿದ್ದು, ಸರ್ವ ಮುಸ್ಲಿಮರಿಗೆ ಇಸ್ಲಾಮಿ ಜೀವನ ಶೈಲಿಯ ಬಗ್ಗೆ ಧಾರ್ಮಿಕ ಬೋಧನೆ ನೀಡಿದಾಗ ಸಮಾಜ ಪರಿವರ್ತನೆಯಾಗಲು ಸಾಧ್ಯ ಎಂದು ಪಾಪ್ಯುಲರ್ ಫ್ರಂಟ್ ರಾಜ್ಯಾಧ್ಯಕ್ಷ ಇಲ್ಯಾಸ್ ಮುಹಮ್ಮದ್ ತುಂಬೆ ಹೇಳಿದರು.

ಇಮಾಮ್ಸ್ ಕೌನ್ಸಿಲ್ ದ.ಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಬ್ದುಲ್ಲಾ ಮದನಿ ಇಸ್ಲಾಮಿಕ್ ವ್ಯಕ್ತಿತ್ವ ಎಂಬ ಕಾರ್ಯಕ್ರಮದ ಬಗ್ಗೆ ಮಾತನಾಡಿದರು. ಪಾಪ್ಯುಲರ್ ಫ್ರಂಟ್ ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹನೀಫ್ ಟಿ.ಎಸ್. ಪ್ರಾಸ್ತಾವಿಕವಾಗಿ ಮಾತನಾಡಿದರು.

ಬೆಳ್ತಂಗಡಿ ಖಿಲರ್ ಜುಮಾ ಮಸೀದಿ ಅಧ್ಯಕ್ಷ ದಾವೂದ್ ಹಾಜಿ, ಜಮಿಯ್ಯತುಲ್ ಫಲಾಹ್ ಬೆಳ್ತಂಗಡಿ ಕಾರ್ಯದರ್ಶಿ ಹಕೀಂ ಸುನ್ನತ್‌ಕೆರೆ, ಎಸ್‌ಡಿಪಿಐ ಬೆಳ್ತಂಗಡಿ ವಿಧಾನಸಭಾಧ್ಯಕ್ಷ ಅಕ್ಬರ್, ಗ್ರಾಮ ಪಂಚಾಯತ್ ಸದಸ್ಯ ಇಸ್ಮಾಯೀಲ್ ಮಾಚರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಎಸ್‌ಡಿಪಿಐ ದ.ಕ. ಜಿಲ್ಲಾ ಕಾರ್ಯದರ್ಶಿ ಸಲೀಂ ಗುರುವಾಯನಕೆರೆ ಸಮಾರೋಪ ಭಾಷಣಗೈದರು. ನಿಝಾಂ ಗೇರುಕಟ್ಟೆ ಸ್ವಾಗತಿಸಿ, ಅಬ್ದುಲ್ ರಹ್ಮಾನ್ ವಂದಿಸಿದರು ಮತ್ತು ಅಬ್ದುಲ್ ಖಾದರ್ ನಾವೂರು ಕಾರ್ಯಕ್ರಮ ನಿರೂಪಿಸಿದರು.

## ■ ಐಇಸಿ ವತಿಯಿಂದ ಕಟ್ಟಡ ಕಾರ್ಮಿಕರಿಗೆ ಮಾಹಿತಿ ಶಿಬಿರ




ಮಂಗಳೂರು: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಸರಕಾರದಿಂದ ಸಿಗುವ ವಿವಿಧ ಸವಲತ್ತುಗಳ ಬಗ್ಗೆ ಇತ್ತೀಚೆಗೆ ಇನ್‌ಫಾರ್ಮೇಶನ್ ಆ್ಯಂಡ್ ಎಂಪವರ್‌ಮೆಂಟ್ ಸೆಂಟರ್‌ನಲ್ಲಿ ಮಾಹಿತಿ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

ದ.ಕ.ಜಿಲ್ಲಾ ಉಪವಿಭಾಗದ ಕಾರ್ಮಿಕ ಅಧಿಕಾರಿ ಹೆಚ್. ಗೋಪಾಲ ಗೌಡರವರು ಕಾರ್ಮಿಕರಿಗೆ ಸರಕಾರದಿಂದ ಸಿಗುವ ಸವಲತ್ತುಗಳು ಮತ್ತು ಪ್ರಯೋಜನದ ಬಗ್ಗೆ ಮಾಹಿತಿ ನೀಡಿದರು. ಕ್ರಿಯೇಟಿವ್ ಫೌಂಡಶನ್ ಮಂಗಳೂರು ಇದರ ಉಪಾಧ್ಯಕ್ಷ ನಝೀರ್ ಅಹ್ಮದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಅತಿಥಿಗಳಾಗಿ ಎಸ್‌ಡಿಪಿಐ ದ.ಕ.ಜಿಲ್ಲಾ ಅಧ್ಯಕ್ಷ ಜಲೀಲ್ ಕೆ., ಕ್ರಿಯೇಟೀವ್ ಫೌಂಡೇಶನ್‌ನ ಕಾರ್ಯದರ್ಶಿ ಎ.ಎಂ.ಅತಾವುಲ್ಲಾ ಮತ್ತಿತರರು ಉಪಸ್ಥಿತರಿದ್ದರು. ಇನ್‌ಫಾರ್ಮೇಶನ್ ಸೆಂಟರ್‌ನ ಮೇಲ್ವಿಚಾರಕ ಅಕ್ಬರ್ ಅಲಿ ಸ್ವಾಗತಿಸಿ, ಮುಖ್ಯ ಮಾಹಿತಿದಾರ ಹಂಝ ವಂದಿಸಿದರು ಮತ್ತು ಅಬೂಬಕರ್ ಸಫ್ವಾನ್ ಕಾರ್ಯಕ್ರಮ ನಿರೂಪಿಸಿದರು.

## ■ ಮೈಸೂರು: ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಎಸ್‌ಡಿಪಿಐಯಿಂದ ಸನ್ಮಾನ

ಮೈಸೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ವತಿಯಿಂದ ಇತ್ತೀಚೆಗೆ ಸಿ.ಆರ್.ಅಸೆಂಬ್ಲಿಯಲ್ಲಿ ಡಿಸ್ಟಿಂಕ್ಷನ್ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಜಿಲ್ಲಾ ಕಾರ್ಯದರ್ಶಿ ಮತೀನ್ ಬೇಗ್, ಮಿಲ್ಲಿ ಕೌನ್ಸಿಲ್‌ನ ಕರ್ನಾಟಕ ರಾಜ್ಯಾಧ್ಯಕ್ಷ ಮುಫ್ತಿ ಇಫ್ತಿಖಾರ್ ಅಹ್ಮದ್ ಖಾಸ್ಮಿ, ಎಸ್‌ಡಿಪಿಐ 39ನೆ ವಾರ್ಡ್ ಅಧ್ಯಕ್ಷ ಇಕ್ಬಾಲ್ ಪಾಶ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.